ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೧೫

**ಪಟ್ಟಿ – ೦೮**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೊಂಭತ್ತನೆ ಅಧಿವೇಶನ**

**ಗುರುವಾರ, ದಿನಾಂಕ : ೨೭ನೇ ಆಗಸ್ಟ್, ೨೦೨೬**

---

## ಸಮೂಹ – IV

೧. ಮುಖ್ಯಮಂತ್ರಿಗಳು

೨. ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು

೩. ನಗರಾಭಿವೃದ್ಧಿ ಸಚಿವರು

೪. ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು

೫. ಅಬಕಾರಿ ಸಚಿವರು

೬. ಯೋಜನೆ ಮತ್ತು ಸಾಂಖ್ಯಿಕ ಸಚಿವರು

---

## GBA ವ್ಯಾಪ್ತಿಯಲ್ಲಿ ಫುಟ್‌ಪಾತ್‌ಗಳ ಅತಿಕ್ರಮಣ ಹಾಗೂ ಅನಧಿಕೃತ ವಾಹನ ನಿಲುಗಡೆ ತೆರವು ಮತ್ತು ಶಾಶ್ವತ ನಿಯಂತ್ರಣ ಕ್ರಮಗಳ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೫ (೧೧೯೨) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ (GBA) ವ್ಯಾಪ್ತಿಯಲ್ಲಿ ಫುಟ್ಪಾತ್ ಗಳ ಮೇಲಿನ ಅನಧಿಕೃತ ಅಂಗಡಿಗಳು, ತಳ್ಳುಗಾಡಿಗಳು. ಕಟ್ಟಡ ಸಾಮಗ್ರಿಗಳು ಹಾಗೂ ಇತರೆ ಅತಿಕ್ರಮಣಗಳನ್ನು ತೆರವುಗೊಳಿಸಲು ಇತ್ತೀಚೆಗೆ ಕೈಗೊಂಡಿರುವ ಕಾರ್ಯಾಚರಣೆಯ ವಿವರವೇನು ; ಇದುವರೆಗೆ ಎಷ್ಟು ಸ್ಥಳಗಳಲ್ಲಿ ತೆರವು ಕಾರ್ಯಾಚರಣೆ ನಡೆಸಲಾಗಿದೆ ಹಾಗೂ ಇದಕ್ಕಾಗಿ ಕೈಗೊಂಡಿರುವ ಕ್ರಮಗಳೇನು ;

(ಆ) GBA ವತಿಯಿಂದ ಫುಟ್‌ಪಾತ್‌ಗಳ ಮೇಲಿನ ಅನಧಿಕೃತ ಅಂಗಡಿಗಳು, ತಳ್ಳುಗಾಡಿಗಳು. ಕಟ್ಟಡ ಸಾಮಗ್ರಿಗಳು ಹಾಗೂ ಇತರೆ ಅತಿಕ್ರಮಣಗಳನ್ನು ತೆರವುಗೊಳಿಸಿದ ನಂತರ ಕೆಲವೇ ದಿನಗಳಲ್ಲಿ ಅದೇ ಸ್ಥಳಗಳಲ್ಲಿ ಮರು ಅತಿಕ್ರಮಣವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇದನ್ನು ತಡೆಗಟ್ಟಲು ಯಾವ ಶಾಶ್ವತ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಇ) ಫುಟ್‌ಪಾತ್‌ಗಳನ್ನು ಪಾದಚಾರಿಗಳ ಸುಗಮ ಸಂಚಾರಕ್ಕೆ ಮಾತ್ರ ಬಳಸುವಂತೆ ಖಚಿತಪಡಿಸಿಕೊಳ್ಳಲು GBA ವ್ಯಾಪ್ತಿಯಲ್ಲಿ ವಲಯವಾರು/ವಾರ್ಡ್‌ವಾರು ನಿರಂತರ ಮೇಲ್ವಿಚಾರಣೆ ಮತ್ತು ತಪಾಸಣಾ ವ್ಯವಸ್ಥೆ ಜಾರಿಯಲ್ಲಿದೆಯೇ ; ಈ ಕಾರ್ಯದಲ್ಲಿ ನಿರ್ಲಕ್ಷ್ಯ ತೋರುವ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಇದುವರೆಗೆ ಕ್ರಮ ಕೈಗೊಳ್ಳಲಾಗಿದೆಯೇ ;

(ಈ) ಬೆಂಗಳೂರು ನಗರದ ಪ್ರಮುಖ ರಸ್ತೆಗಳು, ಮಾರುಕಟ್ಟೆ ಪ್ರದೇಶಗಳು, ಶಾಲಾ–ಕಾಲೇಜುಗಳು, ಆಸ್ಪತ್ರೆಗಳು ಹಾಗೂ ಸಾರ್ವಜನಿಕ ಸ್ಥಳಗಳ ಸುತ್ತಮುತ್ತ ದೀರ್ಘಕಾಲದಿಂದ ನಿಲುಗಡೆ ಮಾಡಿರುವ ವಾಹನಗಳಿಂದ ಫುಟ್‌ಪಾತ್ ಮತ್ತು ರಸ್ತೆ ಸಂಚಾರಕ್ಕೆ ತೊಂದರೆಯಾಗುತ್ತಿರುವುದನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ತೆರವುಗೊಳಿಸಿದ ವಾಹನಗಳನ್ನು ಮರು ನಿಲುಗಡೆ ಮಾಡುವವರ ವಿರುದ್ಧ ಯಾವ ರೀತಿಯ ದಂಡಾತ್ಮಕ ಕ್ರಮ ಜಾರಿಯಲ್ಲಿದೆ ;

(ಉ) ಫುಟ್‌ಪಾತ್ ಅತಿಕ್ರಮಣ ಹಾಗೂ ಅನಧಿಕೃತ ವಾಹನ ನಿಲುಗಡೆಯನ್ನು ಶಾಶ್ವತವಾಗಿ ತಡೆಗಟ್ಟಲು CCTV ನಿಗಾವ್ಯವಸ್ಥೆ, ನಿಯಮಿತ ಮೊಬೈಲ್ ಪೆಟ್ರೋಲಿಂಗ್, ಸಾರ್ವಜನಿಕ ದೂರು ವ್ಯವಸ್ಥೆ ಹಾಗೂ ಅಧಿಕಾರಿಗಳ ಜವಾಬ್ದಾರಿಯುನ್ನು ನಿಗದಿಪಡಿಸುವಂತಹ ಸಮಗ್ರ ವ್ಯವಸ್ಥೆಯನ್ನು GBA ವ್ಯಾಪ್ತಿಯಲ್ಲಿ ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ ? (ಕಾಲಮಿತಿ ಮತ್ತು ಕಾರ್ಯಯೋಜನೆ ವಿವರ ಒದಗಿಸುವುದು)

## ಬೀದಿ ದೀಪಗಳ ಅಸಮರ್ಪಕ ನಿರ್ವಹಣೆ ಕುರಿತು

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೬ (೧೦೯೧) ಮಾನ್ಯ ಪೌರಾಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದ ಮಹಾನಗರ ಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬೀದಿ ದೀಪಗಳ ಅಸಮರ್ಪಕ ನಿರ್ವಹಣೆ, ದುರಸ್ತಿ ವಿಳಂಬ ಅಥವಾ ದೀಪಗಳು ಕಾರ್ಯನಿರ್ವಹಿಸದಿರುವ ಕುರಿತು ಸಾರ್ವಜನಿಕರಿಂದ ಎಷ್ಟು

ದೂರುಗಳು ದಾಖಲಾಗಿವೆ ; ಜಿಲ್ಲಾವಾರು ಹಾಗೂ ನಗರ ಸ್ಥಳೀಯ ಸಂಸ್ಥೆವಾರು ವಿವರ ನೀಡುವುದು ; ಈ ದೂರುಗಳಲ್ಲಿ ಎಷ್ಟು ದೂರುಗಳನ್ನು ಪರಿಹರಿಸಲಾಗಿದೆ ;

(ಆ) ನಗರ ಪ್ರದೇಶಗಳಲ್ಲಿ ಅಪರಾಧ ಸೂಕ್ಷ್ಮ ಪ್ರದೇಶಗಳು, ಮಹಿಳೆಯರು ಹಾಗೂ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸಂಚರಿಸುವ ಸ್ಥಳಗಳು, ಪ್ರಮುಖ ರಸ್ತೆ, ಬಸ್ ನಿಲ್ದಾಣ, ಮಾರುಕಟ್ಟೆ ಹಾಗೂ ವಸತಿ ಪ್ರದೇಶಗಳಲ್ಲಿ ಸಮರ್ಪಕ ಬೆಳಕಿನ ವ್ಯವಸ್ಥೆ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಇಂತಹ ಪ್ರದೇಶಗಳನ್ನು ಗುರುತಿಸಿ ಆದ್ಯತೆಯ ಮೇರೆಗೆ ಹೊಸ ಬೀದಿ ದೀಪಗಳನ್ನು ಅಳವಡಿಸಲು ಹಾಗೂ ಹಳೆಯ ದೀಪಗಳನ್ನು ಬದಲಾಯಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಬೀದಿ ದೀಪಗಳ ನಿರ್ವಹಣೆಯನ್ನು ಗುತ್ತಿಗೆಗೆ ನೀಡಿರುವ ಮಹಾನಗರ ಪಾಲಿಕೆಗಳು ಮತ್ತು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಗುತ್ತಿಗೆದಾರರು ನಿಗದಿತ ಅವಧಿಯಲ್ಲಿ ದುರಸ್ತಿ ಕಾರ್ಯ ಕೈಗೊಳ್ಳದಿದ್ದರೆ ದಂಡ ವಿಧಿಸುವುದು, ಪಾವತಿ ತಡೆಹಿಡಿಯುವುದು ಅಥವಾ ಗುತ್ತಿಗೆ ರದ್ದುಪಡಿಸುವಂತಹ ವ್ಯವಸ್ಥೆ ಜಾರಿಯಲ್ಲಿದೆಯೇ ; ಕಳೆದ ಎರಡು ವರ್ಷಗಳಲ್ಲಿ ನಿರ್ಲಕ್ಷ್ಯ ತೋರಿದ ಗುತ್ತಿಗೆದಾರರ ವಿರುದ್ಧ ಕೈಗೊಂಡ ಕ್ರಮಗಳ ವಿವರ ನೀಡುವುದು ;

(ಈ) ನಗರ ಪ್ರದೇಶಗಳಲ್ಲಿ ಬೀದಿ ದೀಪಗಳ ದೋಷವನ್ನು ೨೪ ಗಂಟೆಯೊಳಗೆ ಗುರುತಿಸಿ, ಗರಿಷ್ಠ ೨೪-೪೮ ಗಂಟೆಗಳೊಳಗೆ ದುರಸ್ತಿ ಮಾಡುವಂತೆ ಕೇಂದ್ರೀಕೃತ ದೂರು ನಿರ್ವಹಣಾ ವ್ಯವಸ್ಥೆ (Centralised Complaint & Monitoring System) ಹಾಗೂ ಪ್ರತಿ ನಗರ ಸ್ಥಳೀಯ ಸಂಸ್ಥೆಯಲ್ಲಿ ತಾಂತ್ರಿಕ ನಿರ್ವಹಣಾ ತಂಡವನ್ನು ರಚಿಸುವ ಬಗ್ಗೆ ಸರ್ಕಾರ ಯೋಜನೆ ರೂಪಿಸಿದೆಯೇ ; ಸಂಬಂಧ ಕ್ರಮ ಕೈಗೊಳ್ಳುವುದೇ ?

# ಬೆಂಗಳೂರು ಮೆಟ್ರೋ ರೈಲು ನಿಗಮ (BMRCL) ದಲ್ಲಿ ಸಿಬ್ಬಂದಿಗಳ ನೇಮಕಾತಿ, ಜ್ಯೇಷ್ಠತೆ, ಬಡ್ತಿ ನಿಯಮಗಳು ಹಾಗೂ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಕುರಿತು

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೭ (೧೦೯೩) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಮೆಟ್ರೋ ರೈಲು ನಿಗಮ (BMRCL) ದಲ್ಲಿ ಹಾಲಿ ಕಾರ್ಯನಿರ್ವಸುತ್ತಿರುವ ಕಾಯಂ ಸಿಬ್ಬಂದಿ ಮತ್ತು ನೇರ ಗುತ್ತಿಗೆ ಸಿಬ್ಬಂದಿಯ ಸಂಖ್ಯೆ ಎಷ್ಟು ; (ಸಿಬ್ಬಂದಿ ಹೆಸರು ಹುದ್ದೆಯ ಪದನಾಮ, ವೇತನ ಶ್ರೇಣಿ ಹಾಲಿ ಮಾಸಿಕ ಪಡೆಯುತ್ತಿರುವ ವೇತನದೊಂದಿಗೆ ಜ್ಯೇಷ್ಠತೆವಾರು ಸಂಪೂರ್ಣ ವಿವರವನ್ನು ನೀಡುವುದು)

(ಆ) ಸಂಸ್ಥೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ನೌಕರರಿಗೆ ಬಡ್ತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಕ್ಕೆ ಕಾರಣಗಳೇನು ; (ವಿವರವಾದ ಮಾಹಿತಿ ನೀಡುವುದು) ನಿಗಮದಲ್ಲಿ ಸಿಬ್ಬಂದಿಗಳು ಬಡ್ತಿ ಪಡೆಯಲು ಲಿಖಿತ ಪರೀಕ್ಷೆಯಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾಗಬೇಕೆಂಬ ನಿಯಮವನ್ನು ಜಾರಿಗೊಳಿಸಿರುವುದು ಕ್ರಮ ಬದ್ದವಾಗಿದೆಯೇ ;

(ಇ) ನಿಗಮದಲ್ಲಿ ಕಾರ್ಮಿಕ ಹುದ್ದೆಗಳನ್ನು ಕನ್ನಡದವರಿಗೆ ನೀಡಿ ಮೇಲ್ವಿಚಾರಕರು ಹಾಗೂ ಇನ್ನಿತರ ಹುದ್ದೆಗಳನ್ನು ಬೇರೆ ರಾಜ್ಯದವರಿಗೆ ನೀಡಿರುವುದು ಕ್ರಮಬದ್ಧವಾಗಿದೆಯೇ ;

(ಈ) ಸರ್ಕಾರವು ಯಾವ ಕಾಲಮಿತಿಯಲ್ಲಿ ಬಡ್ತಿ ಲಿಖಿತ ಪರೀಕ್ಷೆಯನ್ನು ರದ್ದುಪಡಿಸಿ ಹಿಂದಿನ ಜ್ಯೇಷ್ಠತವಾರು ಸಿಬ್ಬಂದಿಗಳಿಗೆ ಬಡ್ತಿ ನೀಡಲಾಗುವುದು ? (ವಿವರವಾದ ಮಾಹಿತಿ ನೀಡುವುದು)

## KTTP ಕಾಯ್ದೆಯಡಿ ೪G ವಿನಾಯಿತಿ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೮ (೧೧೯೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) KTTP ಅಧಿನಿಯಮದಲ್ಲಿ ಬರುವ ೪G ವಿನಾಯಿತಿ ಅಂದರೇನು "ಇದು ಯಾವುದಕ್ಕೆ ಸಂಬಂಧಿಸಿದೆ" ಇದನ್ನು ಪಡೆಯಲು ಹಾಲಿ ಇರುವ ಮಾರ್ಗಸೂಚಿಗಳೇನು ;

(ಆ) ಇಲ್ಲಿಯವರೆಗೆ ಸರ್ಕಾರದ ನಿಗಮ ಮತ್ತು ಸಂಸ್ಥೆಗಳು ಎಷ್ಟು ಮೊತ್ತದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ೪G ವಿನಾಯಿತಿ ಪಡೆದಿವೆ ; (ವಿವರವಾಗಿ ನಿಗಮ ಸಂಸ್ಥೆಯ ಹೆಸರು ವಿನಾಯಿತಿ ಪಡೆದ ಮೊತ್ತದೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಇ) ಹೊಸ ಸರ್ಕಾರ ಬಂದಾಗಿನಿಂದ ಇಲ್ಲಿಯವರೆಗೆ ಯಾವ ಯಾವ ಕಾಮಗಾರಿಗಳನ್ನು ೪G ವಿನಾಯಿತಿ ಅಡಿ ಮಂಜೂರು ಮಾಡಲಾಗಿದೆ ? (ವಿವರವಾಗಿ ಕಾಮಗಾರಿಯ ಹೆಸರು, ಕಾಮಗಾರಿಯು ಅನುಷ್ಠಾನ, ಕಾಮಗಾರಿ ಕೈಗೊಂಡ ವರ್ಷದೊಂದಿಗೆ, ವರ್ಷವಾರು ವಿವರವಾದ ಮಾಹಿತಿ ನೀಡುವುದು)

# ನಗರಾಭಿವೃದ್ಧಿ ಪ್ರಾಧಿಕಾರಗಳು ಹಾಗೂ ನಗರ ಯೋಜನಾ ಪ್ರಾಧಿಕಾರಗಳ ಕಾರ್ಯನಿರ್ವಹಣೆ ಬಗ್ಗೆ

**ಶ್ರೀ ಡಿ. ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೭೯ (೧೧೯೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಯೋಜನೆಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಳ್ಳುವ ಅಧಿಕಾರಿ ಯಾರು ; ನಗರ ಯೋಜನೆಗೆ ಸಂಬಂಧಿಸಿದಂತೆ ಪ್ರಾಧಿಕಾರದ ಆಯುಕ್ತರ ಕರ್ತವ್ಯವೇನು ; ಪ್ರಾಧಿಕಾರದ ಆಯುಕ್ತರುಗಳು ನಗರ ಯೋಜನೆಗೆ ಸಂಬಂಧಿಸಿದಂತೆ ನಿರ್ಣಯಗಳನ್ನು ಕೈಗೊಳ್ಳಲು ತಾಂತ್ರಿಕವಾಗಿ ನೈಪುಣ್ಯತೆ ಹೊಂದಿರುವರೇ ?

(ಆ) ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರ ನಿಯೋಜನೆಗೆ ಸಂಬಂಧಿಸಿದಂತೆ ಕರ್ನಾಟಕ ಆಡಳಿತ ಸುಧಾರಣಾ ಆಯೋಗ–೨ ರ ವರದಿ ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ ; ಸಲ್ಲಿಸಲಾಗಿದ್ದಲ್ಲಿ, ಸದರಿ ವರದಿಯ ಶಿಫಾರಸ್ಸುಗಳಿಗೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕರ್ನಾಟಕ ಆಡಳಿತ ಸುಧಾರಣಾ ಆಯೋಗ–೨ ರ ವರದಿಯನ್ವಯ ನಗರ ಯೋಜನೆಯಲ್ಲಿ ಸ್ನಾತಕೋತ್ತರ ಪದವಿಯೊಂದಿಗೆ ನಗರ ಯೋಜನೆ ವಿಷಯದಲ್ಲಿ ಪರಿಣಿತಿ/ನೈಪುಣ್ಯತೆ ಹೊಂದಿರುವ ಮತ್ತು ರಾಜ್ಯದ ನಗರ ಯೋಜನಾ ಪ್ರಾಧಿಕಾರಗಳಲ್ಲಿ ಸದಸ್ಯ ಕಾರ್ಯದರ್ಶಿಯಾಗಿ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರಗಳಲ್ಲಿ ನಗರ ಯೋಜನಾ ಸದಸ್ಯರಾಗಿ ಕಾರ್ಯನಿರ್ವಹಿಸಿ ಅನುಭವವುಳ್ಳ ನಗರ ಯೋಜನಾ ಉಪನಿರ್ದೇಶಕರು ಹಾಗೂ ಮೇಲ್ಪಟ್ಟ ಅಧಿಕಾರಿಗಳನ್ನು ಪ್ರಾಧಿಕಾರದ ಆಯುಕ್ತರನ್ನಾಗಿ ನಿಯೋಜಿಸಲು ಸರ್ಕಾರಕ್ಕೆ ಇರುವ ತೊಡಕುಗಳೇನು ?

# ರಾಜ್ಯದ ಐಟಿ ಉದ್ಯೋಗಿಗಳ ವಜಾ ಹಾಗೂ Severance Pay ಮೇಲಿನ ತೆರಿಗೆ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೮೦ (೧೧೪೩) ಮಾನ್ಯ ಗೃಹ ,ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿವಿಧ ಐಟಿ ಕಂಪನಿಗಳು ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸುತ್ತಿರುವ ಸಂದರ್ಭದಲ್ಲಿ, ಉದ್ಯೋಗ ಕಳೆದುಕೊಂಡವರಿಗೆ ಕಂಪನಿಗಳು ನೀಡುವ Severance Pay/ Compensation Package ಮೇಲೆಯೂ ಆದಾಯ ತೆರಿಗೆ ವಿಧಿಸಲಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಕೆಲಸ ಕಳೆದುಕೊಂಡ ಸಂದರ್ಭದಲ್ಲಿ ಉದ್ಯೋಗಿಗೆ ತಾತ್ಕಾಲಿಕ ಆರ್ಥಿಕ ಭದ್ರತೆ ಒದಗಿಸುವ ಉದ್ದೇಶದಿಂದ ನೀಡಲಾಗುವ Severance Pay ಮೇಲೆ ತೆರಿಗೆ ವಿಧಿಸುವುದರಿಂದ ಉದ್ಯೋಗಿಗಳಿಗೆ ಉಂಟಾಗುತ್ತಿರುವ ಆರ್ಥಿಕ ಹೊರೆಯ ಕುರಿತು ಸರ್ಕಾರದಗಮನಕ್ಕೆ ಬಂದಿದೆಯೇ ;

(ಇ) ಇದ್ದಲ್ಲಿ, ಈ ಮೊತ್ತಕ್ಕೆ ತೆರಿಗೆ ವಿನಾಯಿತಿ ಅಥವಾ ತೆರಿಗೆ ಭಾರವನ್ನು ಕಡಿಮೆ ಮಾಡುವ ಕುರಿತು ಕೇಂದ್ರ ಸರ್ಕಾರದೊಂದಿಗೆ ಸಮಾಲೋಚನೆ ನಡೆಸಲು ರಾಜ್ಯ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಐಟಿ ಕ್ಷೇತ್ರದಲ್ಲಿ ಉದ್ಯೋಗ ಕಳೆದುಕೊಂಡವರ ಸಂಖ್ಯೆ, ಅವರಿಗೆ ಪಾವತಿಸಲಾದ Severance Pay ಮೊತ್ತ ಹಾಗೂ ಅದರ ಮೇಲೆ ಪಾವತಿಸಲಾದ ತೆರಿಗೆಗೆ ಸಂಬಂಧಿಸಿದ  ಸಂಪೂರ್ಣ ಮಾಹಿತಿ ಒದಗಿಸುವುದು ?

## ಮಹಿಳೆಯರ ಮೇಲಿನ ದೌರ್ಜನ್ಯ, ಅತ್ಯಾಚಾರ ಹಾಗೂ ಗೃಹ ಹಿಂಸೆ ಪ್ರಕರಣಗಳ ಕುರಿತು

**ಶ್ರೀ ಕೆ. ಅಬ್ದುಲ್ ಜಬ್ಬಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೮೧ (೧೧೪೭) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ,ಅತ್ಯಾಚಾರ ಹಾಗೂ ಗೃಹ ಹಿಂಸೆ ಪ್ರಕರಣಗಳು ಜಿಲ್ಲಾವಾರು ಎಷ್ಟು ದಾಖಲಾಗಿವೆ ;

(ಆ) ಅವುಗಳಲ್ಲಿ ಎಷ್ಟು ಪ್ರಕರಣಗಳು ತನಿಖೆಯಲ್ಲಿವೆ ; ಎಷ್ಟು ಪ್ರಕರಣಗಳಲ್ಲಿ ದೋಷಾರೋಪಣಾ ಪತ್ರ ಸಲ್ಲಿಸಲಾಗಿದೆ ಹಾಗೂ ಎಷ್ಟು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಮಹಿಳೆಯರ ಮೇಲಿನ ಅಪರಾಧಗಳನ್ನು ತಡೆಗಟ್ಟಲು ಸರ್ಕಾರ ಯಾವ ವಿಶೇಷ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ಜಾರಿಗೊಳಿಸಿದೆ ;

(ಈ) ಶಾಲೆ, ಕಾಲೇಜು ಹಾಗೂ ಉದ್ಯೋಗ ಸ್ಥಳಗಳಲ್ಲಿ ಮಹಿಳೆಯರ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲು ಸರ್ಕಾರ ಯಾವ ಯೋಜನೆಗಳನ್ನು ಜಾರಿಗೊಳಿಸಿದೆ ; ಅದಕ್ಕೆ ವೆಚ್ಚ ಮಾಡಲಾದ ಅನುದಾನದ ಮೊತ್ತವೆಷ್ಟು ;

(ಉ) ರಾಜ್ಯದಲ್ಲಿ ಮಹಿಳಾ ಪೊಲೀಸ್ ಠಾಣೆಗಳ ಸಂಖ್ಯೆ ಎಷ್ಟು ; ಪ್ರತಿಯೊಂದು ಜಿಲ್ಲೆಯಲ್ಲಿ ಮಹಿಳಾ ಪೊಲೀಸ್ ಠಾಣೆ ಸ್ಥಾಪಿಸಲು ಸರ್ಕಾರದ ಉದ್ದೇಶವಿದೆಯೇ ?

## ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಕೈಗೊಳ್ಳಲಾದ ಕಾಮಗಾರಿ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೯೮೨ (೧೧೮೦) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ೨೦೨೫-೨೬ನೇ ಆರ್ಥಿಕ ವರ್ಷದಲ್ಲಿ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಸರ್ಕಾರದಿಂದ ಎಷ್ಟು ಹಣ ಮಂಜೂರಾಗಿದೆ ;

(ಆ) ೨೦೨೫-೨೬ನೇ ಸಾಲಿನಲ್ಲಿ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಎಷ್ಟು ರಾಜಸ್ವ ಸಂಗ್ರಹಣೆಯಾಗಿದೆ ;

(ಇ) ೨೦೨೫-೨೬ನೇ ಸಾಲಿನಲ್ಲಿ ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಯಾವ ಯಾವ ಕಾಮಗಾರಿ/ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ;

(ಈ) ಸದರಿ ಕಾಮಗಾರಿ/ಯೋಜನೆಗಳಿಗೆ ಖರ್ಚಾಗಿರುವ ಮೊತ್ತವೆಷ್ಟು ?

## ಅಕ್ರಮ ಮದ್ಯ ಮಾರಾಟ ವಿರುದ್ಧ ಕ್ರಮವಹಿಸುವ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೯೮೩ (೧೧೮೧) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಿಂಧನೂರು ತಾಲ್ಲೂಕಿನಲ್ಲಿ ಪ್ರಸ್ತುತ ಎಷ್ಟು ಮದ್ಯದಂಗಡಿಗಳಿಗೆ ಪರವಾನಗಿ ನೀಡಲಾಗಿದೆ ;

(ಆ) ಪರವಾನಗಿ ಪಡೆದ ಮದ್ಯದಂಗಡಿಗಳು ನಿಗದಿತ ಸಮಯ ಮತ್ತು ನಿಯಮಗಳನ್ನು ಪಾಲಿಸುತ್ತಿವೆಯೇ ;

(ಇ) ಸಿಂಧನೂರು ತಾಲ್ಲೂಕಿನ ವಿವಿಧ ಗ್ರಾಮಗಳಲ್ಲಿ ಅಕ್ರಮ ಮದ್ಯ ಮಾರಾಟ ಮಾಡುತ್ತಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಕಳೆದ ೩ ವರ್ಷಗಳಲ್ಲಿ ನಿಯಮ ಉಲ್ಲಂಘಿಸಿದ ಮದ್ಯದಂಗಡಿಗಳ ವಿರುದ್ಧ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಉ) ಶಾಲೆ, ಕಾಲೇಜು, ದೇವಾಸ್ಥಾನ ಹಾಗೂ ಸಾರ್ವಜನಿಕ ಸ್ಥಳಗಳ ಸಮೀಪ ಮದ್ಯದಂಗಡಿಗಳಿರುವ ಬಗ್ಗೆ ದೂರುಗಳಿವೆಯೇ ?

## ಸಿಂಧನೂರು ನಗರದ ೨೪ X ೭ ಕುಡಿಯುವ ನೀರಿನ ಯೋಜನೆ ಕಳಪೆಯಿಂದ ಕೂಡಿರುವ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :-**

೯೮೪ (೧೧೮೨) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಸಿಂಧನೂರು ನಗರದ ನಿವಾಸಿಗಳಿಗೆ ೨೪ x ೭ ಕುಡಿಯುವ ನೀರಿನ ಕಾಮಗಾರಿ ಯೋಜನೆಯ ಗುಣಮಟ್ಟ ಹಾಗೂ ವಾಸ್ತವಾಂಶಗಳನ್ನು ಕುರಿತು ಪರಿಶೀಲಿಸಿ, ಅಧಿಕಾರಿಗಳಿಂದ ವರದಿ ಪಡೆಯಲಾಗಿದೆಯೇ ;

(ಆ) ಪಡೆದಿದ್ದಲ್ಲಿ, ಸಿಂಧನೂರು ನಗರದ ನಿವಾಸಿಗಳಿಗೆ ೨೪x೭ ಕುಡಿಯುವ ನೀರಿನ ಪೂರೈಕೆ ಸಮರ್ಪಕವಾಗಿ ಮಾಡಲಾಗುತ್ತಿರುವ ಕುರಿತು ವರದಿಯಲ್ಲಿ ಉಲ್ಲೇಖವಿದೆಯೇ ;

(ಇ) ೨೪x೭ ಕುಡಿಯುವ ನೀರಿನ ಕಾಮಗಾರಿ ಯೋಜನೆಯ ನ್ಯೂನ್ಯತೆಗಳನ್ನು ಸರಿಪಡಿಸಿ, ಬಾಕಿ ಕಾಮಗಾರಿಗಳನ್ನು ಪೂರ್ಣಗೊಳಿಸಿ ಯಾವ ಕಾಲಮಿತಿಯೊಳಗೆ ನಗರದ ನಿವಾಸಿಗಳಿಗೆ ಕುಡಿಯುವ ನೀರನ್ನು ಪೂರೈಕೆ ಮಾಡಲಾಗುವುದು ?

## ಸರ್ಕಾರಿ ನೌಕರರ ವಿರುದ್ಧ ಲೋಕಾಯುಕ್ತದಲ್ಲಿ ದಾಖಲಾದ ಪ್ರಕರಣಗಳ ಬಗ್ಗೆ

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) :–**

೯೮೫ (೧೧೩೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ಎಷ್ಟು ನೌಕರರ ಮೇಲೆ ಲೋಕಾಯುಕ್ತದಲ್ಲಿ ದೂರು ದಾಖಲಾಗಿವೆ ; ನೌಕರರ ಮೇಲೆ ದೂರು ಸಲ್ಲಿಕೆಯಾದಲ್ಲಿ ಎಷ್ಟು ದಿನಗಳಲ್ಲಿ ಪರಿಶೀಲಿಸಿ ಮುಕ್ತಾಯಗೊಳಿಸಲಾಗಿದೆ ;

(ಆ) ದೂರು ಸಲ್ಲಿಸಬೇಕಾದಲ್ಲಿ ದೂರುದಾರ ಪೂರಕ ಆಧಾರ ಸಲ್ಲಿಸಬೇಕೆ ; ಪೂರಕ ಆಧಾರ ಸಲ್ಲಿಸದೇ ಇದ್ದಲ್ಲಿ ದೂರನ್ನು ಪರಿಗಣಿಸಲಾಗುತ್ತದೆಯೇ ; ದೂರಿಗೆ ಆಧಾರ ಸಲ್ಲಿಸಲು ವಿಫಲವಾದ ಸಂದರ್ಭದಲ್ಲಿ ಸಂಸ್ಥೆ ದೂರಿನ ಬಗ್ಗೆ ಕೈಗೊಳ್ಳುವ ಕ್ರಮವೇನು ;

(ಇ) ಹಲವು ದೂರುದಾರರು ಲೋಕಾಯುಕ್ತ ಸಂಸ್ಥೆಗೆ ಆಧಾರರಹಿತ ದೂರು ನೀಡಿ ಸರ್ಕಾರಿ ನೌಕರರಿಗೆ ಕಿರುಕುಳ ನೀಡುವುದನ್ನೇ ದಂಧೆಯನ್ನಾಗಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ರೀತಿಯ ಆಧಾರ ರಹಿತ ದೂರು ನೀಡುವವರ ಮೇಲೆ ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಈ) ೨೦೧೮ ರಿಂದ ಇಲ್ಲಿಯವರೆಗೆ ಲೋಕಾಯುಕ್ತಕ್ಕೆ ಸಲ್ಲಿಸಲಾದ ಆಧಾರ ರಹಿತ ದೂರುಗಳ ಸಂಖ್ಯೆ ಎಷ್ಟು ; ಈ ರೀತಿ ಸಲ್ಲಿಸಲಾದ ಆಧಾರ ರಹಿತ ದೂರುಗಳನ್ನು ಮುಕ್ತಾಯಗೊಳಿಸಲಾಯಿತೆ ; ಆಧಾರ ರಹಿತ ದೂರು ನೀಡಿದ ದೂರುದಾರರ ಮೇಲೆ ಕೈಗೊಂಡ ಕ್ರಮಗಳೇನು; ಕ್ರಮ ಕೈಗೊಳ್ಳದೆ ಇದ್ದರೆ ಕಾರಣಗಳೇನು ?

## ರಾಜ್ಯದ ವಿವಿಧ ಜೈಲುಗಳಲ್ಲಿರುವ ವಿಚಾರಣಾಧೀನ ಖೈದಿಗಳ ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) :–**

೯೮೬ (೧೨೦೨) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ವಿವಿಧ ಕಾರಾಗೃಹಗಳಲ್ಲಿ ಪ್ರಸ್ತುತ ಎಷ್ಟು ವಿಚಾರಣಾಧೀನ ಖೈದಿಗಳು ಇದ್ದಾರೆ ; (ಧರ್ಮವಾರು, ಜಿಲ್ಲಾವಾರು ಹಾಗೂ ಕಾರಾಗೃಹವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷಗಳಲ್ಲಿ ವಿಚಾರಣಾಧೀನ ಖೈದಿಗಳ ಸಂಖ್ಯೆ ಎಷ್ಟಿತ್ತು ಹಾಗೂ ಪ್ರಸ್ತುತ ಎಷ್ಟು ಹೆಚ್ಚಳ/ಇಳಿಕೆಯಾಗಿದೆ ; (ವರ್ಷವಾರು ವಿವರ ನೀಡುವುದು)

(ಇ) ವಿಚಾರಣಾಧೀನ ಖೈದಿಗಳ ಪೈಕಿ ಎಷ್ಟು ಮಂದಿ ೬ ತಿಂಗಳಿಗಿಂತ ಹೆಚ್ಚು, ೧ ವರ್ಷಕ್ಕಿಂತ ಹೆಚ್ಚು, ೨ ವರ್ಷಕ್ಕಿಂತ ಹೆಚ್ಚು ಹಾಗೂ ೩ ವರ್ಷಕ್ಕಿಂತ ಹೆಚ್ಚುಕಾಲ ಜೈಲಿನಲ್ಲಿ ಇದ್ದಾರೆ ; (ಅವಧಿವಾರು ವಿವರ ನೀಡುವುದು)

(ಈ) ವಿಚಾರಣಾಧೀನ ಖೈದಿಗಳ ಪ್ರಕರಣಗಳು ವಿಳಂಬವಾಗಲು ಪ್ರಮುಖ ಕಾರಣಗಳೇನು ; ಪ್ರಕರಣಗಳ ಶೀಘ್ರ ವಿಲೇವಾರಿಗೆ ಸರ್ಕಾರವು ಕೈಗೊಂಡಿರುವ ಕ್ರಮಗಳೇನು ;

(ಉ) ವಿಚಾರಣಾಧೀನ ಖೈದಿಗಳಿಗೆ ಉಚಿತ ಕಾನೂನು ನೆರವು, ವಕೀಲರ ಸೌಲಭ್ಯ ಹಾಗೂ ಜಾಮೀನು ಪಡೆಯಲು ಅಗತ್ಯವಿರುವ ಕಾನೂನು ಸಹಾಯವನ್ನು ಒದಗಿಸಲಾಗುತ್ತಿದೆಯೇ ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಊ) ವಿಚಾರಣಾಧೀನ ಖೈದಿಗಳಿಗಾಗಿ ಕಾರಾಗೃಹಗಳಲ್ಲಿ ಇರುವ ಸಾಮರ್ಥ್ಯಕ್ಕೆ ಹೋಲಿಸಿದರೆ ಎಷ್ಟು ಹೆಚ್ಚುವರಿ ಖೈದಿಗಳು ಇದ್ದಾರೆ ; (ಕಾರಾಗೃಹವಾರು ವಿವರ ನೀಡುವುದು)

(ಋ) ವಿಚಾರಣಾಧೀನ ಖೈದಿಗಳ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಲು ನ್ಯಾಯಾಂಗ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ವಿಶೇಷ ಕ್ರಮ ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಭೂ ಸ್ವಾಧೀನಕ್ಕೆ ನೀಡುವ ಪರಿಹಾರದಲ್ಲಿನ ತಾರತಮ್ಯ ಕುರಿತು

**ಶ್ರೀ ಚಿದಾನಂದ್ ಎಂ.ಗೌಡ (ಪದವೀಧರರ ಕ್ಷೇತ್ರ) :–**

೯೮೭ (೧೧೩೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಡದಿ ಟೌನ್‌ಶಿಪ್ ಯೋಜನೆಗೆ ಸರ್ಕಾರ ವಶಪಡಿಸಿಕೊಳ್ಳಲಿರುವ ಭೂಮಿಯ ವಿಸ್ತೀರ್ಣವೆಷ್ಟು ;

(ಆ) ಸದರಿ ಭೂಮಿಯ ಮಾರ್ಗಸೂಚಿ ಬೆಲೆಯೆಷ್ಟು ; ಸರ್ಕಾರ ನೀಡುತ್ತಿರುವ ಪರಿಹಾರದ ಮೊತ್ತವೆಷ್ಟು ; ಅಭಿವೃದ್ಧಿಪಡಿಸಿದ ನಿವೇಶನದ ಎಷ್ಟು ಶೇಕಡವಾರು ನೀಡಲಾಗುತ್ತಿದೆ ; ಸದರಿ ಮೌಲ್ಯವನ್ನು ಯಾವ ಆಧಾರದ ಮೇಲೆ ನಿಗದಿಪಡಿಸಲಾಗಿದೆ ;

(ಇ) ಶಿವರಾಮ ಕಾರಂತ ಬಡಾವಣೆ ಮತ್ತಿತರ ಬಡಾವಣೆಗಳಲ್ಲಿ ಮಾರ್ಗಸೂಚಿ ಮೌಲ್ಯವೆಷ್ಟು ; ಸರ್ಕಾರ ಪರಿಹಾರಕ್ಕೆ ನಿಗದಿಪಡಿಸಿದ ಬೆಲೆಯೆಷ್ಟು ;

(ಈ) ಶಿವರಾಮ ಕಾರಂತ ಬಡಾವಣೆಯ ರೈತರಿಗೆ ಅಭಿವೃದ್ಧಿಪಡಿಸಿದ ಭೂಮಿಯ ಶೇಕಡ ಎಷ್ಟು ಭೂಮಿಯನ್ನು ಪರಿಹಾರವನ್ನಾಗಿ ನೀಡಲಾಗಿದೆ ;

(ಉ) ಬಿಡದಿಯ ರೈತರಿಗೆ ೫೦% ನೀಡಿ ರಾಜ್ಯದ ಇತರ ಭಾಗಗಳ ರೈತರಿಗೆ ೪೦% ಅಭಿವೃದ್ಧಿಪಡಿಸಿದ ಭೂಮಿಯನ್ನು ಪರಿಹಾರವಾಗಿ ನೀಡಿದರೆ, ಇತರ ಭಾಗಗಳ ರೈತರಿಗೆ ತಾರತಮ್ಯ/ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ ; ಸದರಿ ತಾರತಮ್ಯಕ್ಕೆ ಕಾರಣಗಳೇನು; ರಾಜ್ಯದ ಇತರ ಭಾಗಗಳಲ್ಲಿ ಭೂಮಿಯನ್ನು

ಸ್ವಾಧೀನಪಡಿಸಿಕೊಂಡಲ್ಲಿ ಅವರಿಗೂ ಶೇಕಡ ೫೦ ರಷ್ಟು ಅಭಿವೃದ್ಧಿಪಡಿಸಿದ ಭೂಮಿಯನ್ನು ನೀಡಲು ಸರ್ಕಾರ ಕೈಗೊಳ್ಳುವ ಕ್ರಮವೇನು ?

## ಗ್ರೇಟರ್ ಬೆಂಗಳೂರು ನಗರದಲ್ಲಿನ ಅನಧಿಕೃತ ಬಡಾವಣೆಗಳ ಬಗ್ಗೆ

**ಡಾ. ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೮೮ (೧೧೫೬) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಅಧಿಕೃತ ಮತ್ತು ಅನಧಿಕೃತ ಬಡಾವಣೆಗಳೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಅಕ್ರಮ ಬಡಾವಣೆ ನಿರ್ಮಾಣದಿಂದ ಶುಲ್ಕದ ರೂಪದಲ್ಲಿ ಸರ್ಕಾರಕ್ಕೆ ಬರಬೇಕಾಗಿರುವ ಹಾಗೂ ಉಂಟಾದ ನಷ್ಟವೆಷ್ಟು ; ನಷ್ಟವನ್ನು ವಸೂಲಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದಲ್ಲಿ ಅನುಮೋದನೆ ಪಡೆದ ಬಡಾವಣೆಗಳೆಷ್ಟು ; (ಬಡಾವಣೆಗಳ ವಿವರ ನೀಡುವುದು)

(ಈ) ಅಕ್ರಮ ಬಡಾವಣೆ ನಿರ್ಮಾಣ ಮಾಡಿದ ಸಂಘ–ಸಂಸ್ಥೆಗಳ ಮತ್ತು ವ್ಯಕ್ತಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ; ಅದರ ಸ್ಥಿತಿ ಗತಿಗಳ ಸಂಪೂರ್ಣ ವಿವರ ನೀಡುವುದು ;

(ಉ) ಕಾಯ್ದೆ ಮತ್ತು ನಿಯಮ ಉಲ್ಲಂಘಿಸಿರುವ ಬಿಲ್ಡರ್‌ಗಳ ಮೇಲೆ ಶಿಕ್ಷೆ ವಿಧಿಸಲು ಪ್ರಾಧಿಕಾರಕ್ಕೆ ಇರುವ ಅಧಿಕಾರವೇನು ; ಪ್ರಾಧಿಕಾರವು ಸೂಚನೆ ನೀಡಿದ್ದರೂ ದಂಡ ಪಾವತಿಸದ ಬಿಲ್ಡರ್ ಮತ್ತು ಸಂಸ್ಥೆಗಳ ಮೇಲೆ ಕೈಗೊಂಡ ಕ್ರಮಗಳೇನು ?

# ಪೊಲೀಸ್ ಇಲಾಖೆಯಲ್ಲಿ ಅಮಾನತ್ತುಗೊಂಡ ಅಧಿಕಾರಿ ಮತ್ತು ಸಿಬ್ಬಂದಿಗಳ ಬಗ್ಗೆ

**ಡಾ. ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೮೯ (೧೧೫೭) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಅಮಾನತ್ತುಗೊಂಡ ಪೊಲೀಸ್ ಅಧಿಕಾರಿಗಳು, ಇನ್ಸ್‌ಪೆಕ್ಟರ್‌ಗಳು, ಸಬ್ ಇನ್ಸ್‌ಪೆಕ್ಟರ್‌ಗಳು ಮತ್ತು ಸಿಬ್ಬಂದಿಗಳು ಎಷ್ಟು ; (ವಿವರ ಒದಗಿಸುವುದು)

(ಆ) ಹಾಗಿದ್ದಲ್ಲಿ, ಸದರಿ ಅಧಿಕಾರಿ ಮತ್ತು ಸಿಬ್ಬಂದಿಗಳ ಮೇಲೆ ಕ್ರಿಮಿನಲ್ ಪ್ರಕರಣಗಳು ದಾಖಲಾಗಿದೆಯೇ ; ದಾಖಲು ಮಾಡಿರುವ ಸಂಪೂರ್ಣ ಮಾಹಿತಿ ನೀಡುವುದು ;

(ಇ) ಭ್ರಷ್ಟಾಚಾರ ಪ್ರಕರಣದಲ್ಲಿ ಎಷ್ಟು ಅಧಿಕಾರಿಗಳು/ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ ; ಎಷ್ಟು ಪ್ರಕರಣಗಳು ಇಲಾಖಾ ವಿಚಾರಣೆಯಲ್ಲಿವೆ ;

(ಈ) ಎಷ್ಟು ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿವೆ ; ಸರ್ಕಾರ ಮತ್ತು ನ್ಯಾಯಾಲಯ ಹಂತದಲ್ಲಿ ಖುಲಾಸೆಗೊಂಡ ಪ್ರಕರಣಗಳೆಷ್ಟು ; (ಸಂಪೂರ್ಣ ವಿವರ ಒದಗಿಸುವುದು)

(ಉ) ಪೊಲೀಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಮತ್ತು ಇತರೆ ಅಪರಾಧ ಚಟುವಟಿಕೆಗಳ ನಿಯಂತ್ರಣಕ್ಕೆ ಸರ್ಕಾರವು ಕೈಗೊಂಡಿರುವ ನಿರ್ದಿಷ್ಟ ಕ್ರಮಗಳು ಯಾವುವು; ಪ್ರಸ್ತುತ ಕಾರ್ಯರೂಪಗೊಂಡಿರುವ ಕ್ರಮಗಳ ವಿವರ ನೀಡುವುದು ?

# ಗ್ರೇಟರ್ ಬೆಂಗಳೂರು ನಗರ ಯೋಜನೆಯ ವಿಭಾಗದಲ್ಲಿ ನಡೆದಿರುವ ಅಕ್ರಮ ಬಗ್ಗೆ

**ಡಾ. ಕೆ. ಗೋವಿಂದರಾಜ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೬೦ (೧೧೫೮) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ನಗರ ಯೋಜನೆ ವಿಭಾಗದಲ್ಲಿ ಅಕ್ರಮ ನಡೆದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೆ, ಪೂರ್ತಿ ವಿವರ ಒದಗಿಸುವುದು ;

(ಆ) ಗ್ರೇಟರ್ ಬೆಂಗಳೂರು ಪ್ರಾಧಿಕಾರದ ನಗರ ಯೋಜನೆ ವಿಭಾಗಕ್ಕೆ ಸಂಬಂಧಿಸಿದಂತೆ ನಕ್ಷೆ ಮಂಜೂರಾತಿ ಸ್ವಾಧೀನ ಪ್ರಮಾಣ ಪತ್ರ ನೀಡುವ ಶುಲ್ಕದ ವಿವರ ನೀಡುವುದು ಮತ್ತು ಇತರೆ ಶುಲ್ಕದ ವಿವರ ಒದಗಿಸುವುದು ;

(ಇ) ಕೆಲವು ಪಾಲಿಕೆ ವ್ಯಾಪ್ತಿಯಲ್ಲಿ ನಕ್ಷೆ ಮಂಜೂರಾತಿ ಮತ್ತು ಓ.ಸಿಗಳನ್ನು ವಿತರಿಸುವ ಸುಧಾರಣಾ ಶುಲ್ಕ ವಸೂಲಿ ಮಾಡದಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದರೆ, ಇದರಿಂದ ಸರ್ಕಾರಕ್ಕೆ ಆದ ನಷ್ಟವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಈ ಅಕ್ರಮದಲ್ಲಿ ಭಾಗಿಯಾಗಿರುವ ಅಧಿಕಾರಿ ಮತ್ತು ಸಿಬ್ಬಂದಿಗಳ ವಿರುದ್ಧ ತೆಗೆದುಕೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು ಪ್ರಾಧಿಕಾರಕ್ಕೆ ಆದ ನಷ್ಟವನ್ನು ಸರ್ಕಾರ ಯಾವ ಮಾನದಂಡದಲ್ಲಿ ಹಿಂಪಡೆಯಲು ಕ್ರಮ ಕೈಗೊಂಡಿದೆ ?

# ಬೆಂಗಳೂರು ನಗರದಲ್ಲಿ ಫುಟ್‌ಪಾತ್ ತೆರವು ಒತ್ತುವರಿ ನಿಯಂತ್ರಣದ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೯೧ (೧೧೯೧) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ಜಿಲ್ಲೆಯಲ್ಲಿ ಒಟ್ಟು ಎಷ್ಟು ಕಿ.ಮೀ ಮೀಟರ್ ಉದ್ದದ ಫುಟ್‌ಪಾತ್‌ಗಳಿವೆ; ಅವುಗಳಲ್ಲಿ ಈ ಇವರೆವಿಗೂ ಎಷ್ಟು ಫುಟ್‌ಪಾತ್‌ಗಳು ಒತ್ತುವರಿಗೆ ಒಳಗಾಗಿವೆ ;

(ಆ) ಫುಟ್‌ಪಾತ್‌ನ್ನು ಒತ್ತುವರಿ ಮಾಡಿಕೊಂಡಿರುವ ಅಂಗಡಿಗಳು, ವ್ಯಾಪಾರ ಮಳಿಗೆಗಳು, ವಾಹನ ನಿಲುಗಡೆ ಸ್ಥಳಗಳು ಮತ್ತು ಇತರೆ ಅಕ್ರಮ ನಿರ್ಮಾಣಗಳ ವಿರುದ್ಧ ಎಷ್ಟು ಪ್ರಕರಣಗಳು ದಾಖಲಾಗಿದೆ ; (ವಿಧಾನಸಭಾವಾರು ಸಂಪೂರ್ಣ ವಿವರ ನೀಡುವುದು)

(ಇ) ಕಳೆದ ೨ ತಿಂಗಳಲ್ಲಿ ಎಷ್ಟು ಫುಟ್‌ಪಾತ್ ಒತ್ತುವರಿಗಳನ್ನು ತೆರವುಗೊಳಿಸಲಾಗಿದೆ ಮತ್ತು ಇನ್ನೂ ಬಾಕಿ ಉಳಿದಿರುವ ಫುಟ್‌ಪಾತ್‌ಗಳು ಎಷ್ಟು ;

(ಈ) ಫುಟ್‌ಪಾತ್ ತೆರವು ಕಾರ್ಯಾಚರಣೆ ನಂತರ ಮತ್ತೆ ಅದೇ ಸ್ಥಳದಲ್ಲಿ ಒತ್ತುವರಿ ಆಗದಂತೆ ಸರ್ಕಾರ ಶಾಶ್ವತ ಕ್ರಮಗಳನ್ನು ಕೈಗೊಳ್ಳಲಾಗಿದೆಯೇ ; (ವಿವರ ನೀಡುವುದು)

(ಉ) ಫುಟ್‌ಪಾತ್ ಒತ್ತುವರಿ ತೆರವುಗೊಳಿಸುವ ಸಂದರ್ಭದಲ್ಲಿ ಸಣ್ಣ ವ್ಯಾಪಾರಿಗಳು ಹಾಗೂ ಬೀದಿ ವ್ಯಾಪಾರಿಗಳ ಜೀವನೋಪಾಯಕ್ಕೆ ಧಕ್ಕೆಯಾಗದಂತೆ (Street Vendors Act) ಪರ್ಯಾಯ ವ್ಯವಸ್ಥೆ ಕಲ್ಪಿಸಲಾಗಿದೆಯೇ;

(ಊ) ಅಂಗವಿಕಲರು, ವೃದ್ಧರು ಮತ್ತು ಮಕ್ಕಳಿಗೆ ಅನುಕೂಲವಾಗುವಂತೆ ಫುಟ್‌ಪಾತ್‌ಗಳಲ್ಲಿ ರ‍್ಯಾಂಪ್, ಟ್ರ್ಯಾಕ್‌ಟ್ರೇಲ್ ಪಾತ್ ಮತ್ತು ಸುರಕ್ಷಿತ ಪಾದಚಾರಿ ಮಾರ್ಗ ಕಲ್ಪಿಸಲಾಗಿದೆಯೇ;

(ಋ) ಫುಟ್‌ಪಾತ್ ತೆರವು ಕಾರ್ಯಚರಣೆಯಲ್ಲಿ ವಿವಿಧ ಇಲಾಖೆಗಳ ನಡುವೆ ಸಮನ್ವಯದ ಕೊರತೆ ಇರುವುದನ್ನು ಸರ್ಕಾರ ಗಮನಿಸಿದೆಯೇ; ಇದ್ದಲ್ಲಿ, ಅದನ್ನು ಪರಿಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಎ) ಬೆಂಗಳೂರು ನಗರವನ್ನು ಪಾದಚಾರಿಗಳಿಗೆ ಸುರಕ್ಷಿತ ನಗರವನ್ನಾಗಿ ಮಾಡಲು Footpath Encroachment Free Bengaluru ಯೋಜನೆಯನ್ನು ಜಾರಿಗೊಳಿಸುವ ಕುರಿತು ಸರ್ಕಾರ ಕ್ರಮ ಕೈಗೊಂಡಿದೆಯೇ ? (ವಿವರ ನೀಡುವುದು)

## ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಮಾಹಿತಿ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೨ (೧೯೨) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನೀರು ಸರಬರಾಜು ಮಂಡಳಿಯ ಮತ್ತು ಒಳಚರಂಡಿ ಮಂಡಳಿಯ ೧೧೦ ಹಳ್ಳಿಗಳಿಗೆ ಕಾವೇರಿ ನೀರಿನ ಸಂಪರ್ಕ ಕಲ್ಪಿಸುವ ಯೋಜನೆಯಲ್ಲಿ ಇಲ್ಲಿಯವರೆಗೆ ಎಷ್ಟು ಗ್ರಾಮಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ; ನೀರಿನ ಸಂಪರ್ಕಕ್ಕೆ ಬಾಕಿ ಇರುವ ಗ್ರಾಮಗಳೆಷ್ಟು; (ವಿವರ ನೀಡುವುದು)

(ಆ) ಈ ಯೋಜನೆಯ ಕಾಮಗಾರಿಗೆ ನಿಗದಿಗೊಳಿಸಿದ್ದ ಅಂದಾಜು ಪಟ್ಟಿ ಎಷ್ಟು ; ಕಾಮಗಾರಿ/ಯೋಜನೆಯನ್ನು ಜಾರಿಗೊಳಿಸಲು ನಿಗದಿಗೊಳಿಸಿದ ಸಮಯವೆಷ್ಟು; ಕಾಮಗಾರಿ ಸಂಪೂರ್ಣ ಜಾರಿಯಾಗದೇ ಇದ್ದಲ್ಲಿ, ಕಾರಣಗಳೇನು ;

(ಇ) ಸದರಿ ಯೋಜನೆಯಡಿ ಕಾಮಗಾರಿಯನ್ನು ಎಷ್ಟು ಪ್ಯಾಕೇಜ್‌ಗಳಲ್ಲಿ ಗುತ್ತಿಗೆದಾರರಿಗೆ ನೀಡಲಾಗಿದೆ ; ಪ್ರತಿ ಕಾಮಗಾರಿಗಳಿಗೆ ನಿಗದಿಪಡಿಸಿರುವ ಕಾಲಮಿತಿ ಎಷ್ಟು ; ನಿಗದಿತ ಸಮಯದಲ್ಲಿ ಕಾಮಗಾರಿ ಪೂರ್ಣಗೊಳಿಸಿ ಕುಡಿಯುವ ನೀರಿನ ಸಂಪರ್ಕ ನೀಡಲಾಗಿದೆಯೇ ? (ಪೂರ್ಣ ವಿವರ ನೀಡುವುದು)

## ಬೆಂಗಳೂರು ನಗರದ ಟನಲ್ ರಸ್ತೆಯ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೯೯೩ (೧೧೯೩) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿ ಟನಲ್ ರಸ್ತೆ ನಿರ್ಮಾಣ ಮಾಡಲು ಸರ್ಕಾರವು ತೀರ್ಮಾನಿಸಿರುವುದು ನಿಜವೇ; ಹಾಗಿದ್ದಲ್ಲಿ, ಈ ಯೋಜನೆಯ ವಿಸ್ತೃತ ವರದಿಯ ಪ್ರತಿಯನ್ನು ಒದಗಿಸುವುದು; (ವಿವರ ನೀಡುವುದು)

(ಆ) ಈ ಯೋಜನೆಯು ಪರಿಸರಕ್ಕೆ ಹಾನಿಯನ್ನುಂಟು ಮಾಡುವುದೆಂದು ಪರಿಸರ ಪ್ರೇಮಿಗಳು ಹಾಗೂ ಬೆಂಗಳೂರು ನಿವಾಸಿಗಳು ಆಕ್ಷೇಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅವರ ಆಕ್ಷೇಪಣೆಗಳನ್ನು ಸರ್ಕಾರ ಪರಿಗಣಿಸಿದೆಯೇ; (ವಿವರ ನೀಡುವುದು)

(ಇ) ಈ ಯೋಜನೆಗೆ ಮೀಸಲಿಟ್ಟ ಅನುದಾನವೆಷ್ಟು ಹಾಗೂ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು;

(ಈ) ಈ ಯೋಜನೆಯು ಸಾರ್ವಜನಿಕರಿಗೆ ಎಷ್ಟು ಉಪಯೋಗವಾಗಲಿದೆ ; ಮತ್ತು ಯಾವ ಯಾವ ವರ್ಗದ ಜನರಿಗೆ ಅನುಕೂಲವಾಗಲಿದೆ? (ವಿವರ ನೀಡುವುದು)

## ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಬ್ಯಾಕ್‌ಲಾಗ್ ಹುದ್ದೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೯೪ (೧೧೬೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ:೨೬.೦೨.೨೦೨೬ರಂತೆ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳು, ನಿಗಮ–ಮಂಡಳಿಗಳು ಹಾಗೂ ಅಧೀನ ಸಂಸ್ಥೆಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಬ್ಯಾಕ್‌ಲಾಗ್ ಹುದ್ದೆಗಳ ಒಟ್ಟು ಸಂಖ್ಯೆ ಎಷ್ಟು; ಇಲಾಖಾವಾರು, ವರ್ಗವಾರು ಹಾಗೂ ವೃಂದವಾರು, ಹುದ್ದೆಗಳ ಪದನಾಮದೊಂದಿಗೆ ವಿವರ ಒದಗಿಸುವುದು ;

(ಆ) ಮೇಲ್ಕಂಡ ಬ್ಯಾಕ್‌ಲಾಗ್ ಹುದ್ದೆಗಳ ಪೈಕಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಬಹುದಾದ ಹುದ್ದೆಗಳ ಸಂಖ್ಯೆ ಎಷ್ಟು; ಹಾಗೂ ಭರ್ತಿಗೆ ಬಾಕಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಇಲಖಾವಾರು ವಿವರ ಒದಗಿಸುವುದು ;

(ಇ) ದಿನಾಂಕ:೨೭.೦೨.೨೦೨೬ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ ೦೧ ಸೆಹಿಮ ೨೦೨೬ರನ್ವಯ ದಿನಾಂಕ:೨೮.೧೨.೨೦೨೨ರ ಹಿಂದೆ ಜಾರಿಯಲ್ಲಿದ್ದ ಮೀಸಲಾತಿ ಆದೇಶ ಮತ್ತು ರೋಸ್ಟರ್ ಬಿಂದುಗಳಂತೆ ಶೇ.೫೦ರ ಮೀಸಲಾತಿ ಪ್ರಮಾಣದಲ್ಲಿ ನೇರ ನೇಮಕಾತಿ ಅಧಿಸೂಚನೆ ಹೊರಡಿಸಿದ ನಂತರ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಬ್ಯಾಕ್‌ಲಾಗ್ ಆಗಿ ಉಳಿಯುವ ಹುದ್ದೆಗಳ ಸಂಖ್ಯೆ ಎಷ್ಟು; ಇಲಾಖಾವಾರು, ವರ್ಗವಾರು ಹಾಗೂ ವೃಂದವಾರು ವಿವರ ಒದಗಿಸುವುದು ;

(ಈ) ಸದರಿ ಸರ್ಕಾರಿ ಆದೇಶದನ್ವಯ ವಿವಿಧ ಇಲಾಖೆಗಳು, ನಿಗಮ–ಮಂಡಳಿಗಳು ಹಾಗೂ ಅಧೀನ ಸಂಸ್ಥೆಗಳಿಂದ ಇದುವರೆಗೆ ಎಷ್ಟು ನೇರ ನೇಮಕಾತಿ ಅಧಿಸೂಚನೆಗಳನ್ನು ಹೊರಡಿಸಲಾಗಿದೆ; ಅವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾದ ಹುದ್ದೆಗಳ ಸಂಖ್ಯೆ ಎಷ್ಟು ; ಇಲಾಖಾವಾರು ವಿವರ ಒದಗಿಸುವುದು ;

(ಉ) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬ್ಯಾಕ್‌ಲಾಗ್ ಹುದ್ದೆಗಳನ್ನು ತ್ವರಿತವಾಗಿ ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ಉಳಿದಿರುವ ಎಲ್ಲಾ ಬ್ಯಾಕ್‌ಲಾಗ್ ಹುದ್ದೆಗಳನ್ನು ಯಾವ ಕಾಲಮಿತಿಯೊಳಗೆ ಭರ್ತಿ ಮಾಡಲಾಗುವುದು ? (ವಿವರ ಒದಗಿಸುವುದು)

# ರಾಜ್ಯದಲ್ಲಿನ ಮಹಿಳೆಯರ ಮತ್ತು ಮಕ್ಕಳ ಮೇಲೆ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೯೫ (೧೧೬೭) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨ ರಿಂದ ೨೦೨೬ರ ಜೂನ್‌ವರೆಗೆ ರಾಜ್ಯದಲ್ಲಿ ಎಷ್ಟು ಅತ್ಯಾಚಾರ ಪ್ರಕರಣಗಳು ದಾಖಲಾಗಿದೆ ; ಈ ಪೈಕಿ ಎಷ್ಟು ಪ್ರಕರಣಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಆ) ೨೦೨೨ ರಿಂದ ೨೦೨೬ರ ಜೂನ್‌ವರೆಗೆ ರಾಜ್ಯದಲ್ಲಿ ಮಹಿಳೆಯರು ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಕ್ಕೆ ಸಂಬಂಧಿಸಿದಂತೆ ಎಷ್ಟು ಪ್ರಕರಣಗಳು ದಾಖಲಾಗಿದ್ದು, ಎಷ್ಟು ಪ್ರಕರಣಗಳು ತನಿಖೆ ಹಂತದಲ್ಲಿವೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಇ) ಮಹಿಳೆಯರ ಮೇಲಿನ ವರದಕ್ಷಿಣೆ ಕಿರುಕುಳ, ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತಡೆಗಟ್ಟಲು ಮತ್ತು ಸಂತ್ರಸ್ತರಿಗೆ ತ್ವರಿತ ನ್ಯಾಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

# ೭ನೇ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕೃತ ಶ್ರೇಣಿಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೯೬ (೧೧೪೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೭ನೇ ವೇತನ ಆಯೋಗದ ಶಿಫಾರಸ್ಸಿನಂತೆ ಸರ್ಕಾರಿ ನೌಕರರಿಗೆ ಪರಿಷ್ಕತ ಶ್ರೇಣಿಗಳನ್ನು ದಿನಾಂಕ:೦೧.೦೭.೨೦೨೨ ರಿಂದ ಜಾರಿಗೊಳಿಸಿ ೧/೮/೨೦೨೪ರ ಅನ್ವಯ ಆದೇಶ ಹೊರಡಿಸಿ, ದಿನಾಂಕ: ೧/೭/೨೦೨೨ ರಿಂದ ೩೧/೭/೨೦೨೪ವರೆಗೆ ನಿವೃತ್ತರಾದ ನೌಕರರಿಗೆ ಪರಿಷ್ಕೃತ ಶ್ರೇಣಿ ವೇತನದಂತೆ ನಿವೃತ್ತಿ ಸೌಲಭ್ಯಗಳು ನೀಡದೆ ನೌಕರರಿಗೆ ಆರ್ಥಿಕ ನಷ್ಟವನ್ನು ಉಂಟು ಮಾಡಿದೆ ಎಂದು ಸಂಘವು ಬೇಡಿಕೆ ಇಟ್ಟಿದ್ದು ; ಈ ಸಂಘವು, ಅನೇಕ ಹೋರಾಟ ನಡೆಸುತ್ತಿದ್ದು, ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು; (ವಿವರ ನೀಡುವುದು)

(ಆ) ಮೇಲಿನ ಅವಧಿಯಲ್ಲಿ ನಿವೃತ್ತರಾದ ನೌಕರರ ಡಿ.ಸಿ.ಆರ್. ಜಿ, ಕಮ್ಯುಟೇಶನ್ ಹಾಗೂ ಗಳಿಕೆ ರಜೆ ನಗದೀಕರಣಗಳನ್ನು ನೀಡದೇ ಹಳೆಯ ವೇತನ ಶ್ರೇಣಿಯಂತೆ ನೀಡಿರುವುದರಿಂದ ವ್ಯತ್ಯಾಸದ ಮೊತ್ತ ಎಷ್ಟು; ಈ ಅವಧಿಯಲ್ಲಿ ಎಷ್ಟು ಮಂದಿ ನೌಕರರಿಗೆ ವ್ಯತ್ಯಾಸದ ಮೊತ್ತವನ್ನು ನೀಡಬೇಕಾಗಿರುವುದು ಹಾಗೂ ಇದಕ್ಕೆ ತಗಲುವ ವೆಚ್ಚ ಎಷ್ಟು ; (ವಿವರ ನೀಡುವುದು)

(ಇ) ಸರ್ಕಾರಿ ನೌಕರರು ಸರ್ಕಾರದ ಪರವಾಗಿ ಕೆಲಸ ಮಾಡಿ, ನಿವೃತ್ತರಾದ ಮೇಲೆ ಅವರಿಗೆ ನೀಡಬೇಕಾದ ವೇತನವನ್ನು ನೀಡುವ ಜವಾಬ್ದಾರಿ ಸರ್ಕಾರದಲ್ಲವೇ; ಸುಮಾರು ೨೬ ಸಾವಿರ ನೌಕರರು ಈ ವ್ಯತ್ಯಾಸಕ್ಕೆ ಒಳಪಟ್ಟಿದ್ದಾರೆ ಎಂಬ ಮಾಹಿತಿ ನೀಡಲಾಗಿರುವುದು ಸರಿಯೇ ; ಇಲಾಖೆಗಳಲ್ಲಿ ಲಭ್ಯವಿರುವ ಮಾಹಿತಿಗಳೇನು ? (ವಿವರ ನೀಡುವುದು)

## ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೯೭ (೧೧೩೭) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ૩ ವರ್ಷಗಳಲ್ಲಿ ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು ; (ವರ್ಷವಾರು ವಿವರ ನೀಡುವುದು)

(ಆ) ಕಳೆದ ૩ ವರ್ಷಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಷ್ಟು ಎಂ.ಎಸ್.ಐ.ಎಲ್ ಮಳಿಗೆ ತೆರೆಯಲು ಪರವಾನಿಗೆ ನೀಡಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು)

(ಇ) ಎಂ.ಎಸ್.ಐ.ಎಲ್ ಮಳಿಗೆ ತೆರೆಯಲು ಪರವಾನಿಗೆ ನೀಡಲು ಯಾವ ಮಾನದಂಡಗಳನ್ನು ಅನುಸರಿಸಲಾಗುತ್ತದೆ ? (ವಿವರ ನೀಡುವುದು)

# ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾದಕ ದ್ರವ್ಯ ವ್ಯಾಪಾರ ಮಾಡುತ್ತಿರುವ ಯುವಕರ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೮ (೧೧೩೮) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಮಾದಕ ದ್ರವ್ಯ (ಡ್ರಗ್ಸ್) ವ್ಯಾಪಾರ, ಯುವಕರಲ್ಲಿ ಡ್ರಗ್ಸ್ ವ್ಯಸನ ಹಾಗೂ ಸಂಘಟಿತ ಡ್ರಗ್ಸ್ ಮಾಫಿಯಾ ಚಟುವಟಿಕೆಗಳು ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ಪ್ರಕರಣದಲ್ಲಿ ಭಾಗಿಯಾದ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಡ್ರಗ್ಸ್ ವ್ಯಾಪಾರವನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲು ಸರ್ಕಾರವು ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು? (ವಿವರ ನೀಡುವುದು)

# ಲಗ್ಗೆರೆ, ಮುನೇಶ್ವರ ಬಡಾವಣೆಯ ವೈಟ್ ಟಾಪಿಂಗ್ ರಸ್ತೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೯೯ (೧೧೩೯) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೧–೨೨ನೇ ಸಾಲಿನಲ್ಲಿ ಲಗ್ಗೆರೆ, ಮುನೇಶ್ವರ ಬಡಾವಣೆಯ ೩೦ ಅಡಿ ರಸ್ತೆಯ ರಿಂಗ್ ರಸ್ತೆಯಿಂದ ಆಲದ ಮರದ

ಸರ್ಕಲ್‌ವರೆಗೆ ಮಂಜೂರಾಗಿರುವ ವೈಟ್ ಟಾಪಿಂಗ್ ರಸ್ತೆಯನ್ನು ರದ್ದುಪಡಿಸಿರುವುದು ನಿಜವೇ; ಯಾವ ಕಾರಣಕ್ಕಾಗಿ ರದ್ದುಪಡಿಸಲಾಗಿದೆ ; (ವಿವರ ನೀಡುವುದು)

(ಆ) ಕೂಡಲೇ ಮೇಲ್ಕಂಡ ರಸ್ತೆಗೆ ವೈಟ್ ಟಾಪಿಂಗ್ ರಸ್ತೆ ಮಾಡಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ವಿವರ ನೀಡುವುದು)

## ಬಿ.ಬಿ.ಎಂ.ಪಿ ಲಗ್ಗೆರೆಯ ರಸ್ತೆಯ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೦೦ (೧೧೪೦) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಿನಾಂಕ:೧೩.೦೯.೨೦೨೨ರ ಲೀಗಲ್ ನೋಟೀಸ್‌ಗೆ ಬಿ.ಬಿ.ಎಂ.ಪಿ ಲಗ್ಗೆರೆ ಉಪ ವಿಭಾಗದ ಎಇಇರವರ ಲಿಖಿತ ಪತ್ರ ಸಂಖ್ಯೆ:ಸ.ಕಾ.ಅ/ ಲಉ.ವಿ/ಪಿ.ಆರ್/೪೪೪/೨೨–೨೩, ದಿನಾಂಕ:೨೦.೦೯.೨೦೨೨ ರಲ್ಲಿ ಸಹಾಯಕ ಹಾಗೂ ಕಾರ್ಯಪಾಲಕ ಇಂಜಿನಿಯರ್ ರವರ ದಿನಾಂಕ:೧೬.೦೯.೨೦೨೨ರ ಜಂಟಿ ಸ್ಥಳ ಪರಿಶೀಲನೆಯಲ್ಲಿ ಲಗ್ಗೆರೆ, ೫೦ ಅಡಿ ರಸ್ತೆ, ೧೧ನೇ ಕ್ರಾಸ್‌ನ ಚರಂಡಿ ಹಾಗೂ ರಸ್ತೆ ಮಧ್ಯದ ಕಲ್ವರ್ಟ್ ತುಂಬಾ ಶಿಥಿಲಗೊಂಡು ಪೂರ್ಣ ಮಣ್ಣಿನಿಂದ ತುಂಬಿದ್ದು, ಕೂಡಲೇ ಹೊಸದಾಗಿ ನಿರ್ಮಿಸಲು ಕಾರ್ಯಪಾಲಕ ಇಂಜಿನಿಯರ್ ಸೂಚಿಸಿರುತ್ತಾರೆಂದು ಲಿಖಿತವಾಗಿ ಮಾಹಿತಿ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಂದು ಕ್ರಾಸ್ ರಸ್ತೆಯ ಕಾಂಕ್ರೀಟ್, ಚರಂಡಿ ಹಾಗೂ ರಸ್ತೆ ಮಧ್ಯದ ಕಲ್ವರ್ಟ್ ನಿರ್ಮಿಸಲು ಬಿ.ಬಿ.ಎಂ.ಪಿ/ಜಿ.ಬಿ.ಎ ಅಧಿಕಾರಿಗಳು ೪ ವರ್ಷಗಳಿಂದ ನಿರ್ಲಕ್ಷ ವಹಿಸಿರುವುದು ಸರಿಯೇ; ಇದಕ್ಕೆ ಕಾರಣವೇನು ;

(ಇ) ಮೇಲ್ಕಂಡ ಎರಡು ಕಾಮಗಾರಿಯನ್ನು ಕೂಡಲೇ ಕ್ರಮ ಕೈಗೊಳ್ಳಲು ಜಿ.ಬಿ.ಎ. ಉನ್ನತ ಅಧಿಕಾರಿಗಳು ತೆಗೆದುಕೊಂಡ ಕ್ರಮವೇನು ? (ಸಂಪೂರ್ಣ ಮಾಹಿತಿ ನೀಡುವುದು)

## ತುಮಕೂರು ಮಹಾನಗರ ಪಾಲಿಕೆಗೆ ಸಂಬಂಧಿಸಿದ ಪ್ರಶ್ನೆಗಳು

**ಶ್ರೀ ಎಫ್. ಹೆಚ್. ಜಕಪ್ಪನವರ್ (ನಾಮನಿರ್ದೇಶನ ಹೊಂದಿದವರು) :–**

೧೦೦೧ (೧೨೦೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಮಹಾನಗರ ಪಾಲಿಕೆ ಅಧೀನದಲ್ಲಿರುವ ಉದ್ಯಾನವನಗಳು ಹಾಗೂ ರಸ್ತೆ ವಿಭಜಕಗಳ ನಿರ್ವಹಣೆ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಿಂದ ಕೈಗೊಂಡಿರುವ ಕಾಮಗಾರಿಗಳು ಎಷ್ಟು ; (ವಿವರ ಒದಗಿಸುವುದು)

(ಆ) ಕೈಗೊಂಡಿರುವ ಕಾಮಗಾರಿಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ ನಿಯಮಾನುಸಾರ ಕಾಮಗಾರಿಗಳನ್ನು ಮೀಸಲಿರಿಸಲಾಗಿದೆಯೇ ; (ಮಾಹಿತಿ ಒದಗಿಸುವುದು)

(ಇ) ತುಮಕೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕಳೆದ ೩ ವರ್ಷಗಳಿಂದ ಉದ್ಯಾನವನಗಳು ಹಾಗೂ ರಸ್ತೆ ವಿಭಜಕಗಳ ನಿರ್ವಹಣೆ ಹಾಗೂ ಅಭಿವೃದ್ಧಿಗಾಗಿ ನಿಗದಿಪಡಿಸಿದ ಅನುದಾನ ಮತ್ತು ಖರ್ಚಿನ ವಿವರ ಒದಗಿಸುವುದು ;

(ಈ) ಕಳೆದ ಮೂರು ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳಲ್ಲಿ ಎಷ್ಟು ಕಾಮಗಾರಿಗಳನ್ನು ಕೊಟೇಶನ್ ಮೂಲಕ ಮತ್ತು ಟೆಂಡರ್ ಮೂಲಕ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ಮಹಿಳಾ ದೌರ್ಜನ್ಯ ಪ್ರಕರಣ, ಡ್ರಗ್ಸ್ ದಂಧೆ ಮತ್ತು ಸೈಬರ್ ಅಪರಾಧಗಳ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೦೨ (೧೧೩೨) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ಒಂದು ವರ್ಷದಲ್ಲಿ ದಾಖಲಾದ ಮಹಿಳಾ ದೌರ್ಜನ್ಯ ಪ್ರಕರಣಗಳ ಸಂಖ್ಯೆ ಎಷ್ಟು; ಇವುಗಳ ತಡೆಗೆ ಸರ್ಕಾರ ಕೈಗೊಂಡಿರುವ ಮುಂಜಾಗ್ರತಾ ಕ್ರಮಗಳೇನು ;

(ಆ) ಯುವ ಪೀಳಿಗೆಯನ್ನು ಬಲಿ ತೆಗೆದುಕೊಳ್ಳುತ್ತಿರುವ ಡ್ರಗ್ಸ್ ದಂಧೆಯನ್ನು ಹತ್ತಿಕ್ಕಲು ಸರ್ಕಾರ ಹಮ್ಮಿಕೊಂಡಿರುವ ವಿಶೇಷ ಕಾರ್ಯಾಚರಣೆಗಳು ಯಾವುವು; ಎಷ್ಟು ಜನರನ್ನು ಬಂಧಿಸಲಾಗಿದೆ ;

(ಇ) ಸಾರ್ವಜನಿಕರ ಬ್ಯಾಂಕ್ ಖಾತೆಗಳಿಂದ ಹಣ ಲೂಟಿ ಮಾಡುವ ಸೈಬರ್ ಅಪರಾಧಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸೈಬರ್ ಅಪರಾಧ ತನಿಖಾ ವಿಭಾಗಗಳನ್ನು ಬಲಪಡಿಸಲು ಎಷ್ಟು ವಿಶೇಷ ಸೈಬರ್ ಠಾಣೆಗಳಿವೆ ; ಮತ್ತು ಇದಕ್ಕಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ; ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

# ರಾಜ್ಯದ ಪೊಲೀಸರ, ಗೃಹ ರಕ್ಷಕರ ಕ್ಷೇಮಾಭಿವೃದ್ಧಿ ಮತ್ತು ಗ್ರಾಮೀಣ ಪೊಲೀಸ್ ಠಾಣೆಗಳ ವ್ಯವಸ್ಥೆ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೦೩ (೧೧೩೩) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪೊಲೀಸ್ ಇಲಾಖೆಯಲ್ಲಿ ಪ್ರಸ್ತುತ ಖಾಲಿ ಇರುವ ಕಾನ್ಸ್‌ಟೇಬಲ್, ಸಬ್–ಇನ್ಸ್‌ಪೆಕ್ಟರ್ (PSI) ಮತ್ತು ಇತರೆ ಹುದ್ದೆಗಳ ಸಂಖ್ಯೆ ಎಷ್ಟು; ಇವುಗಳ ಭರ್ತಿಗಾಗಿ ನಡೆಸಿದ ಪರೀಕ್ಷೆಯಲ್ಲಿ ಅನೇಕ ಲೋಪದೋಷಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳನ್ನು ತಿಳಿಸುವುದು ;

(ಆ) ಗೃಹ ರಕ್ಷಕ ದಳ (Home Guards) ಸಿಬ್ಬಂದಿಗಳಿಗೆ ಗೌರವ ಧನವನ್ನು ಸಕಾಲದಲ್ಲಿ ಪಾವತಿಸಲಾಗುತ್ತಿದೆಯೇ ; ಅವರ ಸೇವಾ ಸೌಲಭ್ಯಗಳನ್ನು ಉತ್ತಮಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಇ) ರಾಜ್ಯದಲ್ಲಿ ಗ್ರಾಮೀಣ ಭಾಗದ ಎಲ್ಲಾ ಪೊಲೀಸ್ ಠಾಣೆಗಳಿಗೆ ಸ್ವಂತ ಕಟ್ಟಡ, ವಾಹನ ಮತ್ತು ಆಧುನಿಕ ಶಸ್ತ್ರಾಸ್ತ್ರಗಳು ಇವೆಯೇ; (ಮಾಹಿತಿ ನೀಡುವುದು) ಇಲ್ಲದಿದ್ದಲ್ಲಿ, ಸ್ವಂತ ಕಟ್ಟಡ, ವಾಹನ ಮತ್ತು ಆಧುನಿಕ ಶಸ್ತ್ರಾಸ್ತ್ರಗಳು ಒದಗಿಸಲು ಜಾರಿಯಲ್ಲಿರುವ ಯೋಜನೆಗಳು ಯಾವುವು ಮತ್ತು ಇದಕ್ಕಾಗಿ ಮೀಸಲಿಟ್ಟ ಅನುದಾನ ಎಷ್ಟು ;

(ಈ) ಪೊಲೀಸರಿಗೆ ವಸತಿ ಸೌಲಭ್ಯವನ್ನು ರಾಜ್ಯಾದ್ಯಂತ ಒದಗಿಸಲಾಗಿದೆಯೇ ; ಅವರಿಗೆ ವಿಶೇಷ ವೇತನ ನೀಡಲಾಗುತ್ತಿದೆಯೇ ; (ವಿವರ ನೀಡುವುದು)

(ಉ) ಪೊಲೀಸರಿಗೆ ಆರೋಗ್ಯ ವಿಮೆ ಮತ್ತು ಜೀವವಿಮೆ ಕಡ್ಡಾಯವಾಗಿ ದೊರೆಯುವ ವ್ಯವಸ್ಥೆ ಇದೆಯೇ ; ಕೇಂದ್ರದ ಆಯುಷ್ಮಾನ್ ಭಾರತ್ ಯೋಜನೆ ಸೌಲಭ್ಯ ದೊರೆಯುತ್ತಿದೆಯೇ ; ಆರೋಗ್ಯ ತಪಾಸಣಾ ವ್ಯವಸ್ಥೆ ಕಡ್ಡಾಯವಾಗಿದೆಯೇ; ಇದ್ದರೆ, ಎಷ್ಟು ತಿಂಗಳಿಗೊಮ್ಮೆ ತಪಾಸಣಾ ಕಾರ್ಯವನ್ನು ಮಾಡಲಾಗುವುದು ; (ವಿವರ ನೀಡುವುದು)

(ಊ) ಪೊಲೀಸರ ಮತ್ತು ಅಧಿಕಾರಿಗಳ ದೈಹಿಕ ಕ್ಷಮತೆ ಅಳೆಯುವ ಮಾನದಂಡಗಳೇನು; Out of Shape ಇರುವವರಿಗೆ ಯಾವ ರೀತಿ ಎಚ್ಚರಿಕೆ, ಶಿಕ್ಷೆ ಸರಿಮಾಡುವ ವಿಧಾನಗಳಿವೆ ? (ವಿವರ ನೀಡುವುದು)

## ಬೆಂಗಳೂರಿನಲ್ಲಿ ದಿನೇ ದಿನೇ ಬೃಹದಾಕಾರವಾಗಿರುವ ಕಸ ವಿಲೇವಾರಿ ಸಮಸ್ಯೆ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೦೪ (೧೧೩೪) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಕಸದ ಸಮಸ್ಯೆ ದಿನೇ ದಿನೇ ಬೃಹದಾಕಾರವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ತೆಗೆದುಕೊಂಡ ಕ್ರಮಗಳನ್ನು ತಿಳಿಸುವುದು ; ಕಸ ಸಂಗ್ರಹಿಸುವಿಕೆ, ಸಾಗಣೆ ಮತ್ತು ವಿಲೇವಾರಿಗೆ ವಹಿಸಿರುವ ಕ್ರಮಗಳು

ಯಾವುವು ; (ಸಂಪೂರ್ಣ ಮಾಹಿತಿ ನೀಡುವುದು) ಹಸಿ ಕಸ ಮತ್ತು ಒಣ ಕಸ ಹೇಗೆ ವಿಲೇವಾರಿ ಮಾಡಲಾಗುವುದು;

(ಆ) ಹಸಿ ಕಸ ವಿಲೇವಾರಿಗೆ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು ; ಹಸಿ ಕಸ ವಿಂಗಡಿಸಿ ಸಮರ್ಪಕವಾಗಿ ಬಳಸುವ/ವಿಲೇವಾರಿ ಮಾಡುವ ವ್ಯವಸ್ಥೆ ಏಕೆ ಜಾರಿಗೊಳಿಸಿರುವುದಿಲ್ಲ ; ವಿದೇಶಗಳ ಮಾದರಿಯಲ್ಲಿ ಗೊಬ್ಬರ ತಯಾರಿಸಲು ಮತ್ತು Power generation ಮಾಡಲು ಕಸವನ್ನು ಏಕೆ ಬಳಸಿಕೊಳ್ಳುತ್ತಿಲ್ಲ ; (ವಿವರಿಸುವುದು)

(ಇ) Hazardous Waste ಸಂಗ್ರಹ ಮತ್ತು ವಿಲೇವಾರಿ ಹೇಗೆ ಮಾಡಲಾಗುತ್ತದೆ ; ಅದಕ್ಕೆ ಇರುವ ಮಾರ್ಗಸೂಚಿಗಳೇನು; ಆಸ್ಪತ್ರೆಗಳಲ್ಲಿನ ಕಸ ಸಂಗ್ರಹ ಮತ್ತು ವಿಲೇವಾರಿಗೆ ವಾರ್ಷಿಕ ಎಷ್ಟು ಹಣ ಬಳಸಲಾಗುತ್ತದೆ ; ರಾಜ್ಯದಲ್ಲಿ ಎಷ್ಟು ಆಸ್ಪತ್ರೆಗಳಿಂದ ಈ ರೀತಿ ಸಂಗ್ರಹ ಮತ್ತು ವಿಲೇವಾರಿ ಮಾಡಲಾಗುತ್ತದೆ ; ಆಸ್ಪತ್ರೆಗಳಿಂದ ಕಸ ವಿಲೇವಾರಿಗೆ ಎಷ್ಟು ಶುಲ್ಕ ಸಂಗ್ರಹಿಸಲಾಗುತ್ತದೆ ; ಮಾನದಂಡಗಳೇನು ; (ವಿವರ ಒದಗಿಸುವುದು)

(ಈ) ಪ್ರಾಣಿಗಳ ವಧೆ ನಂತರ ಅದರ ಚರ್ಮ, ಅಶುಚಿಗೊಳಿಸಿದ ವಸ್ತುಗಳನ್ನು ಹೇಗೆ ವಿಲೇವಾರಿ ಮಾಡಲಾಗುತ್ತದೆ ; ಕೋಳಿ, ಕುರಿ, ಮೀನು, ಮೇಕೆ ಮತ್ತು ಹಂದಿ ಇವುಗಳ ಕಸ ವಿಲೇವಾರಿ ಬೆಂಗಳೂರಿನಲ್ಲಿ ಮತ್ತು ರಾಜ್ಯದಲ್ಲಿ ಎಷ್ಟು ಉತ್ಪತ್ತಿಯಾಗುತ್ತದೆ ಮತ್ತು ಇದನ್ನು ಹೇಗೆ ವಿಲೇವಾರಿ ಮಾಡಲಾಗುತ್ತದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಪ್ರಾಣಿಗಳ ಮಾಂಸ ತೊಳೆದ ನೀರು ಕೆರೆಗಳನ್ನು ಮತ್ತು ನದಿಗಳನ್ನು ಕಲುಷಿತಗೊಳಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಊ) ಹಳೆಯ ಕಟ್ಟಡಗಳನ್ನು ಒಡೆದಾಗ ಅದರ ವಿಲೇವಾರಿ ಹೇಗೆ ಮಾಡಲಾಗುತ್ತದೆ ; ಎಷ್ಟು ವರ್ಷ ಹಳೆಯದಾದ ಕಟ್ಟಡವನ್ನು ಒಡೆಯಬಹುದು ; ಇದರ ಪೂರ್ಣ ಮಾನದಂಡಗಳೇನು; ಕಟ್ಟಡ ಒಡೆದಾಗ ಬೇಡವಾದ ಸಾಮಗ್ರಿಗಳನ್ನು ರಸ್ತೆಬದಿ, ಖಾಲಿ ಸೈಟು ಜಾಗಗಳಲ್ಲಿ ಹಾಕುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಅವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜಕಾಲುವೆ ಒತ್ತುವರಿ ಹಾಗೂ ಅಕ್ರಮವಾಗಿ ಕಟ್ಟಡ ನಿರ್ಮಾಣ ಮಾಡಿರುವ ಬಗ್ಗೆ

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) :–**

೧೦೦೫ (೧೧೭೧) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ಮುನ್ನೆಕೊಳಾಲ ಗ್ರಾಮದ ಸರ್ವೆ ನಂ. ೨೧, ೨೨, ೨೩, ೨೪, ೨೫, ೨೬, ೨೮ ,೨೯, ೩೦, ೩೨ ಮತ್ತು ೩೪ರಲ್ಲಿ ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆಯಾದ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಲೇಔಟ್‌ಗೆ ಸಂಬಂಧಿಸಿದಂತೆ ; ರಾಜಕಾಲುವೆ, ಪಾರ್ಕ್ ಹಾಗೂ ಸಾರ್ವಜನಿಕ ಬಳಕೆಯ ಜಾಗಗಳ ಒತ್ತುವರಿ ಮತ್ತು ನಿಯಮಬಾಹಿರ ಕಟ್ಟಡ ನಿರ್ಮಾಣದ ಕುರಿತು ಸರ್ಕಾರ ಸಮಗ್ರ ತನಿಖೆ ನಡೆಸಿದೆಯೇ ; ಒತ್ತುವರಿ ದೃಢಪಟ್ಟಿದ್ದರೆ

ತೆರವುಗೊಳಿಸಲು ಹಾಗೂ ನಿಯಮ ಉಲ್ಲಂಘನೆಗೆ ಕಾರಣರಾದ ವ್ಯಕ್ತಿಗಳು ಮತ್ತು ಕರ್ತವ್ಯಲೋಪ/ ನಿರ್ಲಕ್ಷ್ಯ ಎಸಗಿರುವ ಅಧಿಕಾರಿಗಳ ವಿರುದ್ಧ ಯಾವ ಕಾನೂನು ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಆ) ಸದರಿ ಸರ್ವೆ ನಂಬರುಗಳ ವ್ಯಾಪ್ತಿಯಲ್ಲಿ ರಾಜಕಾಲುವೆ/ಚರಂಡಿ ಪ್ರದೇಶವನ್ನು ಒತ್ತುವರಿ ಮಾಡಿ ಕಟ್ಟಡ ಅಥವಾ ಇತರ ನಿರ್ಮಾಣಗಳನ್ನು ಮಾಡಿರುವ ಕುರಿತು ದೂರುಗಳು ಬಂದಿವೆಯೇ; ಬಂದಿದ್ದಲ್ಲಿ, ರಾಜಕಾಲುವೆಯ ನಿಖರ ಗಡಿ ಗುರುತಿಸಿ ಜಂಟಿ ಸರ್ವೆ ನಡೆಸಲಾಗಿದೆಯೇ ಮತ್ತು ಒತ್ತುವರಿ ಕಂಡುಬಂದಲ್ಲಿ ಇದುವರೆಗೆ ಎಷ್ಟು ಒತ್ತುವರಿ ತೆರವುಗೊಳಿಸಲಾಗಿದೆ ; ತೆರವುಗೊಳಿಸದೆ ಇದ್ದಲ್ಲಿ, ಅದಕ್ಕೆ ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೦೬ (೧೧೭೭) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈವರೆಗೆ ಅಕ್ರಮವಾಗಿ ನೆಲೆಸಿರುವ ಎಷ್ಟು ವಿದೇಶಿ ಪ್ರಜೆಗಳನ್ನು ಪತ್ತೆ ಹಚ್ಚಲಾಗಿದೆ ; ಯಾವೆಲ್ಲಾ ದೇಶದ ಪ್ರಜೆಗಳು ಪತ್ತೆಯಾಗಿದ್ದಾರೆ ; (ದೇಶವಾರು, ಪತ್ತೆಯಾಗಿರುವ ಜಿಲ್ಲಾವಾರು ವಿವರ ನೀಡುವುದು)

(ಆ) ಪತ್ತೆಯಾಗಿರುವ ಅಕ್ರಮ ಪ್ರಜೆಗಳಲ್ಲಿ ಎಷ್ಟು ಜನರಲ್ಲಿ ನಕಲಿ ಅಥವಾ ಅಕ್ರಮವಾಗಿ ಪಡೆದ ಭಾರತೀಯ ಗುರುತಿನ ದಾಖಲೆಗಳನ್ನು ಹೊಂದಿದ್ದಾರೆ ; (ದಾಖಲೆಗಳ ಪ್ರಕಾರವಾರು ವಿವರವನ್ನು ನೀಡುವುದು)

(ಇ) ಅಕ್ರಮ ವಿದೇಶಿ ಪ್ರಜೆಗಳ ವಿರುದ್ಧ ದರೋಡೆ, ಮಾದಕ ದ್ರವ್ಯ ಸಾಗಣೆ, ಆರ್ಥಿಕ ವಂಚನೆ, ನಕಲಿ ದಾಖಲೆ ಸೃಷ್ಟಿ ಹಾಗೂ ಇತರ ಅಪರಾಧ ಪ್ರಕರಣಗಳು ಎಷ್ಟು ದಾಖಲಾಗಿವೆ ; ಪ್ರಕರಣಗಳ ಸ್ವರೂಪ ಮತ್ತು ಜಿಲ್ಲಾವಾರು ವಿವರವನ್ನು ನೀಡುವುದು ;

(ಈ) ನೆರೆಯ ಬಾಂಗ್ಲಾದೇಶದಿಂದ ಬಂದು ಇಲ್ಲಿ ಅಕ್ರಮವಾಗಿ ನೆಲೆಸಿರುವವರ ವಿವರವೇನು; ಈವರೆಗೆ ಎಷ್ಟು ಜನರನ್ನು ಪತ್ತೆ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳನ್ನು ಪತ್ತೆಹಚ್ಚಲು ರಾಜ್ಯ ಸರ್ಕಾರವು ವಿಶೇಷ ಕಾರ್ಯಾಚರಣೆ, ಪರಿಶೀಲನಾ ಅಭಿಯಾನ ಅಥವಾ ವಿಶೇಷ ತನಿಖಾ ತಂಡಗಳನ್ನು ರಚಿಸಿರುವುದೇ ; ಇದ್ದಲ್ಲಿ, ಅದರ ವಿವರಗಳೇನು ;

(ಊ) ಪತ್ತೆಯಾದ ಅಕ್ರಮ ವಿದೇಶಿ ಪ್ರಜೆಗಳಲ್ಲಿ ಎಷ್ಟು ಮಂದಿಯನ್ನು ಈಗಾಗಲೇ ಗಡಿಪಾರು ಮಾಡಲಾಗಿದೆ ಹಾಗೂ ಎಷ್ಟು ಪ್ರಕರಣಗಳು ಕೇಂದ್ರ ಸರ್ಕಾರ ಅಥವಾ ಸಂಬಂಧಿತ ಪ್ರಾಧಿಕಾರಗಳ ಪರಿಶೀಲನೆಯಲ್ಲಿವೆ ?

# ರಾಜ್ಯದಲ್ಲಿ ಬಂಡವಾಳ ಹೂಡಿಕೆ ಮಾಡಿರುವ ಕಂಪನಿಗಳು

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೦೭ (೧೧೭೮) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪ರಿಂದ ರವರೆಗೆ ರಾಜ್ಯದಲ್ಲಿ ಎಷ್ಟು ಸ್ವದೇಶಿ ಮತ್ತು ವಿದೇಶಿ ಕಂಪನಿಗಳು ಬಂಡವಾಳ ಹೂಡಿಕೆ ಮಾಡಲು ಒಪ್ಪಂದ (MoU) ಮಾಡಿಕೊಂಡಿವೆ ; ಅವುಗಳಲ್ಲಿ ಎಷ್ಟು ಕಂಪನಿಗಳು ವಾಸ್ತವವಾಗಿ ಉತ್ಪಾದನೆ ಆರಂಭಿಸಿವೆ ; (ಜಿಲ್ಲಾವಾರು, ವರ್ಷವಾರು ಹಾಗೂ ನಗರವಾರು ವಿವರ ನೀಡುವುದು);

(ಆ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಒಟ್ಟು ಎಷ್ಟು ಕೋಟಿ ರೂ.ಬಂಡವಾಳ ಹೂಡಿಕೆಯಾಗಿದೆ ; ಅದರಲ್ಲಿ ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಎಷ್ಟು ; ಉಳಿದ ಜಿಲ್ಲೆಗಳಲ್ಲಿ ಎಷ್ಟು ಬಂಡವಾಳ ಹೂಡಿಕೆಯಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಸದರಿ ಬಂಡವಾಳ ಹೂಡಿಕೆಯಿಂದ ಒಟ್ಟು ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ ; ಅವುಗಳಲ್ಲಿ ಕನ್ನಡಿಗರಿಗೆ ಎಷ್ಟು ರಾಜ್ಯದ ಹೊರಗಿನವರಿಗೆ ಎಷ್ಟು ಉದ್ಯೋಗ ದೊರೆತಿದೆ ; (ಶೇಕಡಾವಾರು ಹಾಗೂ ಜಿಲ್ಲಾವಾರು ವಿವರ ನೀಡುವುದು)

(ಈ) ರಾಜ್ಯ ಸರ್ಕಾರ ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡುವ ಕುರಿತು ಹೊರಡಿಸಿರುವ ನೀತಿ, ಆದೇಶಗಳು ಮತ್ತು

ಮಾರ್ಗಸೂಚಿಗಳ ಅನುಷ್ಠಾನವನ್ನು ಪರಿಶೀಲಿಸಲು ಯಾವ ಕ್ರಮಗಳನ್ನು ಕೈಗೊಂಡಿದೆ ; ಎಷ್ಟು ಕಂಪನಿಗಳಲ್ಲಿ ಪರಿಶೀಲನೆ ನಡೆಸಲಾಗಿದೆ ಹಾಗೂ ನಿಯಮ ಉಲ್ಲಂಘಿಸಿದ ಎಷ್ಟು ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ ;

(ಉ) ಮೈಸೂರು, ಮಂಗಳೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರಗಿ, ಶಿವಮೊಗ್ಗ ಸೇರಿದಂತೆ ಇತರ ನಗರಗಳಲ್ಲಿ ಹೂಡಿಕೆ ಆಕರ್ಷಿಸಲು ಸರ್ಕಾರ ಕೈಗೊಂಡಿರುವ ವಿಶೇಷ ಕ್ರಮಗಳೇನು; ಅದರ ಫಲವಾಗಿ ಜಿಲ್ಲಾವಾರು ಎಷ್ಟು ಹೂಡಿಕೆ ಹಾಗೂ ಉದ್ಯೋಗ ಸೃಷ್ಟಿಯಾಗಿದೆ ;

(ಊ) ಕರ್ನಾಟಕವು ಬಂಡವಾಳ ಹೂಡಿಕೆ ಆಕರ್ಷಣೆಯಲ್ಲಿ ದೇಶದಲ್ಲಿ ಎಷ್ಟನೇ ಸ್ಥಾನದಲ್ಲಿದೆ ಮತ್ತು ಅದಕ್ಕೆ ಆಧಾರವಾದ ಅಧಿಕೃತ ವರದಿ, ಸಂಸ್ಥೆ ಮತ್ತು ಅಂಕಿ–ಅಂಶಗಳು ಯಾವುವು?

## ರಾಜ್ಯಕ್ಕೆ ಕೇಂದ್ರದ ಅನುದಾನ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೦೮ (೧೧೭೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩–೨೪ನೇ ಸಾಲಿನಿಂದ ಈವರೆಗೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಯೋಜನಾವಾರು ಹಾಗೂ ಇಲಾಖಾವಾರು ಬಿಡುಗಡೆ ಮಾಡಿದ ಅನುದಾನದ ಒಟ್ಟು ಮೊತ್ತ ಎಷ್ಟು; (ಸಂಪೂರ್ಣ ವಿವರವನ್ನು ನೀಡುವುದು)

(ಆ) ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಲ್ಲಿಸಬೇಕಾಗಿದ್ದ ಬಳಕೆ ಪ್ರಮಾಣಪತ್ರಗಳು (UCs), ಲೆಕ್ಕಪತ್ರಗಳು ಹಾಗೂ ಇತರೆ ಅಗತ್ಯ ದಾಖಲೆಗಳಲ್ಲಿ ಎಷ್ಟು ದಾಖಲೆಗಳು ಬಾಕಿ ಉಳಿದಿವೆ ; (ಇಲಾಖಾವಾರು ಮತ್ತು ಯೋಜನಾವಾರು ವಿವರವನ್ನು ನೀಡುವುದು)

(ಇ) ಅಗತ್ಯ ದಾಖಲೆಗಳನ್ನು ಸಮಯಕ್ಕೆ ಸಲ್ಲಿಸದಿರುವ ಕಾರಣ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕಿದ್ದ ಯಾವುದೇ ಅನುದಾನ ವಿಳಂಬಗೊಂಡಿದೆಯೇ ಅಥವಾ ತಡೆಹಿಡಿಯಲ್ಪಟ್ಟಿದೆಯೇ ; ಹಾಗಿದ್ದರೆ, ಅದರ ಯೋಜನಾವಾರು ವಿವರ ಹಾಗೂ ಅನುದಾನದ ಮೊತ್ತ ಎಷ್ಟು ;

(ಈ) ಕೇಂದ್ರ ಸರ್ಕಾರದಿಂದ ಬಿಡುಗಡೆಯಾದ ಅನುದಾನವನ್ನು ಸಮರ್ಪಕವಾಗಿ ಬಳಸುವುದು ಹಾಗೂ ಭವಿಷ್ಯದಲ್ಲಿ ಯಾವುದೇ ಅನುದಾನ ವಿಳಂಬವಾಗದಂತೆ ಅಗತ್ಯ ದಾಖಲೆಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

## ಬಿಡದಿ ಉಪನಗರ (ಟೌನ್ ಶಿಪ್) ಯೋಜನೆಯ ಭೂ ಸ್ವಾಧೀನ ಮತ್ತು ರೈತರ ಪ್ರತಿಭಟನೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೦೯ (೧೦೮೬) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಡದಿ ಟೌನ್‌ಶಿಪ್ ಯೋಜನೆಗಾಗಿ ಕೆಂಪಯ್ಯನಪಾಳ್ಯ, ಮಂಡಲಹಳ್ಳಿ ಹಾಗೂ ವಡೇರಹಳ್ಳಿ ಗ್ರಾಮಗಳ ೫೧೮ ಎಕರೆ

ಭೂ ಸ್ವಾಧೀನಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆಯೇ ; ಈ ಯೋಜನೆಯ ಒಟ್ಟು ಅಂದಾಜು ವೆಚ್ಚವೆಷ್ಟು ;

(ಆ) ಭೂ ಸ್ವಾಧೀನದಿಂದ ೭೫೪೪ಕ್ಕೂ ಹೆಚ್ಚು ರೈತರ ಕೃಷಿ ಜಮೀನು ಕೈತಪ್ಪುತ್ತಿದ್ದು, ರೈತರು ನಿರಂತರ ಪ್ರತಿಭಟನೆ ನಡೆಸುತ್ತಿರುವುದು ಗಮನಕ್ಕೆ ಬಂದಿದೆಯೇ ; ರೈತರ ವಿರೋಧದ ನಡುವೆಯೂ ಯೋಜನೆ ಮುಂದುವರಿಸಲು ಕಾರಣವೇನು ;

(ಇ) ಜಮೀನುಗಳಿಗೆ ಎಕರೆಗೆ ರೂ. ೨.೦೭ ರಿಂದ ರೂ. ೨.೫೦ ಕೋಟಿಯವರೆಗೆ ನಿಗದಿಪಡಿಸಿರುವ ಪರಿಹಾರ ಧನವನ್ನು ಪ್ರಸ್ತುತ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ವೈಜ್ಞಾನಿಕವಾಗಿ ನಿಗದಿಪಡಿಸಲಾಗಿದೆಯೇ ಅಥವಾ ಏಕಪಕ್ಷೀಯವಾಗಿ ತೀರ್ಮಾನಿಸಲಾಗಿದೆಯೇ ;

(ಈ) ಭೂಮಿ ಕಳೆದುಕೊಂಡು ಬೀದಿಪಾಲಾಗುವ ಸಣ್ಣ ಮತ್ತು ಅತಿ ಸಣ್ಣ ರೈತರ ಪರ್ಯಾಯ ಜೀವನೋಪಾಯ ಹಾಗೂ ಪುನರ್ವಸತಿಗಾಗಿ ಸರ್ಕಾರ ರೂಪಿಸಿರುವ ಯೋಜನೆಗಳೇನು ?

## ನಗರಾಭಿವೃದ್ಧಿ ಪ್ರಾಧಿಕಾರಗಳ ನೌಕರರಿಗೆ ನಗದು ರಹಿತ ವೈದ್ಯಕೀಯ ಸೌಲಭ್ಯ ಕಲ್ಪಿಸುವ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೧೦ (೧೦೮೭) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ಖಾಯಂ ನೌಕರರು ಹಾಗೂ ಅವರ ಕುಟುಂಬದವರಿಗೆ 'ಜ್ಯೋತಿ ಸಂಜೀವಿನಿ' ಮತ್ತು

'ಆರೋಗ್ಯ ಭಾಗ್ಯ' ಯೋಜನೆಗಳಡಿ ನಗದು ರಹಿತ ಚಿಕಿತ್ಸೆ ಜಾರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ನೋಡಲ್ ಅಧಿಕಾರಿಯನ್ನು ನೇಮಿಸಿ ಮೂರು ವರ್ಷಗಳು ಕಳೆದರೂ ಇದುವರೆಗೆ ಜಾರಿಯಾಗದಿರಲು ಕಾರಣವೇನು ;

(ಇ) ನಗದು ರಹಿತ ಚಿಕಿತ್ಸಾ ಸೌಲಭ್ಯವಿಲ್ಲದೆ ತುರ್ತು ಸಂದರ್ಭಗಳಲ್ಲಿ ನೌಕರರು ಎದುರಿಸುತ್ತಿರುವ ತೊಂದರೆಗಳ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಎಲ್ಲಾ ಪ್ರಾಧಿಕಾರಗಳ ನೌಕರರಿಗೆ ಈ ಯೋಜನೆಗಳ ಸೌಲಭ್ಯವನ್ನು ತಕ್ಷಣವೇ ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ನಗರಾಭಿವೃದ್ಧಿ ಪ್ರಾಧಿಕಾರಗಳ ನೌಕರರಿಗೆ ಏಕರೂಪ ವೃಂದ ಮತ್ತು ನೇಮಕಾತಿ ನಿಯಮ ರೂಪಿಸುವ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೧೧ (೧೦೮೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನಗರಾಭಿವೃದ್ಧಿ ಪ್ರಾಧಿಕಾರಗಳ ನೌಕರರಿಗೆ 'ಏಕರೂಪ ವೃಂದ ಮತ್ತು ನೇಮಕಾತಿ ನಿಯಮ' (C and R Rules) ರೂಪಿಸಲು ಸರ್ಕಾರ ಸಮಿತಿ ರಚಿಸಿರುವುದೇ ;

(ಆ) ೬ ತಿಂಗಳ ಒಳಗಾಗಿ ನಿಯಮ ರೂಪಿಸಿ ಜಾರಿಗೆ ತರುವುದಾಗಿ ಸಚಿವರು ನೀಡಿದ್ದ ಭರವಸೆ ಹಾಗೂ ಸಮಿತಿ ರಚಿಸಿ ವರ್ಷಗಳೇ

ಕಳೆದಿದ್ದರೂ ಇನ್ನು ನಿಯಮ ಜಾರಿಯಾಗದಿರಲು ಕಾರಣವೇನು ;

(ಇ) ಏಕರೂಪ ನಿಯಮವಿಲ್ಲದೆ ನೌಕರರಿಗೆ ಮುಂಬಡ್ತಿ ಸಿಗದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಈ ನಿಯಮಗಳನ್ನು ತಕ್ಷಣವೇ ಅಂತಿಮಗೊಳಿಸಿ ಜಾರಿಗೆ ತರಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಪೊಲೀಸ್ ಇಲಾಖೆಯಲ್ಲಿನ DYSP ಹಾಗೂ ಸಿವಿಲ್ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೧೨ (೧೦೮೯) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಪೊಲೀಸ್ ಇಲಾಖೆಯಲ್ಲಿರುವ ಸಿವಿಲ್ ಡಿವೈಎಸ್ಪಿ (DySP) ಹಾಗೂ ಸಿವಿಲ್ ಪೊಲೀಸ್ ಇನ್ಸ್‌ಪೆಕ್ಟರ್‌ಗಳ (PI) ಒಟ್ಟು ಮಂಜೂರಾದ ಹುದ್ದೆಗಳ ಸಂಖ್ಯೆ ಎಷ್ಟು; (KSRP/CAR/DAR/CID ಮೀಸಲು ಹುದ್ದೆಗಳನ್ನು ಹೊರತುಪಡಿಸಿ ವಿವರ ನೀಡುವುದು)

(ಆ) ರಾಜ್ಯದಲ್ಲಿ ಡಿವೈಎಸ್ಪಿ/ಎಸಿಪಿ ಮತ್ತು ಸಿವಿಲ್ ಪೊಲೀಸ್ ಇನ್ಸ್‌ಪೆಕ್ಟರ್‌ಗಳು 'ಠಾಣಾಧಿಕಾರಿ'ಗಳಾಗಿ (SHO) ಹಾಗೂ 'ವೃತ್ತ ನಿರೀಕ್ಷಕರು'ಗಳಾಗಿ (Circle Inspectors) ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಠಾಣೆಗಳು ಮತ್ತು ವೃತ್ತಗಳ (Circles) ಸಂಖ್ಯೆ ಎಷ್ಟು ;

(ಇ) ರಾಜ್ಯದಲ್ಲಿ CCB ಒಳಗೊಂಡಂತೆ ಡಿವೈಎಸ್ಪಿ/ಎಸಿಪಿ ಹಾಗೂ ಸಿವಿಲ್ ಇನ್ಸ್‌ಪೆಕ್ಟರ್‌ಗಳು ಒಟ್ಟು ಕಾರ್ಯಕಾರಿ (Executive) ಮತ್ತು ಕಾರ್ಯಕಾರಿಯೇತರ (Non-Executive) ಹುದ್ದೆಗಳ ಸಂಖ್ಯೆ ಎಷ್ಟು; (ಸಂಖ್ಯೆ ಮತ್ತು ಪ್ರತ್ಯೇಕ ಶೇಕಡಾವಾರು ವಿವರ ನೀಡುವುದು)

(ಈ) ಇಲಾಖೆಯಲ್ಲಿ ಕಾರ್ಯಕಾರಿ ಹುದ್ದೆಗಳಿಗೆ ಸೂಕ್ತವಲ್ಲದ (ಅಮಾನತ್ತು/ಇಲಾಖಾ ವಿಚಾರಣೆ/ಪ್ರಕರಣ ಎದುರಿಸುತ್ತಿರುವ) ಅಧಿಕಾರಿಗಳ ಸಂಖ್ಯೆ ಎಷ್ಟು; ಹಾಗೂ ರಾಜ್ಯಾದ್ಯಂತ ಪ್ರಸ್ತುತ ಖಾಲಿ ಇರುವ ಡಿವೈಎಸ್ಪಿ ಮತ್ತು ಸಿವಿಲ್ ಇನ್ಸ್‌ಪೆಕ್ಟರ್ ಹುದ್ದೆಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ವಿದೇಶಿ ಪ್ರವಾಸಿಗರ ಸುರಕ್ಷತೆ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೧೩ (೧೯೯೦) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ಕುಟ್ಟಾದಲ್ಲಿ ವಿದೇಶಿ ಪ್ರವಾಸಿಗರ ಮೇಲೆ ನಡೆದ ದುಷ್ಕೃತ್ಯದ ಹಿನ್ನೆಲೆಯಲ್ಲಿ, ರಾಜ್ಯದ ಹೋಮ್‌ಸ್ಟೇಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಯ ಹಿನ್ನೆಲೆ ಪರಿಶೀಲನೆಯನ್ನು ಕಡ್ಡಾಯಗೊಳಿಸಲಾಗಿದೆಯೇ ;

(ಆ) ನೂತನ ಮಾರ್ಗಸೂಚಿಯಂತೆ ಹೋಮ್ ಸ್ಟೇ ಸಿಬ್ಬಂದಿಯ ಪೊಲೀಸ್ ಹಿನ್ನೆಲೆ ಪರಿಶೀಲನೆಯನ್ನು (Police Verification) ಕಡ್ಡಾಯಗೊಳಿಸಲಾಗಿದೆಯೇ ; ಹಾಗೂ ಇದನ್ನು ರಾಜ್ಯಾದ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಲಾಗಿದೆಯೇ ;

(ಇ) ನೋಂದಾಯಿತ ಹೋಮ್‌ಸ್ಟೇಗಳನ್ನು 'ಇ–ಬೀಟ್' (e-beat) ವ್ಯಾಪ್ತಿಗೆ ತರುವುದು, ಜಿಪಿಎಸ್ ಮೂಲಕ ಪೊಲೀಸ್ ಭೇಟಿ ಖಾತರಿಪಡಿಸುವುದು ಹಾಗೂ ಸಿಬ್ಬಂದಿ ವಿವರಗಳ ನಿರ್ವಹಣೆಯನ್ನು ಕಡ್ಡಾಯಗೊಳಿಸಲಾಗಿದೆಯೇ;

(ಈ) ಸಿಬ್ಬಂದಿಗೆ ಲೈಂಗಿಕ ಕಿರುಕುಳ ಹಾಗೂ ಪೋಕ್ಸೋ (POCSO) ಕಾಯ್ದೆ ಕುರಿತು ತರಬೇತಿ ನೀಡುವುದನ್ನು ಕಡ್ಡಾಯಗೊಳಿಸಲಾಗಿದೆಯೇ ; ಈ ನಿಯಮಗಳನ್ನು ಉಲ್ಲಂಘಿಸುವ ಹೋಮ್‌ಸ್ಟೇಗಳ ವಿರುದ್ಧ ಕೈಗೊಳ್ಳಲಾಗುವ ಕ್ರಮಗಳೇನು ?

## ರಾಜ್ಯದ ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನ ವೆಚ್ಚದ ವಿವರ ಹಾಗೂ ಆರ್ಥಿಕ ಸ್ಥಿತಿಗತಿಯ ಕುರಿತು

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೧೪ (೧೯೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಐದು ಗ್ಯಾರಂಟಿ ಯೋಜನೆಗಳಿಗೆ ಲಕ್ಷ ಕೋಟಿಗೂ ಅಧಿಕ ವೆಚ್ಚವಾಗಿರುವುದು ನಿಜವೇ ; ಗೃಹಲಕ್ಷ್ಮಿ ಯೋಜನೆಗೆ ರೂ.೬೯,೭೮೩ ಕೋಟಿ ಹಾಗೂ 'ಗೃಹಜ್ಯೋತಿ' ಯೋಜನೆಗೆ ರೂ.೨೬,೧೧೫ ಕೋಟಿ ವೆಚ್ಚವಾಗಿರುವುದು ಸರ್ಕಾರದ ಅಧಿಕೃತ ಅಂಕಿ–ಅಂಶಗಳೇ ; (ಮಾಹಿತಿ ನೀಡುವುದು)

(ಆ) 'ಶಕ್ತಿ' ಯೋಜನೆಯಡಿ ಮಹಿಳಾ ಪ್ರಯಾಣಿಕರ ಉಚಿತ ಪ್ರಯಾಣಕ್ಕಾಗಿ ಸಾರಿಗೆ ನಿಗಮಗಳಿಗೆ ರೂ.೧೮,೯೪೩ ಕೋಟಿ ಭರಿಸಲಾಗಿದೆಯೇ ; 'ಅನ್ನಭಾಗ್ಯ' ಯೋಜನೆಯಡಿ DBT ಮತ್ತು

ಹೆಚ್ಚುವರಿ ಆಹಾರ ಧಾನ್ಯ ವಿತರಣೆಗೆ ಒಟ್ಟು ರೂ.೧೮,೮೯೭ ಕೋಟಿಗೂ ಅಧಿಕ ವೆಚ್ಚವಾಗಿರುವುದು ನಿಜವೇ ;

(ಇ) 'ಯುವನಿಧಿ' ಯೋಜನೆಯಡಿ ಕೇವಲ ೩.೩೮ ಲಕ್ಷ ಅಭ್ಯರ್ಥಿಗಳಿಗೆ ರೂ.೯೫೦ ಕೋಟಿ ಹಂಚಿಕೆಯಾಗಿದ್ದು, ಫಲಾನುಭವಿಗಳ ಸಂಖ್ಯೆ ಕಡಿಮೆಯಿರಲು ಕಠಿಣ ನಿಯಮಾವಳಿಗಳು ಕಾರಣವಲ್ಲವೇ ;

(ಈ) ಗ್ಯಾರಂಟಿ ಯೋಜನೆಗಳ ಬೃಹತ್ ವೆಚ್ಚದಿಂದ ನೀರಾವರಿ, ಲೋಕೋಪಯೋಗಿ ಹಾಗೂ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಅನುದಾನಕ್ಕೆ ಕಡಿತ ಉಂಟಾಗುತ್ತಿದೆಯೇ ; ಹೆಚ್ಚುತ್ತಿರುವ ಸಾಲದ ಹೊರೆ ಮತ್ತು ವಿತ್ತೀಯ ಕೊರತೆಯನ್ನು (Fiscal Deficit) ನಿಯಂತ್ರಿಸಲು ರೂಪಿಸಿರುವ ಹಣಕಾಸು ಯೋಜನೆಗಳೇನು ? (ಸಂಪೂರ್ಣ ವಿವರ ನೀಡುವುದು)

## ಹುಮ್ನಾಬಾದ್ ಎಪಿಎಂಸಿ ಪ್ರಾಂಗಣದಲ್ಲಿನ ರೈತಭವನ ಕಟ್ಟಡ ದುರಸ್ತಿ ಹಾಗೂ ಬಳಕೆಯ ಕುರಿತು

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೧೫ (೧೮೯೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೀದರ್ ಜಿಲ್ಲೆಯ ಹುಮ್ನಾಬಾದ್ ಎಪಿಎಂಸಿ ಪ್ರಾಂಗಣದಲ್ಲಿ ರೂ.೪.೮೭ ಲಕ್ಷ ಅನುದಾನದಲ್ಲಿ ನಿರ್ಮಿಸಲಾದ ರೈತಭವನವು ಇದುವರೆಗೆ ಬಳಕೆಯಾಗದೆ ಪಾಳುಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಆ ಕಟ್ಟಡಕ್ಕೆ ವಿದ್ಯುತ್, ಕುಡಿಯುವ ನೀರು ಹಾಗೂ ಶೌಚಾಲಯದಂತಹ ಮೂಲಸೌಕರ್ಯಗಳನ್ನು ಕಲ್ಪಿಸದಿರಲು ಕಾರಣವೇನು ; ಈ ನಿರ್ಲಕ್ಷ್ಯಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಂಡ ಕ್ರಮಗಳೇನು ;

(ಇ) ಪ್ರಸ್ತುತ ಈ ಕಟ್ಟಡವು ನಿರ್ವಹಣೆಯಿಲ್ಲದೆ ಅಸಾಮಾಜಿಕ ಚಟುವಟಿಕೆಗಳ ತಾಣವಾಗಿ ಮಾರ್ಪಟ್ಟಿರುವುದು ನಿಜವೇ; ಹಾಗಿದ್ದಲ್ಲಿ, ಇದನ್ನು ದುರಸ್ತಿಗೊಳಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು ;

(ಈ) ಕೃಷಿ ಉತ್ಪನ್ನಗಳನ್ನು ತರುವ ರೈತರ ವಿಶ್ರಾಂತಿಗಾಗಿ ಈ ರೈತಭವನವನ್ನು ಅಗತ್ಯ ಸೌಲಭ್ಯಗಳೊಂದಿಗೆ ಮುಕ್ತಗೊಳಿಸಲು ಸರ್ಕಾರ ನಿಗದಿಪಡಿಸಿರುವ ಕಾಲಮಿತಿ ಏನು ?

## ಚಲನಚಿತ್ರ/ಒಟಿಟಿ ಮಾಧ್ಯಮಗಳಲ್ಲಿ ಅಶ್ಲೀಲ ವಿಷಯಗಳ ನಿಯಂತ್ರಣ ಹಾಗೂ ಮಹಿಳೆಯರ/ಅಪ್ರಾಪ್ತರ ಸುರಕ್ಷತೆ ಮತ್ತು ಶೀಘ್ರ ನ್ಯಾಯದ ಕುರಿತು

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೧೬ (೧೯೮೮) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿನಿಮಾ, ಒಟಿಟಿ (OTT) ಪ್ಲಾಟ್‌ಫಾರ್ಮ್‌ಗಳು ಮತ್ತು ಸಾಮಾಜಿಕ ಮಾಧ್ಯಮಗಳಲ್ಲಿ ಸಮಾಜದ ನೈತಿಕತೆಗೆ ಧಕ್ಕೆ ತರುತ್ತಿರುವ ಅಶ್ಲೀಲ ಹಾಗೂ ಆಕ್ಷೇಪಾರ್ಹ ವಿಷಯಗಳಿಗೆ (Content) ಕಡಿವಾಣ ಹಾಕಲು ಸರ್ಕಾರ ಕೈಗೊಂಡಿರುವ ಕಾನೂನಾತ್ಮಕ ಕ್ರಮಗಳೇನು ;

(ಆ) ರಾಜ್ಯದಲ್ಲಿ ಅಪ್ರಾಪ್ತ ಬಾಲಕಿಯರು ಹಾಗೂ ಮಹಿಳೆಯರ ಮೇಲಿನ ಪೈಶಾಚಿಕ ದೌರ್ಜನ್ಯ ಮತ್ತು ಅತ್ಯಾಚಾರ ಪ್ರಕರಣಗಳನ್ನು ತಡೆಯಲು ಮತ್ತು ಅವರ ಭದ್ರತೆಯನ್ನು ಖಾತ್ರಿಪಡಿಸಲು ಸರ್ಕಾರ ರೂಪಿಸಿರುವ ವಿಶೇಷ ಮುಂಜಾಗ್ರತಾ ಯೋಜನೆಗಳೇನು ;

(ಇ) ಇಂಟರ್ನೆಟ್ ಮತ್ತು ಸೈಬರ್ ಜಾಲದ ಮೂಲಕ ನಡೆಯುತ್ತಿರುವ ಹೆಣ್ಣು ಮಕ್ಕಳ ಅಕ್ರಮ ಸಾಗಾಣಿಕೆ/ಮಾರಾಟ ಜಾಲವನ್ನು (Trafficking Network) ತಡೆಯಲು ಸೈಬರ್ ಕ್ರೈಮ್ ಹಾಗೂ ಅಪರಾಧ ತನಿಖಾ ವಿಭಾಗಗಳು (CID) ಕೈಗೊಂಡಿರುವ ಕಠಿಣ ಕ್ರಮಗಳೇನು ;

(ಈ) ಮಹಿಳಾ ದೌರ್ಜನ್ಯ ಎಸಗುವ ಅಪರಾಧಿಗಳಲ್ಲಿ ಭಯ ಹುಟ್ಟಿಸಲು ಹಾಲಿ ಇರುವ ಕಾನೂನುಗಳನ್ನು ಮತ್ತಷ್ಟು ಬಿಗಿಗೊಳಿಸಲು ಹಾಗೂ ಈ ಸಂಬಂಧಿತ ಪ್ರಕರಣಗಳ ವಿಲೇವಾರಿಗೆ ಫಾಸ್ಟ್ ಟ್ರ್ಯಾಕ್ (Fast-track) ನ್ಯಾಯಾಲಯಗಳನ್ನು ಬಲಪಡಿಸಲು ಸರ್ಕಾರ ಕೈಗೊಂಡಿರುವ ತೀರ್ಮಾನಗಳೇನು ?

## ರಾಜ್ಯದಲ್ಲಿ ಹಾಗೂ ಬೀದರ್ ಜಿಲ್ಲೆಯಲ್ಲಿ ಹೆಚ್ಚುತ್ತಿರುವ ರಸ್ತೆ ಅಪಘಾತಗಳು ಮತ್ತು ತಡೆಗಟ್ಟುವ ಕ್ರಮಗಳ ಕುರಿತು

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೧೭ (೧೧೪೧) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ೧.೫೨ ಲಕ್ಷಕ್ಕೂ ಹೆಚ್ಚು ರಸ್ತೆ ಅಪಘಾತಗಳು ಸಂಭವಿಸಿ, ೩೯ ಸಾವಿರಕ್ಕೂ ಹೆಚ್ಚು ಜನರು

ಮೃತಪಟ್ಟು, ೧.೯೩ ಲಕ್ಷಕ್ಕೂ ಹೆಚ್ಚು ಜನರು ಗಾಯಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ವರದಿಯಂತೆ ಬೀದರ್ ಜಿಲ್ಲೆಯೊಂದರಲ್ಲೇ ೨,೭೩೯ ರಸ್ತೆ ಅಪಘಾತ ಪ್ರಕರಣಗಳು ದಾಖಲಾಗಿದ್ದು, ಜಿಲ್ಲೆಯಲ್ಲಿ ಸಂಭವಿಸಿದ ಸಾವು–ನೋವುಗಳ ಸಂಖ್ಯಾತ್ಮಕ ವಿವರವೇನು ; (ವರ್ಷವಾರು ಹಾಗೂ ತಾಲ್ಲೂಕುವಾರು ವಿವರ ನೀಡುವುದು)

(ಇ) ಬೀದರ್ ಸೇರಿದಂತೆ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಹಾಗೂ ರಾಷ್ಟ್ರೀಯ ರಾಜ್ಯ ಹೆದ್ದಾರಿಗಳಲ್ಲಿ ಅಪಘಾತಗಳು ಹೆಚ್ಚಾಗುತ್ತಿರುವುದಕ್ಕೆ ಪ್ರಮುಖ ಕಾರಣಗಳೇನು; ಮತ್ತು ಜಿಲ್ಲೆಯಲ್ಲಿ ಗುರುತಿಸಲಾಗಿರುವ ಅಪಾಯಕಾರಿ ತಿರುವುಗಳು/ಬ್ಲ್ಯಾಕ್ ಸ್ಪಾಟ್‌ಗಳು (Black Spots) ಎಷ್ಟು ;

(ಈ) ಬೀದರ್ ಜಿಲ್ಲೆಯಲ್ಲಿ ರಸ್ತೆ ಸುರಕ್ಷತೆ ಹೆಚ್ಚಿಸಲು, ಹೆದ್ದಾರಿ ದುರಸ್ತಿ, ಅವೈಜ್ಞಾನಿಕ ರಸ್ತೆ ತಡೆಗಳ ಸರಿಪಡಿಸುವಿಕೆ ಹಾಗೂ ಅವಶ್ಯಕ ಸಿಗ್ನಲಿಂಗ್ ಅಳವಡಿಸಲು ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲಿರುವ ಕ್ರಮಗಳೇನು ?

## ರಾಜ್ಯದಲ್ಲಿ ಸ್ಥಾಪನೆಯಾಗಿರುವ ನೂತನ 'ಪ್ರಜಾಸೇವಾ ಇಲಾಖೆ'ಯ ಕಾರ್ಯಾಚರಣೆ ಹಾಗೂ ಕುಂದುಕೊರತೆ ನಿವಾರಣೆ ಕುರಿತು

**ಡಾ. ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧೮ (೧೨೦೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾರ್ವಜನಿಕರ ಅಹವಾಲುಗಳನ್ನು ತ್ವರಿತವಾಗಿ ಇತ್ಯರ್ಥಪಡಿಸಲು ರಾಜ್ಯದಲ್ಲಿ ಈಗಾಗಲೇ 'ಪ್ರಜಾಸೇವೆ ಇಲಾಖೆ'ಯುನ್ನು

ಸ್ಥಾಪಿಸಲಾಗಿದ್ದು, ಈ ಇಲಾಖೆಯು ಪೂರ್ಣಪ್ರಮಾಣದಲ್ಲಿ ಕಾರ್ಯಾಚರಣೆ ಆರಂಭಿಸಿದೆಯೇ ;

(ಆ) ನೂತನ ಇಲಾಖೆಗೆ ಪ್ರತ್ಯೇಕವಾಗಿ ಸಚಿವರು ಹಾಗೂ ಐಎಎಸ್ (IAS) ಅಧಿಕಾರಿಯನ್ನು ನಿಯೋಜಿಸಲಾಗಿದೆಯೇ ; ವಿವಿಧ ಇಲಾಖೆಗಳ ಸಮನ್ವಯ ಕೊರತೆಯಿಂದ 'ಜನಸ್ಪಂದನ' ದೂರುಗಳು ವಿಳಂಬವಾಗುವುದನ್ನು ತಡೆಗಟ್ಟಿ ಉತ್ತರದಾಯಿತ್ವ ಖಚಿತಪಡಿಸಲು ರೂಪಿಸಿರುವ ಕಾರ್ಯವಿಧಾನಗಳೇನು ;

(ಇ) ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಕ್ಷೇತ್ರಗಳ ಶಾಸಕರ ಜೊತೆಗೂಡಿ ಈ ಇಲಾಖೆಯ ಮೂಲಕ ವಾರಕ್ಕೊಮ್ಮೆ 'ಜನಸ್ಪಂದನ' ಸಭೆ ನಡೆಸುವುದನ್ನು ಕಡ್ಡಾಯಗೊಳಿಸಲಾಗಿದೆಯೇ ; ಈ ಕುರಿತು ಹೊರಡಿಸಲಾಗಿರುವ ಅಧಿಕೃತ ಆದೇಶದ ಪ್ರತಿಗಳನ್ನು ಒದಗಿಸುವುದು ;

(ಈ) 'ಸಕಾಲ' ಹಾಗೂ ಇ-ಆಡಳಿತ ತಂತ್ರಜ್ಞಾನ ಬಳಸಿ ದೂರುಗಳನ್ನು ಇತ್ಯರ್ಥಪಡಿಸಲು ಅಧಿಕಾರಿಗಳಿಗೆ ನಿಗದಿಪಡಿಸಲಾಗಿರುವ ಕಾಲಮಿತಿ ಏನು ; ದೂರುಗಳನ್ನು ಬಾಕಿ ಉಳಿಸಿಕೊಳ್ಳುವ ಅಥವಾ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕೈಗೊಳ್ಳಲಾಗುವ ಶಿಸ್ತು ಕ್ರಮಗಳೇನು ?

## ಖಾಲಿ ನಿವೇಶನಗಳ ಸ್ವಚ್ಛತೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೧೦೧೯ (೧೧೨೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಮಂಡ್ಯ ನಗರದಲ್ಲಿ ವಿವೇಕಾನಂದ ನಗರ ಬಡಾವಣೆ ಹಾಗೂ ಮಹಾರಾಜ ಬಡಾವಣೆ (ಕೆಎಚ್‌ಬಿ) ಸೇರಿದಂತೆ ನಗರ ವ್ಯಾಪ್ತಿಯಲ್ಲಿನ ಖಾಸಗಿ ಬಡಾವಣೆಗಳು ಮತ್ತು ನಿವೇಶನಗಳಲ್ಲಿನ ಕಸ, ಗಿಡಗಂಟೆಗಳು, ಕಟ್ಟಡ ತ್ಯಾಜ್ಯ ವಾಪಕವಾಗಿದ್ದು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು ;

(ಆ) ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆ ದೃಷ್ಟಿಯಿಂದ ತ್ಯಾಜ್ಯ ತೆರವುಗೊಳಿಸಲು ಅಭಿಯಾನವನ್ನು ಕೈಗೊಳ್ಳಲಾಗುವುದೇ ; ಅಭಿಯಾನ ಕೈಗೊಳ್ಳುವುದಾದರೆ ಈ ಕುರಿತು ವಿವರವಾದ ಮಾಹಿತಿ ನೀಡುವುದು ;

(ಇ) ಈ ಎರಡೂ ಬಡಾವಣೆಗಳಲ್ಲಿನ ಮಾಲೀಕರು ಸ್ವತಃ ತಮ್ಮ ಜಾಗವನ್ನು ಸ್ವಚ್ಛಗೊಳಿಸದಿದ್ದರೆ ಸಂಬಂಧಪಟ್ಟ ಸಂಸ್ಥೆಗಳೇ ಗಿಡಗಂಟೆಗಳನ್ನು ತೆರವುಗೊಳಿಸಿ ನಿವೇಶನದ ಅಳತೆಗೆ ಅನುಸಾರವಾಗಿ ಶುಲ್ಕವನ್ನು ಆಸ್ತಿ ತೆರಿಗೆ ರೂಪದಲ್ಲಿ ವಸೂಲಿಸಲು ನಿರ್ಧರಿಸಿವೆಯೇ ; (ವಿವರವಾದ ಮಾಹಿತಿ ನೀಡುವುದು)

(ಈ) ಈವರೆವಿಗೂ ಈ ಬಡಾವಣೆಗಳಲ್ಲಿ ಜಂಗಲ್ ಕಟ್ಟಿಂಗ್‌ಗೆ ಸಂಬಂಧಪಟ್ಟ ಸಂಸ್ಥೆಗಳು ಭರಿಸಿರುವ ವೆಚ್ಚ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಉ) ಮಾಲೀಕರು ತಮ್ಮ ನಿವೇಶನಗಳನ್ನು ಸ್ವಚ್ಛವಾಗಿಟ್ಟುಕೊಳ್ಳದಿದ್ದರೆ ನಿಯಮಾನುಸಾರ ವಿಧಿಸಬಹುದಾದ ದಂಡದ ಮೊತ್ತ ಹಾಗೂ ಕೈಗೊಳ್ಳಬಹುದಾದ ಕ್ರಮಗಳೇನು ;

(ಊ) ಮಂಡ್ಯ ನಗರದ ಸೌಂದರ್ಯೀಕರಣಕ್ಕಾಗಿ ಮಂಡ್ಯ ನಗರಸಭೆಯು ಪ್ರತಿ ವರ್ಷ ಎಷ್ಟು ಅನುದಾನವನ್ನು ಭರಿಸುತ್ತದೆ ? (ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು)

## ಸನ್ನಡತೆ ಮೇಲೆ ಬಂಧಿಗಳ ಅವಧಿಪೂರ್ವ ಬಿಡುಗಡೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೦೨೦ (೧೧೨೪) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸನ್ನಡತೆ ಆಧಾರದ ಮೇಲೆ ೨೦೨೧ ರಿಂದ ಈವರೆಗೆ ಅವಧಿಪೂರ್ವ ಬಿಡುಗಡೆ ಆದ ಬಂಧಿಗಳ ಸಂಖ್ಯೆ ಎಷ್ಟು; (ವರ್ಷವಾರು ಮಾಹಿತಿ ನೀಡುವುದು)

(ಆ) ಜೀವಾವಧಿ ಶಿಕ್ಷಾ ಬಂಧಿಗಳು ಮತ್ತು ಅಲ್ಪಾವಧಿ ಶಿಕ್ಷಾ ಬಂಧಿಗಳ ಅವಧಿಗೆ ಮುನ್ನ ಬಿಡುಗಡೆಗಾಗಿ ಅನುಸರಿಸುವ ಕ್ರಮಗಳೇನು ; (ವಿವರವಾದ ಮಾಹಿತಿ ನೀಡುವುದು)

(ಇ) ಇದೇ ಅವಧಿಯಲ್ಲಿ ಪೆರೋಲ್ ಮತ್ತು ತುರ್ತು ಪೆರೋಲ್ ಮೇಲೆ ಬಿಡುಗಡೆ ಆದ ಬಂಧಿಗಳ ಸಂಖ್ಯೆ ಎಷ್ಟು; ಇದಕ್ಕಿರುವ ನಿಯಮಗಳೇನು ;

(ಈ) ಪ್ರಸ್ತುತ ರಾಜ್ಯದ ಕಾರಾಗೃಹಗಳು ಹಾಗೂ ಉಪ ಕಾರಾಗೃಹಗಳಲ್ಲಿ ಇರುವ ಶಿಕ್ಷಾ ಮತ್ತು ವಿಚಾರಣಾಧೀನ ಬಂಧಿಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಉ) ಕಾರಾಗೃಹಗಳಲ್ಲಿ ಬಂಧಿಗಳನ್ನು ಸಂದರ್ಶಿಸಲು ಅನುಸರಿಸಲಾಗುತ್ತಿರುವ ನಿಯಮಗಳೇನು ; ವಿವರವಾದ ಮಾಹಿತಿ ನೀಡುವುದು ?

## ಮಂಡ್ಯ PRED ಹಗರಣ–ವಿಶೇಷ ಲೆಕ್ಕ ತಪಾಸಣೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೦೨೧ (೧೧೨೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯ ಜಾಗೃತ ದಳ (Vigilance team) ಮೂಲಕ ಮಂಡ್ಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಕಛೇರಿಯಲ್ಲಿ ನಡೆದಿದೆ ಎನ್ನಲಾದ ಬಹುಕೋಟಿ ಹಣ ದುರುಪಯೋಗ ಪ್ರಕರಣದ 'ವಿಶೇಷ ಲೆಕ್ಕ ತಪಾಸಣೆ'ಯನ್ನು ಕೈಗೊಳ್ಳಲಾಗಿದೆಯೇ ;

(ಆ) ಇದ್ದಲ್ಲಿ, 'ವಿಶೇಷ ಲೆಕ್ಕ ತಪಾಸಣೆ'ಯ ಸಂಪೂರ್ಣ ವರದಿ ನೀಡುವುದು ;

(ಇ) ಈ ವರದಿ ಆಧರಿಸಿ ಕ್ರಮ ಜರುಗಿಸಲು ಯಾವ ಇಲಾಖೆ, ಕಛೇರಿಗೆ ನೀಡಲಾಗಿದೆ ; ಯಾವ ದಿನಾಂಕದಂದು ನೀಡಲಾಗಿದೆ ; ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಈ) ಅಲ್ಲದೆ, ಈ ವರದಿಯ ಆಧಾರದ ಮೇಲೆ ಈವರೆಗೆ ಕೈಗೊಂಡಿರುವ ಕ್ರಮಗಳೇನು ? (ವಿವರವಾದ ಮಾಹಿತಿ ನೀಡುವುದು)

## ಸುಳ್ಳು ಜಾತಿ ಪ್ರಮಾಣ ಪತ್ರಗಳು ಹೆಚ್ಚುತ್ತಿರುವ ಬಗ್ಗೆ

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೦೨೨ (೧೧೨೬) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ನೌಕರಿ. ಮೀಸಲಾತಿ, ವಿವಿಧ ಯೋಜನೆಗಳ ಸವಲತ್ತು ಪಡೆಯುವುದು ಸೇರಿದಂತೆ ನಾನಾ ಕಾರಣಗಳಿಗಾಗಿ ತಪ್ಪು ಮಾಹಿತಿ ನೀಡಿ 'ನಕಲಿ' ಅಥವಾ 'ಸುಳ್ಳು ಜಾತಿ ಪ್ರಮಾಣಪತ್ರ' ಪಡೆಯುತ್ತಿರುವ ಪ್ರಕರಣಗಳು ದಿನೇದಿನೇ ಹೆಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇದ್ದಲ್ಲಿ, ರಾಜ್ಯದಲ್ಲಿ ೨೦೨೧ ರಿಂದ ಈವರೆಗೂ 'ಸುಳ್ಳು ಜಾತಿ ಪ್ರಮಾಣಪತ್ರ' ಪಡೆದು ಸಿಕ್ಕಿಬಿದ್ದ ಅಥವಾ ಸಾಬೀತಾದ ಪ್ರಕರಣಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಹಾಗೂ ನೌಕರಿ. ಮೀಸಲಾತಿ. ಇನ್ನಿತರೆ ಸೌಲಭ್ಯ ಪಡೆದವರವಾರು ಮಾಹಿತಿ ನೀಡುವುದು)

(ಇ) ನ್ಯಾಯಾಲಯಗಳಲ್ಲಿ 'ಸುಳ್ಳು ಜಾತಿ ಪ್ರಮಾಣಪತ್ರ' ಪ್ರಕರಣಗಳ ಕುರಿತು ತೀರ್ಪು ಬಂದರೂ, ತೀರ್ಪು ಜಾರಿಗೆ ವಿಳಂಬವಾಗುತ್ತಿರುವುದಕ್ಕೆ ಕಾರಣವೇನು ; ಇಂತಹ ಎಷ್ಟು ಪ್ರಕರಣಗಳಲ್ಲಿ ತೀರ್ಪು ಬಂದ ನಂತರ ಜಾರಿಗೊಳಿಸಲು ಬಾಕಿ ಇರುತ್ತದೆ ; (ವಿವರ ನೀಡುವುದು)

(ಈ) ಇಂತಹ ಕಾನೂನುಬಾಹಿರ ಹಾಗೂ ಗಂಭೀರ ಅಪರಾಧ ಪ್ರಕರಣಗಳಲ್ಲಿ ನೀಡಬಹುದಾದ ಶಿಕ್ಷೆ. ದಂಡನೆ ಮತ್ತು ತೆಗೆದುಕೊಳ್ಳಬಹುದಾದ ಕ್ರಮಗಳೇನು ; ಸರ್ಕಾರಕ್ಕೆ ಆದ ಆರ್ಥಿಕ ನಷ್ಟವನ್ನು ಹೇಗೆ ವಸೂಲಾತಿ ಮಾಡಲಾಗುವುದು ;

(ಉ) 'ನಕಲಿ' ಅಥವಾ 'ಸುಳ್ಳು ಜಾತಿ ಪ್ರಮಾಣಪತ್ರ' ಪಡೆದುಕೊಂಡವರ ಹಾಗೂ ಅವುಗಳನ್ನು ವಿತರಿಸಿದವರ ವಿರುದ್ಧ ಕೈಗೊಂಡಿರುವ ಕ್ರಮಗಳೇನು ? (ವಿವರವಾದ ಮಾಹಿತಿ ನೀಡುವುದು)

# ಪೊಲೀಸ್ ವಸತಿ ಗೃಹಗಳ ದುರಸ್ತಿ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :-**

೧೦೨೩ (೧೧೨೮) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಪೊಲೀಸರಿಗಾಗಿ ಮಂಡ್ಯ ನಗರ ಸೇರಿದಂತೆ ಜಿಲ್ಲೆಯಾದ್ಯಂತ ವಸತಿ ಗೃಹಗಳನ್ನು ನಿರ್ಮಿಸಲಾಗಿದ್ದು, ಬಹುತೇಕ ವಸತಿ ಗೃಹಗಳು ಬಹು ವರ್ಷಗಳಿಂದ ದುರಸ್ತಿ ಕಾಣದೆ ಶಿಥಿಲಾವಸ್ಥೆ ತಲುಪಿವೆ ; ಕೆಲವು ವಸತಿ ಗೃಹಗಳಿಗೆ ಟಾರ್ಪಲಿನ್ ಹೊದಿಕೆ ಹಾಕಲಾಗಿದೆ ; ಕೆಲವಡೆ ಹಳೆಯ ಕಟ್ಟಡಗಳನ್ನು ನೆಲಸಮ ಮಾಡಿದ್ದು, ನಿರ್ಮಿಸುವ ಕೆಲಸವಾಗಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಜಿಲ್ಲೆಯಲ್ಲಿ ಪೊಲೀಸರಿಗಾಗಿ ನಿರ್ಮಿಸಿರುವ ಒಟ್ಟು ವಸತಿ ಗೃಹಗಳ ಸಂಖ್ಯೆ, ಹಂಚಿಕೆ ಮಾಡಲಾದ ವಸತಿ ಗೃಹಗಳ ಸಂಖ್ಯೆ, ವಸತಿ ಸೌಲಭ್ಯ ಬೇಕಿರುವ ಸಿಬ್ಬಂದಿಗಳ ಸಂಖ್ಯೆ, ದುರಸ್ತಿ ಆಗಬೇಕಿರುವ ವಸತಿ ಗೃಹಗಳ ಸಂಖ್ಯೆ, ನೆಲಸಮಗೊಳಿಸಿರುವ ವಸತಿ ಗೃಹಗಳ ಸಂಖ್ಯೆ ಎಷ್ಟು ; (ಮಂಡ್ಯ ನಗರ ಮತ್ತು ಎಲ್ಲಾ ತಾಲ್ಲೂಕುಗಳ ಠಾಣಾವಾರು ಮಾಹಿತಿ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ವಸತಿ ಗೃಹಗಳ ದುರಸ್ತಿಗಾಗಿ ಭರಿಸಲಾಗಿರುವ ವೆಚ್ಚ ಎಷ್ಟು ;

(ಈ) ಹೊಸದಾಗಿ ಜಿಲ್ಲೆಯಾದ್ಯಂತ ಎಲ್ಲೆಲ್ಲಿ, ಎಷ್ಟು ಸಂಖ್ಯೆಯ ವಸತಿ ಗೃಹಗಳನ್ನು ನಿರ್ಮಿಸಲಾಗುತ್ತಿದೆ ಅಥವಾ ನಿರ್ಮಾಣ ಮಾಡಲು ಯೋಜಿಸಲಾಗುತ್ತಿದೆ ; ಇದಕ್ಕಾಗಿ ಅವಶ್ಯವಿರುವ ಅಥವಾ ಮೀಸಲಿರಿಸುವ ಅನುದಾನ ಎಷ್ಟು ? (ವಿವರ ನೀಡುವುದು)

## AI ತಂತ್ರಜ್ಞಾನ ಬಳಕೆಯ ಕುರಿತು

**ಶ್ರೀ ಪಿ.ವಿ.ಮೋಹನ್ (ವಿಧಾನಸಭೆಯಿಂದ ಚುನಾಯಿತರಾದವರು) :-**

೧೦೨೪ (೧೧೩೫) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ಸರ್ಕಾರವು ೧೨ ಮಾರ್ಚ್ ೨೦೨೬ ರಂದು ಜವಾಬ್ದಾರಿಯುತ AI ಬಳಕೆಯ ಕುರಿತು ಉನ್ನತ ಮಟ್ಟದ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಕೈಗೊಳ್ಳುವ ಕಾರ್ಯಕ್ರಮಗಳೇನು ; (ವಿವರ ನೀಡುವುದು)

(ಆ) ಸಮಿತಿಯು ಕೇವಲ AI Policy ರೂಪಿಸಲಿದೆಯೇ ಅಥವಾ ಸಮಗ್ರ AI Governance Model ಮತ್ತು Roadmap ರೂಪಿಸಲಿದೆಯೇ ; AI ಆಧಾರಿತ ನಿರ್ಧಾರದಿಂದ ನಾಗರಿಕರಿಗೆ ಹಾನಿಯಾದರೆ ಅಂತಿಮ ಹೊಣೆಗಾರಿಕೆ ಯಾರದು ;

(ಇ) ನಾಗರಿಕರಿಗೆ AI ನಿರ್ಧಾರದ ಕಾರಣ ತಿಳಿದುಕೊಳ್ಳುವ ಮಾನವ ಪರಿಶೀಲನೆ ಮತ್ತು ಮೇಲ್ಮನವಿ ಹಕ್ಕು ನೀಡಲಾಗುವುದೇ ; AI ಯಲ್ಲಿನ ಪೂರ್ವಾಗ್ರಹ, ತಾರತಮ್ಯ ಮತ್ತು privacy ಅಪಾಯಗಳನ್ನು ತಡೆಯಲು ಸ್ವತಂತ್ರ audit ವ್ಯವಸ್ಥೆ ಇರಲಿದೆಯೇ ;

(ಈ) ಸರ್ಕಾರದ AI ವ್ಯವಸ್ಥೆಗಳಲ್ಲಿ ಬಳಸುವ ನಾಗರಿಕರ dataಗೆ ಸೂಕ್ತ ಭದ್ರತೆ ಮತ್ತು ನಿಯಂತ್ರಣ ಇರಲಿದೆಯೇ ; ಸರ್ಕಾರ ಬಳಸುವ AI ವ್ಯವಸ್ಥೆಗಳ ಪಾರದರ್ಶಕತೆಗಾಗಿ Public AI Registry ಸ್ಥಾಪಿಸಲಾಗುವುದೇ ;

(ಉ) ಕನ್ನಡ ಸೇರಿದಂತೆ ಎಲ್ಲಾ ವರ್ಗದ ನಾಗರಿಕರಿಗೆ ಒಳಗೊಳ್ಳುವ ಮತ್ತು ಸುಲಭವಾಗಿ ಬಳಸಬಹುದಾದ AI ಸೇವೆಗೆ ಖಚಿತಪಡಿಸಲಾಗುವುದೇ ?

## ಆರ್ಥಿಕ ಇಲಾಖೆಯಿಂದ ಕೈಗೊಂಡಿರುವ ಕ್ರಮದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೨೫ (೧೧೧೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೬–೨೭ನೇ ಸಾಲಿನ ರಾಜ್ಯ ಬಜೆಟ್ ನಲ್ಲಿ ಘೋಷಿಸಲಾದ ಯೋಜನೆಗಳಿಗೆ ಇಲಾಖಾವಾರು ಎಷ್ಟು ಅನುದಾನ ಬಿಡುಗಡೆಯಾಗಿದೆ ; ಇದುವರೆಗೆ ಎಷ್ಟು ವೆಚ್ಚವಾಗಿದೆ ;

(ಆ) ರಾಜ್ಯದ ಒಟ್ಟು ಸಾಲದ ಮೊತ್ತ ತಲಾ ವ್ಯಕ್ತಿಗೆ ಸಾಲದ ಹೊರೆ ಹಾಗೂ ಕಳೆದ ಮೂರು ವರ್ಷಗಳ ಸಾಲದ ಬೆಳವಣಿಗೆಯ ವಿವರವನ್ನು ಸರ್ಕಾರ ನೀಡುವುದೇ ;

(ಇ) ರಾಜ್ಯದ ಹಣಕಾಸಿನ ಕೊರತೆ (Fiscal Deficit) ಮತ್ತು ಆದಾಯ ಕೊರತೆ (Revenue Deficit) ನಿಗದಿತ ಮಿತಿಯೊಳಗಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಈ) ಕಳೆದ ಮೂರು ವರ್ಷಗಳಲ್ಲಿ ವಿವಿಧ ಇಲಾಖೆಗಳು ಮಂಜೂರಾದ ಅನುದಾನವನ್ನು ಸಂಪೂರ್ಣವಾಗಿ ಬಳಸದೆ ಹಿಂದಿರುಗಿಸಿರುವ ಮೊತ್ತ ಎಷ್ಟು ? (ಇಲಾಖಾವಾರು ವಿವರ ನೀಡುವುದು)

## ಬೆಂಗಳೂರು ನಗರದಲ್ಲಿರುವ ಮೇಲ್ಸೇತುವೆಗಳ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೨೬ (೧೧೧೦) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಎಷ್ಟು ಮೇಲ್ಸೇತುವೆಗಳು ಇವೆ ; ಇವುಗಳಲ್ಲಿ ಎಷ್ಟು ಮೇಲ್ಸೇತುವೆಗಳು ದುರಸ್ತಿ ಹಂತಕ್ಕೆ ತಲುಪಿವೆ ;

(ಆ) ಸದ್ಯದ ದಿನಗಳಲ್ಲಿ ಬೆಂಗಳೂರಿನಲ್ಲಿ ಮೇಲ್ಸೇತುವೆ ಬಳಕೆಗೆ ಸರ್ಕಾರವು ಟೋಲ್ ಸಂಗ್ರಹಣೆ ಮಾಡಲು ಯೋಜಿಸುತ್ತಿದ್ದು, ಈ ಮಾಹಿತಿಯು ನಿಜವೇ ;

(ಇ) ಇದ್ದಲ್ಲಿ, ಬೆಂಗಳೂರಿನ ಯಾವ ಯಾವ ಮೇಲ್ಸೇತುವೆಗಳಲ್ಲಿ ಟೋಲ್ ಸಂಗ್ರಹಣೆ ಮಾಡಲು ಸರ್ಕಾರ ಯೋಜಿಸಿದೆಯೇ ; ಪ್ರತಿ ವಾಹನಕ್ಕೆ ಎಷ್ಟು ಸಂಗ್ರಹಣೆ ಮಾಡಲು ಯೋಜಿಸಲಾಗಿದೆ ;

(ಈ) ನಗರ ವ್ಯಾಪ್ತಿಯಲ್ಲಿ ಟೋಲ್ ಸಂಗ್ರಹಣೆ ಮಾಡಲು ಇರುವ ಮಾನದಂಡಗಳೇನು ? (ಮಾಹಿತಿ ನೀಡುವುದು)

## ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವತಿಯಿಂದ ಆಸ್ಪತ್ರೆ ಕಟ್ಟಡ ನಿರ್ಮಿಸುತ್ತಿರುವ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೨೭ (೧೧೧೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತೀ ವೇಗವಾಗಿ ಬೆಳೆಯುತ್ತಿರುವ ನಗರಗಳಲ್ಲಿ ಒಂದಾದ ಹುಬ್ಬಳ್ಳಿ ನಗರದಲ್ಲಿ ಬಡವರಿಗೆ ಮತ್ತು ಆರ್ಥಿಕವಾಗಿ ದುರ್ಬಲಗೊಂಡಿರುವ ವರ್ಗದ ಜನರಿಗಾಗಿ ಹಳೆ ಹುಬ್ಬಳ್ಳಿಯಲ್ಲಿ

ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ನಿರ್ಮಿಸಲು ಈ ಹಿಂದೆ ಯೋಜಿಸಿದ್ದು, ಅದರಂತೆ ಸದರಿ ಕಟ್ಟಡದ ನಿರ್ಮಾಣ ಕಾಮಗಾರಿ ಪಾಲಿಕೆಯಿಂದ ನಿರ್ವಹಿಸುತ್ತಿದ್ದು, ಈ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು ;

(ಆ) ಈ ಕಾಮಗಾರಿಯ ಗುತ್ತಿಗೆಯನ್ನು ಯಾವ ಗುತ್ತಿಗೆದಾರರಿಗೆ ನೀಡಲಾಗಿತ್ತು ; ಮತ್ತು ಒಪ್ಪಂದದ ಕರಾರಿನಂತೆ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ಸಾರ್ವಜನಿಕರ ಉಪಯೋಗಕ್ಕಾಗಿ ನಿಗಧಿಪಡಿಸಿದ್ದ ಅವಧಿ ಮತ್ತು ಕಾಲಮಿತಿ ಎಷ್ಟು ;

(ಇ) ಸದರಿ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆಯೇ ; ಇದ್ದಲ್ಲಿ, ಈ ಕಟ್ಟಡವನ್ನು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಹಸ್ತಾಂತರಿಸದೇ ಇರುವುದಕ್ಕೆ ಕಾರಣಗಳೇನು ಮತ್ತು ಹಸ್ತಾಂತರಿಸುವ ಷರತ್ತುಗಳೇನು ? (ವಿವರ ನೀಡುವುದು)

## ಪರವಾನಿಗೆ ನೀಡುವ ಹಾಗೂ ನವೀಕರಿಸುವ ಪ್ರಕ್ರಿಯೆ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೨೮ (೧೧೧೨) ಮಾನ್ಯ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮದ್ಯದ ಅಂಗಡಿಗಳ ಪರವಾನಗಿ ನೀಡುವ ಮತ್ತು ನವೀಕರಿಸುವ ಪ್ರಕ್ರಿಯೆಯನ್ನು ಸಂಪೂರ್ಣ ಪಾರದರ್ಶಕಗೊಳಿಸಲು ಆನ್‌ಲೈನ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆಯೇ ;

(ಆ) ಕಳೆದ ಮೂರು ವರ್ಷಗಳಲ್ಲಿ ಅಬಕಾರಿ ಇಲಾಖೆಯ ಅಧಿಕಾರಿಗಳು ನಡೆಸಿದ ದಾಳಿಗಳ ಸಂಖ್ಯೆ ಹಾಗೂ ವಶಪಡಿಸಿಕೊಂಡ ಅಕ್ರಮ ಮದ್ಯದ ಪ್ರಮಾಣದ ಜಿಲ್ಲಾವಾರು ವಿವರ ನೀಡುವುದು ;

(ಇ) ಮದ್ಯಪಾನ ಮಾಡಿ ವಾಹನ ಚಲಾಯಿಸುವ ಪ್ರಕರಣಗಳನ್ನು ತಗ್ಗಿಸಲು ಅಬಕಾರಿ ಇಲಾಖೆ ಮತ್ತು ಪೊಲೀಸ್ ಇಲಾಖೆಯ ಸಮನ್ವಯದಲ್ಲಿ ಯಾವ ವಿಶೇಷ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಈ) ಮಹಿಳೆಯರು ಮತ್ತು ಯುವಜನರ ಮೇಲೆ ಮದ್ಯದ ದುಷ್ಪರಿಣಾಮ ಕಡಿಮೆ ಮಾಡಲು ಸರ್ಕಾರದ ವಿಶೇಷ ಯೋಜನೆಗಳೇನು ;

(ಉ) ಅಬಕಾರಿ ಇಲಾಖೆಯ ಆದಾಯ ಹೆಚ್ಚಿಸುವುದರ ಜೊತೆಗೆ ಸಾರ್ವಜನಿಕ ಆರೋಗ್ಯವನ್ನು ಕಾಪಾಡುವ ಸಮತೋಲನದ ನೀತಿಯನ್ನು ಸರ್ಕಾರ ಯಾವ ರೀತಿ ಅನುಸರಿಸುತ್ತಿದೆ ?

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆಯ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೨೯ (೧೧೧೩) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕಕ್ಕೆ, ಐಟಿ, ಬಿಟಿ, ಸೆಮಿಕಂಡಕ್ಟರ್, ಎಲೆಕ್ಟ್ರಾನಿಕ್ಸ್ ಹಾಗೂ AI ಕ್ಷೇತ್ರಗಳಲ್ಲಿ ಬಂದ ಹೂಡಿಕೆಯ ವಿವರಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿ ಹೊಸದಾಗಿ ಸ್ಥಾಪನೆಯಾದ ಸ್ಟಾರ್ಟ್ ಅಪ್‌ಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಎಷ್ಟು ಉದ್ಯೋಗಗಳು ಸೃಷ್ಟಿಯಾಗಿವೆ ;

(ಇ) ಬೆಂಗಳೂರು ಹೊರತುಪಡಿಸಿ. ಮೈಸೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಕಲಬುರಗಿ ಮತ್ತು ಮಂಗಳೂರು ಸೇರಿದಂತೆ ಇತರೆ ನಗರಗಳಲ್ಲಿ ಐಟಿ ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದ ಯೋಜನೆ ಏನು ;

(ಈ) ರಾಜ್ಯ ಸರ್ಕಾರದ ಇ–ಆಡಳಿತ (e-Governance) ಸೇವೆಗಳ ಮೂಲಕ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಸೇವೆಗಳ ಸಂಖ್ಯೆ ಎಷ್ಟು; ಅವುಗಳ ಕಾರ್ಯಕ್ಷಮತೆ ಕುರಿತು ಸರ್ಕಾರದ ಮೌಲ್ಯಮಾಪನವೇನು ;

(ಉ) ಸರ್ಕಾರಿ ವೆಬ್‌ಸೈಟ್‌ಗಳು ಮತ್ತು ಡೇಟಾಬೇಸ್‌ಗಳ ಮೇಲೆ ನಡೆದ ಸೈಬರ್ ದಾಳಿಗಳ ಸಂಖ್ಯೆ ಎಷ್ಟು; ಅವುಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ?

## ಬಿಡದಿ ಟೌನ್‌ಶಿಪ್‌ನಲ್ಲಿ ಭೂಮಿ ಕಳೆದುಕೊಳ್ಳುತ್ತಿರುವ ರೈತರಿಗೆ ನೀಡುತ್ತಿರುವ ಪರಿಹಾರವನ್ನು ಕೃಷ್ಣಾ ಮೇಲ್ದಂಡೆ ಸಂತ್ರಸ್ತರಿಗೆ ನೀಡುವ ಬಗ್ಗೆ

**ಶ್ರೀ ನಿರಾಣಿ ಹಣವಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :–**

೧೦೩೦ (೧೧೬೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಿಡದಿ ಟೌನ್‌ಶಿಪ್‌ಗಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ನೀಡುತ್ತಿರುವ ಮಾರುಕಟ್ಟೆ ಆಧಾರಿತ ಗರಿಷ್ಠ ಪರಿಹಾರ ದರ ಎಷ್ಟು ; ಮತ್ತು ಕೃಷ್ಣಾ ಮೇಲ್ದಂಡೆ ಯೋಜನೆಗೆ ಭೂಮಿ ನೀಡಿದ ಉತ್ತರ ಕರ್ನಾಟಕದ ರೈತರಿಗೆ ನೀಡುತ್ತಿರುವ ದರ ಎಷ್ಟು; ಈ ಬೃಹತ್ ವ್ಯತ್ಯಾಸಕ್ಕೆ ಕಾರಣಗಳೇನು ; ಬೆಂಗಳೂರು ಸುತ್ತಮುತ್ತಲಿನ ಭಾಗದ ಭೂಮಿಗೆ ನೀಡುವ ವಿಶೇಷ ಅದ್ಯತೆ ಮತ್ತು ಹೆಚ್ಚಿನ ಪರಿಹಾರದ ನೀತಿಯನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಉತ್ತರ ಕರ್ನಾಟಕ ರೈತರಿಗೆ ನಿರಾಕರಿಸುತ್ತಿರುವುದಕ್ಕೆ ಕಾರಣವೇನು ; ಇದು ಪ್ರಾದೇಶಿಕ ತಾರತಮ್ಯವನ್ನು ಮಾಡಿದಂತಾಗುವುದಿಲ್ಲವೇ ;

(ಆ) ಒಂದೇ ರಾಜ್ಯದ ಇಬ್ಬರು ರೈತರುಗಳಲ್ಲಿ ಒಬ್ಬರಿಗೆ ಒಂದು ನೀತಿ ಮತ್ತೊಬ್ಬರಿಗೆ ಮತ್ತೊಂದು ನೀತಿ ಅನುಸರಿಸುತ್ತಿರುವುದು ಸಂವಿಧಾನದ ಸಮಾನತೆಯ ಹಕ್ಕಿನ ಉಲ್ಲಂಘನೆಯಲ್ಲವೇ ; ಇದರ ಕುರಿತು ಸರ್ಕಾರದ ನಿಲುವೇನು ;

(ಇ) ದೇಶಾದ್ಯಂತ ಜಾರಿಯಲ್ಲಿರುವ "ಭೂಸ್ವಾಧೀನದಲ್ಲಿ ನ್ಯಾಯೋಚಿತ ಪರಿಹಾರ ಮತ್ತು ಪಾರದರ್ಶಕತೆ ಕಾಯ್ದೆ" (Right to Fair Compensation and Transparency in Land Acquisition Act) ಕಷ್ಣಾ ಮೇಲ್ದಂಡೆ ಯೋಜನೆಗೆ ಸಂಪೂರ್ಣವಾಗಿ ಅನ್ವಯವಾಗುತ್ತಿದೆಯೇ ; ಬಿಡದಿ ಭಾಗದಲ್ಲಿ ರೈತರಿಗೆ ನೀಡಲಾಗುತ್ತಿರುವ ಅಭಿವೃದ್ಧಿಪಡಿಸಿದ ಜಮೀನಿನ ಪಾಲು(TDR ಅಥವಾ ಪರ್ಯಾಯ ನಿವೇಶನ) ಮಾದರಿಯನ್ನು ಕೃಷ್ಣಾ ಮೇಲ್ದಂಡೆ ಯೋಜನೆಯ ಸಂತ್ರಸ್ತ ರೈತರಿಗೂ ಏಕೆ ವಿಸ್ತರಿಸಬಾರದು ; ಈ ಕುರಿತು ಸಂಪೂರ್ಣ ಮಾಹಿತಿ ನೀಡುವುದು ;

(ಈ) ಬಿಡದಿ ಟೌನ್‌ಶಿಪ್ ಯೋಜನೆಯಲ್ಲಿ ರೈತ ಕುಟುಂಬಗಳಿಗೆ ನೀಡಲು ಉದ್ದೇಶಿಸಿರುವ ಸ್ವಯಂ ಉದ್ಯೋಗ ಅಥವಾ ಕೈಗಾರಿಕಾ ಉದ್ಯೋಗದ ಸೌಲಭ್ಯಗಳನ್ನು ಕೃಷ್ಣಾ ಮೇಲ್ದಂಡೆ ಯೋಜನೆಗಾಗಿ ಸರ್ವಸ್ವವನ್ನೂ ಕಳೆದುಕೊಂಡ ರೈತ ಕುಟುಂಬಗಳಿಗೂ ನೀಡಲಾಗುತ್ತಿದೆಯೇ ; ಇಲ್ಲದಿದರೆ, ಈ ತಾರತಮ್ಯಕ್ಕೆ ಹೊಣೆಗಾರರು ಯಾರು ;

(ಉ) ಬಿಡದಿ ಸ್ಮಾರ್ಟ್ ಸಿಟಿ/ಟೌನ್‌ಶಿಪ್ ಯೋಜನೆಗಾಗಿ ಭೂಮಿ ಕಳೆದುಕೊಳ್ಳುವ ರೈತರಿಗೆ ಪ್ರತಿ ಎಕರೆಗೆ ಕೋಟ್ಯಾಂತರ ರೂಪಾಯಿ ಪರಿಹಾರ ಅಥವಾ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೀಡಲಾಗುತ್ತಿದ್ದು ; ಆದರೆ ಕೃಷ್ಣಾ ಮೇಲ್ದಂಡೆ ಯೋಜನೆಯಲ್ಲಿ

ರೈತರ ನೀರಾವರಿ ಜಮೀನಿಗೆ ಕೇವಲ ರೂ.೪೦ ಲಕ್ಷ ಮತ್ತು ಒಣ ಬೇಸಾಯಕ್ಕೆ ರೂ.೩೦ ಲಕ್ಷ ನೀಡುತ್ತಿರುವುದು ಹಾಗೂ ಕಿನಾಲ್ ಅಭಿವೃದ್ಧಿ ಕಾರ್ಯಕ್ಕೆ ೩೦ ಲಕ್ಷ ಹಾಗೂ ೨೫ ಲಕ್ಷ ಒಣ ಬೇಸಾಯಕ್ಕೆ ನಿಗದಿಪಡಿಸಿರುವುದು ತಾರತಮ್ಯವಲ್ಲವೇ ; ಕಡಿಮೆ ಪರಿಹಾರದ ಕಾರಣ ಕೃಷ್ಣಾ ಮೇಲ್ದಂಡೆ ಯೋಜನೆಯ ೩ನೇ ಹಂತದ ಭೂ ಸ್ವಾಧೀನ ಪ್ರಕ್ರಿಯೆ ನೆನಗುದಿಗೆ ಬೀಳಲು ಕಾರಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಕೃಷ್ಣಾ ಮೇಲ್ದಂಡೆ ಯೋಜನೆಗೆ ಭೂಮಿಯನ್ನು ಕಳೆದುಕೊಂಡ ಸಂತ್ರಸ್ತರ ಪರಿಹಾರಕ್ಕಾಗಿ ನ್ಯಾಯಾಲಯದಲ್ಲಿ ಮೊರೆ ಹೋಗಿರುವ ಪ್ರಕರಣಗಳು ಎಷ್ಟು; ಅವುಗಳಿಗೆ ಪರಿಹಾರ ಒದಗಿಸಲು ಏಕೆ ತಡವಾಗುತ್ತಿದೆ ; ಅವುಗಳಿಗೆ ಯಾವಾಗ ಪರಿಹಾರ ನೀಡುತ್ತೀರಿ ತಿಳಿಸಿ ? (ಯಾವ ಕಾಲಮಿತಿಯಲ್ಲಿ ನೀಡುತ್ತೀರಿ)

## ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯಲ್ಲಿ ಬರುವ ಉದ್ಯಾನವನಗಳ ನಿರ್ವಹಣೆಯ ಬಗ್ಗೆ

**ಶ್ರೀ ಪ್ರದೀಪ್ ಶೆಟ್ಟರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೩೧ (೧೧೬೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಉದ್ಯಾನವನಗಳ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಸದರಿ ಉದ್ಯಾನವನಗಳ ನಿರ್ವಹಣೆಗೆ ಮಹಾನಗರ ಪಾಲಿಕೆ ಕೈಗೊಂಡಿರುವ ಅಗತ್ಯ ಕ್ರಮಗಳೇನು ; (ವಿವರ ನೀಡುವುದು)

(ಇ) ಈ ಉದ್ಯಾನವನಗಳ ನಿರ್ವಹಣೆಯನ್ನು ಮಹಾನಗರ ಪಾಲಿಕೆಯೇ ನಿರ್ವಹಿಸುತ್ತಿದೆಯೇ ; ಅಥವಾ ಹೊರಗುತ್ತಿಗೆ ನೀಡಲಾಗಿದೆಯೇ ; (ವಿವರ ನೀಡುವುದು)

(ಈ) ಸದರಿ ಉದ್ಯಾನವನಗಳನ್ನು ಸಮರ್ಪಕವಾಗಿ ನಿರ್ವಹಿಸಿ ಅಭಿವೃದ್ಧಿಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ಪ್ರೊ॥ ಗೋವಿಂದರಾವ್ ಸಮಿತಿ ವರದಿಯಂತೆ ೨೦೨೬/೨೭ ಸಾಲಿನಲ್ಲಿ ಮೀಸಲಿಟ್ಟ ಅನುದಾನದ ಬಗ್ಗೆ

**ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೩೨ (೧೨೦೪) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಾದೇಶಿಕ ಅಸಮತೋಲನ ನಿವಾರಣೆ ನಿಟ್ಟಿನಲ್ಲಿ ಸರ್ಕಾರವು ಪ್ರೊ॥ ಗೋವಿಂದರಾವ್‌ರವರ ಸಮಿತಿ ನೇಮಿಸಲಾಗಿದ್ದು, ಸದರಿ ವರದಿಯಲ್ಲಿ ನಮೂದಿಸಿರುವ ಹಿಂದುಳಿದ ತಾಲ್ಲೂಕುಗಳು ಎಷ್ಟು ; ಅತಿ ಹಿಂದುಳಿದ ತಾಲ್ಲೂಕುಗಳ ಸಂಖ್ಯೆ ಎಷ್ಟು ; (ವಿಭಾಗವಾರು, ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸದರಿ ವರದಿಯನ್ನು ಸರ್ಕಾರವು ಅಂಗೀಕರಿಸಿದೆಯೇ ;

(ಇ) ಸದರಿ ವರದಿಯಲ್ಲಿ ಪ್ರಾದೇಶಿಕ ಅಸಮತೋಲನ ನಿವಾರಣೆ ನಿಟ್ಟಿನಲ್ಲಿ ಸನ್ ೨೦೨೬–೨೭ ರಿಂದ ೨೦೩೧–೩೨ ರವರೆಗಿನ ಹೆಚ್ಚುವರಿ ಹಣಕಾಸನ್ನು ವಲಯವಾರು ಹಂಚಿಕೆ ಮಾಡಲು ಶಿಫಾರಸ್ಸು ಮಾಡಿರುವಂತೆ ಯಾವ ಯಾವ ವಲಯಗಳಿಗೆ ಎಷ್ಟು ಅನುದಾನ ಮೀಸಲಿರಿಸಿದೆ ; ವಲಯವಾರು, ಜಿಲ್ಲಾವಾರು ಮಾಹಿತಿ ನೀಡುವುದು ; ಪ್ರಸಕ್ತ ವರ್ಷ ಸನ್ ೨೦೨೬–೨೭ ನೇ ಸಾಲಿಗೆ ಮೀಸಲಿರಿಸಿದ ಅನುದಾನ ಎಷ್ಟು ; ಬಿಡುಗಡೆಯಾದ ಅನುದಾನ ಎಷ್ಟು ? (ಮಾಹಿತಿ ಒದಗಿಸುವುದು)

## ಸೈಬರ್ ಅಪರಾಧ ಪ್ರಕರಣಗಳ ಮಾಹಿತಿ ಕುರಿತು

**ಶ್ರೀ ಪಿ. ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೩೩ (೧೨೦೫) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಇಲ್ಲಿಯವರೆಗೂ ಸೈಬರ್ ಅಪರಾಧ ಪ್ರಕರಣಗಳು ದಾಖಲಾದ ದೂರುಗಳ ಸಂಖ್ಯೆ ಎಷ್ಟು; ಎಷ್ಟು ಪ್ರಕರಣಗಳಲ್ಲಿ ಆರೋಪಿತರಿಗೆ ದಸ್ತಗಿರಿ ಮಾಡಲಾಗಿದೆ; ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯಕ್ಕೆ ದೋಷಾರೋಪಣೆ ಪಟ್ಟಿ (ಚಾರ್ಜ್ ಶೀಟ್) ಸಲ್ಲಿಸಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಆರ್ಥಿಕ ಸೈಬರ್ ವಂಚನೆ ಪ್ರಕರಣಗಳಲ್ಲಿ ದಾಖಲಾದ ದೂರುಗಳ ಸಂಖ್ಯೆ ಎಷ್ಟು ಕಳೆದುಕೊಂಡ ಮೊತ್ತ ಎಷ್ಟು; ಫ್ರೀಜ್ ಮಾಡಿಸಲಾದ ಮೊತ್ತ ಎಷ್ಟು; ದೂರುದಾರರಿಗೆ ಹಿಂತಿರುಗಿಸಿದ ಮೊತ್ತ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಸರ್ಕಾರವು CEN ಪೊಲೀಸ್ ಠಾಣೆಗಳಿಂದ Cyber Crime Police Station ಗಳಾಗಿ ಪ್ರತ್ಯೇಕವಾಗಿ ಪ್ರಾರಂಭಿಸಿ ಮೇಲ್ವಿಚಾರಣೆ ಮಾಡಲು ವಲಯವಾರು SP ದರ್ಜೆಯ ಅಧಿಕಾರಿಯನ್ನು ನಿಯುಕ್ತಿಗೊಳಿಸಲಾಗುವುದು ಎಂದು ಆದೇಶದಲ್ಲಿ ತಿಳಿಸಿರುವುದು ಸರಿಯಷ್ಟೆ ಇವರೆಗೆ ಯಾವುದೇ ವಲಯಗಳಿಗೆ SP ದರ್ಜೆಯ ಅಧಿಕಾರಿಯನ್ನ ನೇಮಿಸದೆ ಇರುವುದರಿಂದ ಸೈಬರ್ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಹಿನ್ನಡೆ ಆಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದಿಯೇ;

(ಈ) ಬಂದಿದ್ದರೆ, ಅಧಿಕಾರಿಗಳನ್ನು ಶೀಘ್ರವಾಗಿ ಯಾವ ಕಾಲಮಿತಿಯಲ್ಲಿ ಸ್ಥಳ ನಿಯುಕ್ತಿಗೊಳಿಸಲಾಗುವುದು ?

## ಸರ್ಕಾರ ಹಾಗೂ ನಿಗಮ ಮಂಡಳಿಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನೌಕರರ ಬಗ್ಗೆ

**ಶ್ರೀ ಪುಟ್ಟಣ್ಣ (ಶಿಕ್ಷಕರ ಕ್ಷೇತ್ರ) :–**

೧೦೩೪ (೧೧೬೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ, ನಿಗಮ ಮಂಡಳಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು ನೌಕರರು ಎಷ್ಟು ; (ಇಲಾಖಾವಾರು ಮಾಹಿತಿ ನೀಡುವುದು)

(ಆ) ಸರ್ಕಾರ ನಿಗಮ ಮಂಡಳಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಹೈದರಾಬಾದ್ ಕರ್ನಾಟಕದ ಒಟ್ಟು ನೌಕರರು ಎಷ್ಟು; (ಇಲಾಖಾವಾರು ಮಾಹಿತಿ ನೀಡುವುದು)

(ಇ) ಹೈದರಾಬಾದ್ ಕರ್ನಾಟಕ ಭಾಗಕ್ಕೆ ನೇಮಕಾತಿಗಳನ್ನು ಪ್ರಾರಂಭಿಸುವ ಮೊದಲು ಹೈದರಾಬಾದ್ ಕರ್ನಾಟಕಕ್ಕೆ ಆಯ್ಕೆ ನೀಡಿದ ಆಯ್ಕೆ ನೀಡದ ನೌಕರರ ಸಂಖ್ಯೆ ಎಷ್ಟು ;

(ಈ) ೨೦೧೩ರ ನಂತರ ಹೈದರಾಬಾದ್ ಕರ್ನಾಟಕ ಕೋಟಾದಡಿ ಆಯ್ಕೆಯಾದ ನೌಕರರೆಷ್ಟು ;

(ಉ) ೨೦೧೩ರ ನಂತರ ಇತರೆ ಕರ್ನಾಟಕ ಭಾಗಕ್ಕೆ ಮೀಸಲಾದ ಹುದ್ದೆಗಳಲ್ಲಿ ಹೈದರಾಬಾದ್ ಕರ್ನಾಟಕದಿಂದ ಆಯ್ಕೆಯಾದ ನೌಕರರ ಸಂಖ್ಯೆ ಎಷ್ಟು ? (ಸಂಪೂರ್ಣ ವಿವರ ನೀಡುವುದು)

## ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡದೇ ಸುಳ್ಳು ದಾಖಲೆಗಳ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೩೫ (೧೧೮೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ಹಣ ಜಮಾ ಮಾಡದೇ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿ ಹಣವಂಚಿಸಿದವರ ಮೇಲೆ ಯಾವುದೇ ಕಾನೂನು ಕ್ರಮ ಜರುಗಿಸಿಲ್ಲದಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; (ಆಡಿಟ್ ವರದಿಯ ವಿವರ ನೀಡುವುದು)

(ಆ) ಹಾಗಿದ್ದಲ್ಲಿ ಸದರಿ ಪ್ರಾಧಿಕಾರದ ಎಲ್ಲಾ ನಿಯಮಗಳನ್ನು ಉಲ್ಲಂಘಿಸಿ ಬೋಗಸ್ ಚಲನ್ ಸೃಷ್ಟಿ ಮಾಡಿ ಈ ಅಕ್ರಮದಲ್ಲಿ ಭಾಗಿಯಾಗಿರುವ ಬ್ಯಾಂಕ್ ಸಿಬ್ಬಂದಿ, ಪ್ರಾಧಿಕಾರದ ಸಿಬ್ಬಂದಿ ಮತ್ತು ಅಧಿಕಾರಿಗಳ ವಿರುದ್ಧ FIR ಹಾಕಲಾಗಿದೆಯೇ; ಹಾಗಿದ್ದಲ್ಲಿ, ಯಾವ ಯಾವ ತನಿಖಾ ಸಂಸ್ಥೆಗೆ ನೀಡಲಾಗಿದೆ; ಈ ತನಿಖೆಯು ಯಾವ ಹಂತದಲ್ಲಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಖಾತೆ ವರ್ಗಾವಣೆ, ಹೊಸ ಖಾತೆ, ಜಾಗ ಮಂಜೂರು, ನಕ್ಷೆ ಅನುಮೋದನೆ ನೀಡಲು ಮತ್ತು ಇತರೆ ಸೇವೆಗಳನ್ನು ಸಾರ್ವಜನಿಕರಿಗೆ ಒದಗಿಸಲು ಮಧ್ಯವರ್ತಿಗಳ ಜೊತೆಗೆ ಬ್ಯಾಂಕ್ ಅಧಿಕಾರಿಗಳು, ಪ್ರಾಧಿಕಾರದ ಕೆಲವು ಗುತ್ತಿಗೆ ನೌಕರರು ಮತ್ತು ಅಧಿಕಾರಿಗಳು ಸೇರಿಕೊಂಡು ನಕಲಿ ದಾಖಲೆಗಳನ್ನು ಸೃಷ್ಟಿಸಿ ಪ್ರಾಧಿಕಾರಕ್ಕೆ ಹಣ ತುಂಬದೆ ದುರುಪಯೋಗಪಡಿಸಿರುವ ಹಣವೆಷ್ಟು, ಎಷ್ಟು ಜನರಿಗೆ ವಂಚಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಸದರಿ ಪ್ರಾಧಿಕಾರಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ನಷ್ಟವನ್ನುಂಟು ಮಾಡಿ ಈ ಅಕ್ರಮದಲ್ಲಿ ಭಾಗಿಯಾದವರ ಆಸ್ತಿಯನ್ನು ಮುಟ್ಟಗೋಲು ಹಾಕಿಕೊಂಡ ಇವರ ವಿರುದ್ಧ ಸರ್ಕಾರ ಕಾನೂನು ಪ್ರಕಾರ ಯಾವ ಕ್ರಮ ಕೈಗೊಂಡಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಮಾಧ್ಯಮಗಳಿಗೆ ಸರ್ಕಾರಿ ಜಾಹೀರಾತು ಬಿಡುಗಡೆ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೩೬ (೧೧೮೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆನ್‌ಲೈನ್ ಅಥವಾ ಡಿಜಿಟಲ್ ಮಾಧ್ಯಮಗಳಿಗೆ ಸರ್ಕಾರ ಜಾಹೀರಾತು ಬಿಡುಗಡೆ ಮಾಡಲಾಗುತ್ತಿದೆಯೇ ; (ಮಾಹಿತಿ ನೀಡುವುದು)

(ಆ) ಬಿಡುಗಡೆ ಮಾಡುತ್ತಿದ್ದರೆ ಯಾವ ವರ್ಷದಿಂದ ಬಿಡುಗಡೆ ಮಾಡಲಾಗಿರುತ್ತದೆ ; (ಮಾಹಿತಿ ನೀಡುವುದು) ಹಾಗೂ ಅದಕ್ಕೆ ಇರುವ ಮಾನದಂಡಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಯೂಟ್ಯೂಬ್ ಚಾನಲ್‌ಗಳಿಗೆ ನೋಂದಣಿ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೩೭ (೧೧೮೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಯೂಟ್ಯೂಬ್ ಚಾನಲ್‌ಗಳಿಗೆ ನೋಂದಣಿ ಮಾಡಿಕೊಳ್ಳುವ ನಿಯಮ ಇದೆಯೇ ; (ಮಾಹಿತಿ ನೀಡುವುದು)

(ಆ) ಇಲ್ಲವಾದರೆ, ಸರ್ಕಾರದ ಮುಂದೆ ಇಂತಹ ಪ್ರಸ್ತಾವನೆಗಳು ಇದೆಯೇ ; (ಮಾಹಿತಿ ನೀಡುವುದು)

(ಇ) ಇದ್ದರೆ, ಪ್ರಸ್ತಾವನೆಗಳ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ಮಾಹಿತಿ ನೀಡುವುದು)

## ಪತ್ರಿಕೆಗಳಿಗೆ ಇರುವ ಮಾನದಂಡಗಳ ಬಗ್ಗೆ

**ಶ್ರೀ ರಘು ಆರ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೩೮ (೧೧೮೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪತ್ರಿಕೆಗಳಿಗೆ ಸರ್ಕಾರಿ ಜಾಹೀರಾತು ನೀಡಲು ರಾಜ್ಯಮಟ್ಟದ ಪತ್ರಿಕೆಯೆಂದು ಪರಿಗಣಿಸಲು ಸರ್ಕಾರದಲ್ಲಿ ಇರುವ ಮಾನದಂಡಗಳೇನು ; (ಮಾಹಿತಿ ನೀಡುವುದು)

(ಆ) ಸದರಿ ಪತ್ರಿಕೆಗಳಿಗೆ ಸರ್ಕಾರಿ ಜಾಹೀರಾತು ನೀಡಲು ರಾಜ್ಯಮಟ್ಟದ ಪತ್ರಿಕೆಯೆಂದು ಪರಿಗಣಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಮಾಹಿತಿ ನೀಡುವುದು)

## ಪುರಸಭೆಯ ಅಭಿವೃದ್ಧಿ ಕಾಮಗಾರಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೩೯ (೧೧೧೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮದಿಂದ ಕಳೆದ ಒಂದು ವರ್ಷದಲ್ಲಿ ರಾಜ್ಯದ ಪುರಸಭೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಯಾವ ಯಾವ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ನಿಗಮಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರದಿಂದ ದೊರೆತ

ಅನುದಾನವೆಷ್ಟು; ಸದರಿ ಮೊತ್ತವನ್ನು ಯಾವ ಯಾವ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಆಪ್ ಆಧಾರಿತ ಕಂಪನಿಗಳ ನೋಂದಣಿ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪೦ (೧೧೧೬) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಆನ್‌ಲೈನ್, ಆಪ್ ಆಧಾರಿತ ಹಾಗೂ ವೆಬ್ ಸೈಟ್ ಆಧಾರಿತ ಕಂಪನಿಗಳು ತಂತ್ರಜ್ಞಾನ ಆಧಾರಿತ ಕಂಪನಿಗಳು ಎಂಬ ಹೆಸರಿನಲ್ಲಿ ಆಹಾರ ಡೆಲಿವರಿ, ವಸ್ತುಗಳ ಡೆಲಿವರಿಯಂತಹಾ ದೈಹಿಕ ಶ್ರಮ ಆಧಾರದ ಕೆಲಸಗಳನ್ನು ನಿರ್ವಹಿಸುತ್ತಿರುವುದು ಹಾಗೂ ಇತರ ಕೆಲಸಗಳಲ್ಲಿ ಬಾಲ ಕಾರ್ಮಿಕರನ್ನು ದುಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಂತಹ ಕಂಪನಿಗಳು ಟೆಕ್ ಕಂಪನಿಗಳಾಗಿರದೆ ಟೆಕ್ ಸೌಲಭ್ಯವನ್ನು ಬಳಸುತ್ತಿರುವ ಕಂಪನಿಗಳಾಗಿದ್ದು ಇಂತಹಾ ಕಂಪನಿಗಳಿಗೆ ಸರ್ಕಾರ ಯಾವ ಆಧಾರ ಮತ್ತು ನಿಯಮಗಳ ಅನ್ವಯ ಅನುಮತಿ ನೀಡುತ್ತಿದೆ ; (ವಿವರ ನೀಡುವುದು)

(ಆ) ಆನ್‌ಲೈನ್, ಆಪ್ ಆಧಾರಿತ ಹಾಗೂ ವೆಬ್ ಸೈಟ್ ಆಧಾರಿತ ಕಂಪನಿಗಳು ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಮಯದಲ್ಲಿ ಸರ್ಕಾರದ ವ್ಯವಸ್ಥೆಯಲ್ಲಿ ನೋಂದಾಯಿಸುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) Homelane, HSR Sector2, #1147, 1st -3rd floor, Sri Ranga Complex, 22nd cross road, Parangi Palya, Bengaluru-560 102 ಎಂಬ ಇಂಟೀರಿಯರ್ ಕಂಪನಿಯು ರಾಜ್ಯದಲ್ಲಿ ಯಾವ ರೀತಿಯಲ್ಲಿ ನೋಂದಣಿಯಾಗಿದೆ ? (ವಿವರ ನೀಡುವುದು)

## ಸ್ವಚ್ಛ ಭಾರತ ಯೋಜನೆಯಲ್ಲಿ ೧೫೦ ಕೋಟಿ ಅವ್ಯವಹಾರ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪೧ (೧೧೧೪) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) BSWML ವತಿಯಿಂದ ಸ್ವಚ್ಛ ಭಾರತ ಯೋಜನೆಯ ಅನ್ವಯ ಗಾಂಧಿನಗರ, ರಾಜಾಜಿನಗರ, ಮಹಾಲಕ್ಷ್ಮೀ ಲೇಔಟ್, ಮತ್ತು ಮಲ್ಲೇಶ್ವರಂಗಳಲ್ಲಿ ಸ್ವಚ್ಛ ಭಾರತ ಯೋಜನೆಯ ಕಾಮಗಾರಿ ಕೈಗೊಳ್ಳಲು ೧೫೦ಕೋಟಿಗೂ ಹೆಚ್ಚು ಮೊತ್ತದ ಟೆಂಡರ್‌ನ್ನು ಕೇವಲ ೩ ಕೋಟಿ ವ್ಯವಹಾರ ಹೊಂದಿರುವ M/s. Muniyappa Enterprises ರವರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಆ) ಸಕ್ಷಮ ಆರ್ಥಿಕ ಸ್ಥಿತಿ ಹೊಂದಿರದ ಕೇವಲ ೩ ಕೋಟಿ ಮಾತ್ರ ವ್ಯವಹಾರ ಹೊಂದಿರುವ M/s. Muniyappa Enterprises ರವರಿಗೆ ನೀತಿ ಆಯೋಗದ ನಿಯಮ, ಸ್ವಚ್ಛ ಭಾರತ ಯೋಜನೆಯ ನಿಯಮಗಳನ್ನು ಉಲ್ಲಂಘನೆ ಮಾಡಿ ಕಾನೂನು ಬಾಹಿರವಾಗಿ

Chief Engineer & Chief General Manager (Technical) BSWML ತಮ್ಮ ವೈಯಕ್ತಿಕ ಹಿತಾಸಕ್ತಿ ಹಾಗೂ ಆರ್ಥಿಕ ಲಾಭಕ್ಕಾಗಿ ಕಾಳಜಿ ವಹಿಸಿ M/s. Muniyappa Enterprises ರವರಿಗೆ ಟೆಂಡರ್ ನೀಡುವಲ್ಲಿ ಶ್ರಮ ವಹಿಸಿರುವ ಬಗ್ಗೆ ಸರ್ಕಾರದ ನಿಲುವೇನು; ಈ ಅಕ್ರಮದಲ್ಲಿ ಭಾಗಿಯಾದ Chief Engineer & Chief General Manager (Technical) BSWML ಅಮಾನತ್ತುಗೊಳಿಸಿ ವಿಚಾರಣೆ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಒಬ್ಬ ಬಿಡ್ದುದಾರರಿಗೆ ಕೇವಲ ೨ ಪ್ಯಾಕೇಜ್ ಮಾತ್ರವೇ ನೀಡಬಹುದು ಎಂಬುದಾಗಿ ನಿಯಮವಿದ್ದರೂ M/s. Muniyappa Enterprises ಕಂಪನಿಗೆ ಎರಡಕ್ಕಿಂತ ಹೆಚ್ಚು ಪ್ಯಾಕೇಜ್ ನೀಡಲು ಕಾರಣವೇನು ? (ವಿವರ ನೀಡುವುದು)

## ಮಹಿಳಾ ಸ್ವೀಕಾರ ಕೇಂದ್ರದಲ್ಲಿ ಮಹಿಳೆಯರು ಕಾಣೆಯಾಗಿರುವ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪೨ (೧೧೧೮) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರದ ಅಧೀನದಲ್ಲಿರುವ ಬೆಂಗಳೂರಿನ ಮಹಿಳಾ ಸ್ವೀಕಾರ ಕೇಂದ್ರದಿಂದ ೧,೭೭೬ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಕಾಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಪೊಲೀಸ್ ಇಲಾಖೆಗೆ ದೂರು ನೀಡಿದ್ದರೂ ಕ್ರಮ ಕೈಗೊಳ್ಳದಿರಲು ಕಾರಣವೇನು ; (ವಿವರ ನೀಡುವುದು)

(ಆ) ೧,೭೭೬ ಮಹಿಳೆಯರು ಮತ್ತು ಹೆಣ್ಣು ಮಕ್ಕಳು ಅನಾಥರು ಸರ್ಕಾರಿ ಸ್ವೀಕಾರ ಕೇಂದ್ರದಲ್ಲಿದ್ದವರು ಎಂಬ ಕಾರಣಕ್ಕೆ ಪೊಲೀಸ್ ಇಲಾಖೆ ನಿರ್ಲಕ್ಷ ವಹಿಸಿದೆಯೇ ; ವಿವರ ನೀಡುವುದು ;

(ಇ) ಸರ್ಕಾರಿ ಸ್ವೀಕಾರ ಕೇಂದ್ರದಿಂದ ಕಾಣೆಯಾಗಿರುವ ೧೭೭೬ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಬಗ್ಗೆ ಶೀಘ್ರ ಹಾಗೂ ಜವಾಬ್ದಾರಿಯಿಂದ ತನಿಖೆ ನಡೆಸಲು ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಟ್ರಾಫಿಕ್ ದಟ್ಟನೆ ಇರುವ ಜಂಕ್ಷನ್‌ಗಳಲ್ಲಿ ಶಾಶ್ವತ ಪರಿಹಾರಕ್ಕಾಗಿ ಕೈಗೊಂಡ ಕ್ರಮಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೦೪೩ (೧೧೦೨) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಲ್ಕ್ ಬೋರ್ಡ್, ಔಟರ್ ರಿಂಗ್ ರೋಡ್, ಹೆಬ್ಬಾಳ, ಕೆ.ಆರ್.ಪುರಂ ಸೇರಿದಂತೆ ಹೆಚ್ಚು ಟ್ರಾಫಿಕ್ ದಟ್ಟಣೆ ಇರುವ ಜಂಕ್ಷನ್‌ಗಳಲ್ಲಿ ಶಾಶ್ವತ ಪರಿಹಾರಕ್ಕಾಗಿ ಸರ್ಕಾರದ ಕಾರ್ಯಯೋಜನೆ ಏನು ;

(ಆ) ಅನಧಿಕೃತ ಪಾರ್ಕಿಂಗ್ ತೆರವುಗೊಳಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಸಂಚಾರ ದಟ್ಟಣೆಯಿಂದ ಉಂಟಾಗುತ್ತಿರುವ ಆರ್ಥಿಕ ನಷ್ಟ ಮತ್ತು ವಾಯು ಮಾಲಿನ್ಯವನ್ನು ಕಡಿಮೆ ಮಾಡಲು ಸರ್ಕಾರದ ಯೋಜನೆಗಳೇನು ?

# ರಾಜ್ಯ ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿಸಲು ಕೈಗೊಂಡ ಕ್ರಮಗಳ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೦೪೪ (೧೧೦೧) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕವನ್ನು ಮಾದಕ ವಸ್ತು ಮುಕ್ತ ರಾಜ್ಯವನ್ನಾಗಿಸುವ ಉದ್ದೇಶದಿಂದ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು; ಕಳೆದ ಒಂದು ವರ್ಷದ ಅವಧಿಯಲ್ಲಿ ಎಷ್ಟು ಮಾದಕ ವಸ್ತು ಪ್ರಕರಣಗಳು ದಾಖಲಾಗಿದ್ದು, ಎಷ್ಟು ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗಿದೆ ;

(ಆ) ಶಾಲೆ, ಕಾಲೇಜು ಹಾಗೂ ಯುವಜನರಲ್ಲಿ ಮಾದಕ ವಸ್ತುಗಳ ದುರುಪಯೋಗ ತಡೆಯಲು ಸರ್ಕಾರ ಯಾವ ರೀತಿಯ ಜಾಗೃತಿ ಕಾರ್ಯಕ್ರಮಗಳನ್ನು ನಡೆಸುತ್ತಿದೆ; ಈ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಸರ್ಕಾರ ಹೇಗೆ ಮೌಲ್ಯಮಾಪನ ಮಾಡುತ್ತಿದೆ ;

(ಇ) ಮಾದಕ ವ್ಯಸನಕ್ಕೆ ಒಳಗಾದ ಯುವಕರ ಪುನರ್ವಸತಿಗಾಗಿ ರಾಜ್ಯದಲ್ಲಿ ಎಷ್ಟು ಸರ್ಕಾರಿ ಡಿ–ಅಡಿಕ್ಷನ್ (ವ್ಯಸನಮುಕ್ತಿ) ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ; ಅವುಗಳ ಸೇವೆಯನ್ನು ಇನ್ನಷ್ಟು ವಿಸ್ತರಿಸುವ ಯೋಜನೆ ಇದೆಯೇ ;

(ಈ) ಮಾದಕ ವಸ್ತುಗಳ ಮಾರಾಟ ಮತ್ತು ಸಾಗಾಣಿಕೆಯನ್ನು ತಡೆಯಲು ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ಸರ್ಕಾರ ಯಾವ ವಿಶೇಷ ಕಾರ್ಯಯೋಜನೆಯನ್ನು ರೂಪಿಸಿದೆ ? (ಮಾಹಿತಿ ನೀಡುವುದು)

## ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ವಿಸ್ತರಣೆ ಯೋಜನೆಯ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೦೪೫ (೧೧೦೦) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರಕ್ಕೆ ಕಾವೇರಿ ನೀರು ಸರಬರಾಜು ವಿಸ್ತರಣೆ ಯೋಜನೆಯ ಪ್ರಸ್ತುತ ಸ್ಥಿತಿ ಏನು ; ಉಳಿದ ಪ್ರದೇಶಗಳಿಗೆ ಯಾವಾಗ ನೀರು ಪೂರೈಕೆ ಮಾಡಲಾಗುವುದು ;

(ಆ) ಖಾಸಗಿ ಟ್ಯಾಂಕರ್‌ಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಇ) ಅಕ್ರಮ ಬೋರ್‌ವೆಲ್‌ಗಳು ಹಾಗೂ ಅಂತರ್ಜಲ ಮಟ್ಟ ಕುಸಿತವನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ನೀರಿನ ಸೋರಿಕೆ (Leakage) ಮತ್ತು ಅನಧಿಕೃತ ಸಂಪರ್ಕಗಳಿಂದ ಆಗುತ್ತಿರುವ ನೀರಿನ ನಷ್ಟವನ್ನು ತಡೆಯಲು ಸರ್ಕಾರದ ಯೋಜನೆ ಏನು ;

(ಉ) ಮಳೆನೀರು ಸಂಗ್ರಹಣೆ (Rainwater Harvesting) ಕಡ್ಡಾಯ ಅನುಷ್ಠಾನ ಹಾಗೂ ಮರುಬಳಕೆಯ ನೀರಿನ ಬಳಕೆಯನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ ?

## ಬೆಂಗಳೂರಿನಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಯಿಂದ ಮೂಲಸೌಕರ್ಯಗಳ ಮೇಲೆ ಉಂಟಾಗುತ್ತಿರುವ ಒತ್ತಡದ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೦೪೬ (೧೯೯) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರಕ್ಕೆ ಹೊರ ಜಿಲ್ಲೆಗಳು ಹಾಗೂ ಇತರೆ ರಾಜ್ಯಗಳಿಂದ ಹೆಚ್ಚುತ್ತಿರುವ ಜನರ ವಲಸೆಯಿಂದಾಗಿ ನಗರದ ಜನಸಂಖ್ಯೆ ಮತ್ತು ಮೂಲಸೌಕರ್ಯಗಳ ಮೇಲೆ ಉಂಟಾಗುತ್ತಿರುವ ಒತ್ತಡದ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಆ) ಹೆಚ್ಚುತ್ತಿರುವ ವಲಸೆ ಜನಸಂಖ್ಯೆಯಿಂದ ಬೆಂಗಳೂರು ನಗರದಲ್ಲಿ ಕುಡಿಯುವ ನೀರು, ವಿದ್ಯುತ್ ವಸತಿ ಒಳಚರಂಡಿ ಮತ್ತು ಘನತ್ಯಾಜ್ಯ ನಿರ್ವಹಣೆ ಕ್ಷೇತ್ರಗಳಲ್ಲಿ ಉಂಟಾಗುತ್ತಿರುವ ಹೆಚ್ಚುವರಿ ಬೇಡಿಕೆಯನ್ನು ಪೂರೈಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಮಾಹಿತಿ ನೀಡುವುದು)

(ಇ) ಹೊರ ಜಿಲ್ಲೆಗಳು ಹಾಗೂ ಇತರೆ ರಾಜ್ಯಗಳಿಂದ ಉದ್ಯೋಗಕ್ಕಾಗಿ ಬೆಂಗಳೂರಿಗೆ ಆಗಮಿಸುತ್ತಿರುವ ಜನರಿಗೆ ಕೈಗೆಟುಕುವ ದರದಲ್ಲಿ ವಸತಿ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಯಾವುದೇ ವಿಶೇಷ ಯೋಜನೆಯನ್ನು ರೂಪಿಸಿದೆಯೇ ;

(ಈ) ಹೆಚ್ಚುತ್ತಿರುವ ಜನಸಂಖ್ಯೆಯಿಂದ ಬೆಂಗಳೂರಿನ ರಸ್ತೆ ಮತ್ತು ಸಾರ್ವಜನಿಕ ಸಾರಿಗೆ ವ್ಯವಸ್ಥೆಯ ಮೇಲೆ ಉಂಟಾಗುತ್ತಿರುವ ಸಂಚಾರದ ಒತ್ತಡವನ್ನು ಕಡಿಮೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ತೆರಿಗೆ ಸಂಗ್ರಹ ಕುಂಠಿತಗೊಂಡಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪೭ (೧೧೨೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಜಿ.ಡಿ.ಪಿ ಮತ್ತು ಆರ್ಥಿಕತೆಯ ಸಮಗ್ರ ವಿವರ ನೀಡುವುದು; ರಾಜ್ಯದಲ್ಲಿ ತಲಾವಾರು ಆದಾಯ ಎಷ್ಟಿದೆ; ತಲಾವಾರು ಆದಾಯವನ್ನು ಪರಿಗಣಿಸಲು ಇರುವ ಮಾನದಂಡಗಳೇನು ;

(ಆ) ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಿರುವ ರಾಜ್ಯದ ಒಟ್ಟಾರೆ ತೆರಿಗೆ ಸಂಗ್ರಹ ಗುರಿ ಎಷ್ಟು ; ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ ಜುಲೈ ಅಂತ್ಯದವರೆಗೆ ಸಂಗ್ರಹವಾಗಿರುವ ತೆರಿಗೆ ಎಷ್ಟು ; (ಇಲಾಖಾವಾರು ವಿವರ ನೀಡುವುದು)

(ಇ) ತೆರಿಗೆ ಸಂಗ್ರಹ ಕುಂಠಿತಗೊಂಡಿರುವುದು ನಿಜವೇ; ಯಾವ ಯಾವ ವಲಯಗಳಲ್ಲಿ ತೆರಿಗೆ ಸಂಗ್ರಹ ಕುಂಠಿತವಾಗಿದೆ ;

(ಈ) ಕುಂಠಿತಗೊಳ್ಳಲು ಕಾರಣಗಳೇನು; ತೆರಿಗೆ ಸಂಗ್ರಹ ಗುರಿ ಮುಟ್ಟಲು ಸರ್ಕಾರದ ಕ್ರಮಗಳೇನು ?

## CID ತನಿಖೆಗೆ ವಹಿಸಿರುವ ಪ್ರಕರಣಗಳಲ್ಲಿ ಆಗಿರುವ ಪ್ರಗತಿ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪೮ (೧೧೨೧) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಿಂದ ರಾಜ್ಯ ಸರ್ಕಾರ ಎಷ್ಟು ಪ್ರಕರಣಗಳನ್ನು ಯಾವ ದಿನಾಂಕದಂದು ಸಿ.ಐ.ಡಿ ತನಿಖೆಗೆ ವಹಿಸಿದೆ; ಈ ಪ್ರಕರಣಗಳ ತನಿಖೆಯ ನೇತೃತ್ವ ವಹಿಸಿರುವ ಅಧಿಕಾರಿಗಳ ವಿವರವನ್ನು ಪ್ರಕರಣವಾರು ನೀಡುವುದು ;

(ಆ) ಎಷ್ಟು ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಂಡಿದೆ; ಎಷ್ಟು ಪ್ರಕರಣಗಳ ತನಿಖೆ ಪ್ರಗತಿಯಲ್ಲಿದೆ ; (ವಿವರ ನೀಡುವುದು)

(ಇ) ತನಿಖೆ ಪೂರ್ಣಗೊಂಡಿರುವ ಪ್ರಕರಣಗಳ ಪೈಕಿ ಎಷ್ಟು ತನಿಖಾ ವರದಿಗಳು ಸರ್ಕಾರಕ್ಕೆ ಸಲ್ಲಿಕೆಯಾಗಿದೆ ; ಎಷ್ಟು ವರದಿಗಳನ್ನು ಸರ್ಕಾರ ಅಂಗೀಕರಿಸಿದೆ ; (ವರದಿಗಳ ಪ್ರತಿ ನೀಡುವುದು)

(ಈ) ತನಿಖಾ ವರದಿಯ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಪ್ರಕರಣವಾರು ವಿವರ ನೀಡುವುದು)

(ಉ) ಎಷ್ಟು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲಿ ಆರೋಪ ಪಟ್ಟಿ ಸಲ್ಲಿಕೆಯಾಗಿದೆ; ಎಷ್ಟು ಪ್ರಕರಣಗಳಲ್ಲಿ ಬಿ ರಿಪೋರ್ಟ್ ಸಲ್ಲಿಕೆಯಾಗಿದೆ ? (ಸಮಗ್ರ ವಿವರ ನೀಡುವುದು)

## ರಾಜ್ಯದಲ್ಲಿ ಅರ್ಧಕ್ಕೆ ನಿಂತಿರುವ ಕಾಮಗಾರಿಗಳ ಕುರಿತು

**ಶ್ರೀ ಸಿ. ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೪೯ (೧೧೨೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಒಟ್ಟು ಎಷ್ಟು ಕಾಮಗಾರಿಗಳು ಅಪೂರ್ಣಗೊಂಡು ಅರ್ಧಕ್ಕೆ ನಿಂತಿವೆ ; (ಇಲಾಖಾವಾರು–ಜಿಲ್ಲಾವಾರು ವಿವರ ನೀಡುವುದು)

(ಆ) ಅರ್ಧಕ್ಕೆ ನಿಂತಿರುವ ಕಾಮಗಾರಿಗಳ ಒಟ್ಟು ಮೊತ್ತ ಎಷ್ಟು; ಕಾಮಗಾರಿಗಳು ತ್ರಿಶಂಕು ಸ್ಥಿತಿಯಲ್ಲಿರಲು ಕಾರಣಗಳೇನು ; ಈ ಕಾಮಗಾರಿಗಳ ಅಂದಾಜು ವೆಚ್ಚ ಎಷ್ಟು; ಪ್ರಸ್ತುತ ಅಂದಾಜು ವೆಚ್ಚದಲ್ಲಿ ಎಷ್ಟು ಹೆಚ್ಚಳವಾಗಿದೆ ; (ಕಾಮಗಾರಿವಾರು ವಿವರ ನೀಡುವುದು)

(ಇ) ಕಾಮಗಾರಿಗಳು ಅರ್ಧಕ್ಕೆ ನಿಂತಿರುವುದರಿಂದ ಯೋಜನಾ ವೆಚ್ಚ ಹೆಚ್ಚಳವಾಗುವುದರ ಜೊತೆಗೆ ಅಭಿವೃದ್ಧಿಯ ದೃಷ್ಟಿಯಿಂದಲೂ ರಾಜ್ಯ ಹಿಂದುಳಿಯುವಂತಾಗಿರುವುದು ಸರ್ಕಾರದ ಗಮನದಲ್ಲಿದೆಯೇ ;

(ಈ) ಅರ್ಧಕ್ಕೆ ನಿಂತಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯವಿರುವ ಹಣ ಎಷ್ಟು; ಹಣ ಬಿಡುಗಡೆ ಮಾಡಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ? (ಇಲಾಖೆವಾರು ವಿವರ ನೀಡುವುದು)

## ಗ್ಯಾರೆಂಟಿ ಯೋಜನೆಗಳನ್ನು ಪರಿಷ್ಕರಿಸುತ್ತಿರುವ ಬಗ್ಗೆ

**ಶ್ರೀ ಸಿ. ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೦ (೧೧೨೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

(ಅ) ರಾಜ್ಯದಲ್ಲಿ ಎಲ್ಲಾ ಮೂಲಗಳಿಂದ ಎಷ್ಟು ತೆರಿಗೆ ಸಂಗ್ರಹವಾಗುತ್ತಿದೆ ; ೨೦೨೩–೨೪, ೨೦೨೪–೨೫ ಮತ್ತು ೨೦೨೫–೨೬ (ಜುಲೈ

ಅಂತ್ಯದವರೆಗೆ) ಎಷ್ಟು ತೆರಿಗೆ ಸಂಗ್ರಹ ಗುರಿ ಹೊಂದಲಾಗಿತ್ತು ; ಸಂಗ್ರಹವಾಗಿರುವ ತೆರಿಗೆ ಎಷ್ಟು; ಕೊರತೆಯಾಗಿರುವ ತೆರಿಗೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಗ್ಯಾರಂಟಿ ಯೋಜನೆಗಳಿಗಾಗಿ ಪ್ರತೀ ತಿಂಗಳು ಅಗತ್ಯವಿರುವ ಹಣ ಎಷ್ಟು ; ಈವರೆಗೆ (೨೦೨೬, ಜುಲೈ ಅಂತ್ಯದವರೆಗೆ ಸದರಿ ಯೋಜನೆಗಳಿಗೆ ವೆಚ್ಚವಾಗಿರುವ ಹಣ ಎಷ್ಟು ; (ಗ್ಯಾರೆಂಟಿ ಯೋಜನೆವಾರು ವಿವರ ಒದಗಿಸುವುದು ;

(ಇ) ಗ್ಯಾರಂಟಿ ಅನುಷ್ಠಾನ ಸಮಿತಿಯ ಕಾರ್ಯಗಳೇನು; ಈ ಸಮಿತಿಗಳು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಈವರೆಗೆ ಎಷ್ಟು ಸಭೆ ನಡೆಸಿವೆ ; (ಸಭೆಯ ದಿನಾಂಕ ಸಹಿತ ಮಾಹಿತಿ ನೀಡುವುದು) ಸಮಿತಿ ಅಧ್ಯಕ್ಷರು/ಸದಸ್ಯರಿಗೆ ನೀಡುತ್ತಿರುವ ವೇತನ/ಗೌರ ಧನ ಹಾಗೂ ಇನ್ನಿತರೆ ಸೌಲಭ್ಯಗಳೇನು ; (ಆದೇಶ ಪ್ರತಿ ಒದಗಿಸುವುದು) ಈ ಉದ್ದೇಶಕ್ಕೆ ಈವರೆಗೆ ಆಗಿರುವ ವೆಚ್ಚ ಎಷ್ಟು ;

(ಈ) ಗ್ಯಾರೆಂಟಿ ಯೋಜನೆಗಳ ಪರಿಷ್ಕರಣೆಗೆ ಸರ್ಕಾರ ನಿರ್ಧರಿಸಿದೆಯೇ ; ಪರಿಷ್ಕರಣೆಗೆ ಅನುಸರಿಸುವ ಮಾನದಂಡಗಳೇನು ;

(ಉ) ಗ್ಯಾರೆಂಟಿ ಯೋಜನೆಗಳಲ್ಲಿನ ನಷ್ಟ ತಡೆಯಲು ಗ್ಯಾರೆಂಟಿ ಅನುಷ್ಠಾನ ಸಮಿತಿ ಏಕೆ ವಿಫಲವಾಗಿದೆ; ನಷ್ಟ ತಡೆಯು ವಿಫಲವಾಗಿರುವ ಹಿನ್ನೆಲೆಯಲ್ಲಿ ಸದರಿ ಸಮಿತಿಗಳನ್ನು ರದ್ದುಪಡಿಲು ಸರ್ಕಾರ ಕ್ರಮ ಕೈಗೊಳ್ಳುವುದೆ ?

## ಕಾಲೇಜುಗಳ ಸುತ್ತಮುತ್ತ ಡ್ರಗ್ಸ್ ಮಾರಾಟ ಮತ್ತು ನಿಯಂತ್ರಣ

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೧ (೧೧೦೪) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪ್ರತಿಷ್ಠಿತ ಕಾಲೇಜುಗಳು ಮತ್ತು ಹಾಸ್ಟೆಲ್‌ಗಳ ಸುತ್ತಮುತ್ತ ಡ್ರಗ್ಸ್/ಮಾದಕ ದ್ರವ್ಯಗಳ ಮಾರಾಟ ಹೆಚ್ಚಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಳೆದ ಮೂರು ವರ್ಷಗಳಲ್ಲಿ ಕಾಲೇಜು ಆವರಣಗಳಲ್ಲಿ ದಾಖಲಾಗಿರುವ ಡ್ರಗ್ಸ್ ಪ್ರಕರಣಗಳು ಎಷ್ಟು; ಬಂಧಿತರಾದವರ ಸಂಖ್ಯೆ ಎಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಇ) ವಿದ್ಯಾರ್ಥಿಗಳನ್ನು ಡ್ರಗ್ಸ್ ಜಾಲದಿಂದ ರಕ್ಷಿಸಲು ಮತ್ತು ಮಾರಾಟಗಾರರ ವಿರುದ್ಧ ಸರ್ಕಾರ ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳೇನು ;

(ಈ) ಕಾಲೇಜುಗಳಲ್ಲಿ 'ಆಂಟಿ–ಡ್ರಗ್ ಸ್ಕ್ವಾಡ್' (Anti-Drug Squad) ರಚಿಸಿ, ವಿಶೇಷ ತಪಾಸಣೆ ನಡೆಸಲು ಸರ್ಕಾರ ಸೂಕ್ತ ಮಾರ್ಗಸೂಚಿ ಹೊರಡಿಸಿದೆಯೇ ?

## ಐಟಿ/ಬಿಟಿ ಕ್ಷೇತ್ರಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಮತ್ತು AI ತಂತ್ರಜ್ಞಾನ ಕೇಂದ್ರಗಳ ಸ್ಥಾಪನೆ

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೨ (೧೧೦೫) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಬಹುರಾಷ್ಟ್ರೀಯ ಐಟಿ ಕಂಪನಿಗಳಲ್ಲಿ ಸ್ಥಳೀಯ ಕನ್ನಡಿಗರಿಗೆ ಆದ್ಯತೆಯ ಮೇರೆಗೆ ಉದ್ಯೋಗ ಸಿಗುತ್ತಿದೆಯೇ ; ಇದನ್ನು ಮೇಲ್ವಿಚಾರಣೆ ಮಾಡಲು ಸರ್ಕಾರ ಸೂಕ್ತ ವ್ಯವಸ್ಥೆ ಮಾಡುವುದೇ ;

(ಆ) ಕೃತಕ ಬುದ್ಧಿಮತ್ತೆ (AI) ತಂತ್ರಜ್ಞಾನವನ್ನು ಉತ್ತೇಜಿಸಲು ರಾಜ್ಯ ಸರ್ಕಾರ 'ವಿಶೇಷ Al ನೀತಿ' (AI Policy) ಜಾರಿಗೆ ತಂದಿದೆಯೇ ; ಹಾಗಿದ್ದಲ್ಲಿ, ಅದರ ಪ್ರಮುಖ ಉದ್ದೇಶಗಳೇನು ;

(ಇ) ರಾಜ್ಯದ ಸರ್ಕಾರಿ ಕಾಲೇಜು ಹಾಗೂ ಪಾಲಿಟೆಕ್ನಿಕ್ ವಿದ್ಯಾರ್ಥಿಗಳಿಗೆ ಐಟಿ ಕಂಪನಿಗಳ ಸಹಯೋಗದೊಂದಿಗೆ ಆಧುನಿಕ ಕೋರ್ಸ್‌ಗಳ (AI, Data Science, Coding) ಉಚಿತ ತರಬೇತಿ ನೀಡಲು ಸರ್ಕಾರ ಮುಂದಾಗಿದೆಯೇ ?

## ಎಐ ಆಧಾರಿತ 'ಇ–ಆಡಳಿತ' ಯೋಜನೆ ಹಾಗೂ 'ಕರ್ತವ್ಯ' (KAMS) ಹಾಜರಾತಿ ವ್ಯವಸ್ಥೆಯ ಸುಧಾರಣೆಗಳ ಕುರಿತು

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೩ (೧೧೧೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಹಾಲಿ 'ಇ–ಆಡಳಿತ' ವ್ಯವಸ್ಥೆಯನ್ನು ಕೃತಕ ಬುದ್ಧಿಮತ್ತೆ (AI) ಆಧಾರಿತ 'ಇಂಟೆಲಿಜೆನ್ಸ್ ಆಡಳಿತ' (ಇ–ಆಡಳಿತ)ಕ್ಕೆ ಮೇಲ್ದರ್ಜೆಗೇರಿಸಲು ಇ–ಆಡಳಿತ ಇಲಾಖೆ ನಿರ್ಧರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಯೋಜನೆಯ ಪ್ರಸ್ತುತ ಹಂತ ಮತ್ತು ಉದ್ದೇಶಗಳೇನು ;

(ಆ) ಸರ್ಕಾರಿ ಸೇವೆಗಳನ್ನು ಕ್ಷಿಪ್ರವಾಗಿ ಒದಗಿಸಲು, ಬಜೆಟ್ ಅನುದಾನ ಹಂಚಿಕೆ ಮತ್ತು ಯೋಜನೆಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಎಐ ತಂತ್ರಜ್ಞಾನವನ್ನು ಬಳಸಿಕೊಳ್ಳಲು ರೂಪಿಸಿರುವ ಕಾರ್ಯಾಚರಣಾ ಯೋಜನೆಗಳ ವಿವರ ನೀಡುವುದು ;

(ಇ) ಸರ್ಕಾರಿ ಇಲಾಖೆಗಳ ಅಗಾಧ ದತ್ತಾಂಶವನ್ನು (Data) ಎಐ ಮೂಲಕ ವಿಶ್ಲೇಷಿಸುವಾಗ ನಾಗರಿಕರ ಖಾಸಗಿತನಕ್ಕೆ ಧಕ್ಕೆಯಾಗದಂತೆ ಹಾಗೂ ದತ್ತಾಂಶ ದುರುಪಯೋಗ ತಡೆಯಲು ರೂಪಿಸುತ್ತಿರುವ ಸುರಕ್ಷತಾ ನೀತಿ ಅಥವಾ ನಿಯಮಾವಳಿಗಳೇನು ;

(ಈ) ಬಯೋಮೆಟ್ರಿಕ್ ಮತ್ತು ಡಿಜಿಟಲ್ ಹಾಜರಾತಿಯ ಲೋಪಗಳನ್ನು ತಡೆಯಲು 'ಕರ್ತವ್ಯ' (KAMS) ತಂತ್ರಜ್ಞಾನ ವ್ಯವಸ್ಥೆಯಡಿ ಜಿಯೋ ಲೊಕೇಶನ್, ಫೇಸ್ ರೆಕಗ್ನಿಷನ್ ಹಾಗೂ ಲೈವ್‌ನೆಸ್ ಡಿಟೆಕ್ಷನ್ ಅಳವಡಿಸಲು ಉದ್ದೇಶಿಸಲಾಗಿದೆಯೇ ; ಇದರಿಂದ ನೌಕರರ ಶಿಸ್ತು ಮತ್ತು ಜವಾಬ್ದಾರಿಯುನ್ನು ಹೇಗೆ ಖಾತರಿಪಡಿಸಲಾಗುವುದು ?

## ರಾಜ್ಯದ BPL ಕುಟುಂಬಗಳ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟ್ಯಾಪ್ ವಿತರಿಸುವ ಹಾಗೂ ಶಾಸಕರ ಪ್ರದೇಶಾಭಿವೃದ್ಧಿ ನಿಧಿ (MLALAD) ಬಳಕೆಯ ಕುರಿತು

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೪ (೧೧೦೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಇಂದಿನ ಡಿಜಿಟಲ್ ಶಿಕ್ಷಣ ಯುಗದಲ್ಲಿ, ರಾಜ್ಯದ ಬಡತನ ರೇಖೆಗಿಂತ ಕೆಳಗಿರುವ (BPL) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಹಿಂದುಳಿದ ವರ್ಗಗಳು ಹಾಗೂ ಸಾಮಾನ್ಯ ವರ್ಗದ ಎಲ್ಲಾ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಉಚಿತ ಲ್ಯಾಪ್‌ಟ್ಯಾಪ್ ಒದಗಿಸುವ ಯೋಜನೆ ಜಾರಿಗೆ ತರುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಆ) ಹಾಗಿದ್ದಲ್ಲಿ, ಈ ಯೋಜನೆಯ ಅನುಷ್ಠಾನಕ್ಕೆ ರೂಪಿಸಲಾದ ಮಾರ್ಗಸೂಚಿಗಳೇನು; ಇಲ್ಲದಿದ್ದಲ್ಲಿ, ಎಲ್ಲಾ ವರ್ಗದ BPL ವಿದ್ಯಾರ್ಥಿಗಳಿಗೆ ಡಿಜಿಟಲ್ ಶಿಕ್ಷಣವನ್ನು ತಲುಪಿಸಲು ಸರ್ಕಾರ ಕೈಗೊಂಡಿರುವ ಪರ್ಯಾಯ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಶಾಸಕರಿಗೆ ಹಂಚಿಕೆಯಾಗುವ ರೂ. ೨.೦೦ ಕೋಟಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಲ್ಲಿ ಶೇಕಡ ೨೫ ರಷ್ಟು ಮೊತ್ತವನ್ನು ಕಡ್ಡಾಯವಾಗಿ ತಮ್ಮ ಕ್ಷೇತ್ರದ BPL ಬಡ ವಿದ್ಯಾರ್ಥಿಗಳಿಗೆ ಲ್ಯಾಪ್ ಟ್ಯಾಪ್/ಗಣಕಯಂತ್ರ ಒದಗಿಸಲು ವ್ಯಯಿಸಲು ಅನುಕೂಲವಾಗುವಂತೆ ಆದೇಶ/ಸುತ್ತೋಲೆ ಹೊರಡಿಸುವ ಉದ್ದೇಶ ಸರ್ಕಾರಕ್ಕಿದೆಯೇ ;

(ಈ) ಪ್ರಸ್ತುತ ಚಾಲ್ತಿಯಲ್ಲಿರುವ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಮಾರ್ಗಸೂಚಿಗಳಡಿ ಶಾಸಕರು ತಮ್ಮ ಅನುದಾನದಿಂದ ವಿದ್ಯಾರ್ಥಿಗಳಿಗೆ ನೇರವಾಗಿ ಲ್ಯಾಪ್‌ಟ್ಯಾಪ್ ಹಂಚಿಕೆ ಮಾಡಲು ಅವಕಾಶವಿದೆಯೇ; ಇದ್ದಲ್ಲಿ, ಅದಕ್ಕೆ ವಿಧಿಸಲಾಗಿರುವ ನಿಯಮಗಳು ಹಾಗೂ ಗರಿಷ್ಠ ಅನುದಾನದ ಮಿತಿ ಎಷ್ಟು?

## ಕರ್ನಾಟಕ ಲೋಕಸೇವಾ ಆಯೋಗದ (KPSC) ನೇಮಕಾತಿಗಳಲ್ಲಿನ ಅಕ್ರಮಗಳು, ಪ್ರಶ್ನೆ ಪತ್ರಿಕೆ ಸೋರಿಕೆ ಹಾಗೂ ಸಾಂಸ್ಥಿಕ ಸುಧಾರಣೆಗಳ ಕುರಿತು

**ಶ್ರೀ ಶಿವಣ್ಣ ಬಿ.ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೫ (೧೧೦೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪರೀಕ್ಷಾರ್ಥಿ ಮತ್ತು ಉದ್ಯೋಗಾಕಾಂಕ್ಷಿ ಯುವಜನತೆಯ ಭವಿಷ್ಯವನ್ನು ನಿರ್ಧರಿಸುವ 'ಕರ್ನಾಟಕ ಲೋಕಸೇವಾ ಆಯೋಗದ' (KPSC) ನೇಮಕಾತಿ ಪ್ರಕ್ರಿಯೆಗಳಲ್ಲಿ OMR ಉತ್ತರ ಪತ್ರಿಕೆಗಳ ತಿದ್ದುವಿಕೆ, ಪ್ರಶ್ನೆ ಪತ್ರಿಕೆ ಸೋರಿಕೆ, ಮಧ್ಯವರ್ತಿಗಳ ಹಸ್ತಕ್ಷೇಪ ಹಾಗೂ ಸ್ವಜನಪಕ್ಷಪಾತದಂತಹ ಗಂಭೀರ ಆರೋಪಗಳು ಮತ್ತು ಎಫ್.ಐ.ಆರ್. (FIR) ದಾಖಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇತ್ತೀಚೆಗೆ ಕೆ.ಪಿ.ಎಸ್.ಸಿ ನಡೆಸಿದ ಗೆಜೆಟೆಡ್ ಪ್ರೊಬೇಷನರ್ಸ್ ಹಾಗೂ ಪಶುವೈದ್ಯಾಧಿಕಾರಿ ಸೇರಿದಂತೆ ವಿವಿಧ ನೇಮಕಾತಿಗಳಲ್ಲಿ ನಡೆದಿವೆ ಎನ್ನಲಾದ ಅಕ್ರಮಗಳ ಕುರಿತು ಸಿಐಡಿ (CID) ಅಥವಾ ಇತರ ಸಂಸ್ಥೆಗಳಿಂದ ನಡೆಯುತ್ತಿರುವ ತನಿಖೆಯ ಪ್ರಸ್ತುತ ಹಂತವೇನು ; ಈ ಅಕ್ರಮಗಳಲ್ಲಿ ಭಾಗಿಯಾಗಿರುವ ಆಯೋಗದ ಅಧಿಕಾರಿಗಳು, ಸಿಬ್ಬಂದಿ ಹಾಗೂ ಮಧ್ಯವರ್ತಿಗಳ ವಿರುದ್ಧ ಸರ್ಕಾರ ಕೈಗೊಂಡಿರುವ ಶಿಸ್ತು ಮತ್ತು ಕಾನೂನು ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) ಕೆ.ಪಿ.ಎಸ್.ಸಿ ನಡೆಸುವ ಪರೀಕ್ಷೆಗಳ ಪಾರದರ್ಶಕತೆಯನ್ನು ಕಾಯ್ದುಕೊಳ್ಳಲು ಹಾಗೂ ಪ್ರಶ್ನೆ ಪತ್ರಿಕೆ ಸೋರಿಕೆ ತಡೆಯಲು 'ಕರ್ನಾಟಕ ಸಾರ್ವಜನಿಕ ಪರೀಕ್ಷೆಗಳ ಅಕ್ರಮ ಮತ್ತು ಭ್ರಷ್ಟಾಚಾರ ತಡೆ ಕಾಯ್ದೆ-೨೦೨೩' (Karnataka Public Examination Act) ರಡಿಯಲ್ಲಿ ಸರ್ಕಾರ ಕೈಗೊಂಡಿರುವ ಕಠಿಣ ತಡೆಗಟ್ಟುವ ಕ್ರಮಗಳೇನು ; ಹಾಗೂ ಕಳಂಕಿತ ನೇಮಕಾತಿ ಪ್ರಕ್ರಿಯೆಗಳಿಂದಾಗಿ ವರ್ಷಗಟ್ಟಲೆ ಕಾಯುತ್ತಿರುವ ಲಕ್ಷಾಂತರ ಪ್ರಾಮಾಣಿಕ ಅಭ್ಯರ್ಥಿಗಳ ಹಿತರಕ್ಷಣೆಗೆ ಸರ್ಕಾರ ತೆಗೆದುಕೊಂಡ ನಿರ್ಧಾರಗಳೇನು ;

(ಈ) ಕೆ.ಪಿ.ಎಸ್.ಸಿಯ ಸಾಂಸ್ಥಿಕ ಶ್ರೇಷ್ಠತೆ ಮತ್ತು ಸಾರ್ವಜನಿಕ ವಿಶ್ವಾಸಾರ್ಹತೆಯನ್ನು ಮರುಸ್ಥಾಪಿಸಲು ಪಿ.ಸಿ. ಹೋತಾ ಕಮಿಟಿ (Hota Committee) ಶಿಫಾರಸುಗಳ ಜಾರಿ, ಅಧ್ಯಕ್ಷರು ಮತ್ತು ಸದಸ್ಯರ ನೇಮಕಕ್ಕೆ ಕಟ್ಟುನಿಟ್ಟಿನ 'ಶೋಧನಾ ಸಮಿತಿ' (Search Committee) ರಚನೆ, ಯುಪಿಎಸ್‌ಸಿ (UPSC) ಮಾದರಿಯ ತಂತ್ರಜ್ಞಾನ ಆಧಾರಿತ/ಡಿಜಿಟಲ್ ಮೌಲ್ಯಮಾಪನ ಮತ್ತು ಕಟ್ಟುನಿಟ್ಟಿನ ಸಮಯಾವಧಿಯ ನೇಮಕಾತಿ ಕ್ಯಾಲೆಂಡರ್ ಜಾರಿಗೊಳಿಸಲು ಸರ್ಕಾರ ಯೋಜಿಸಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ?

## ಹೊರಗುತ್ತಿಗೆ ನೌಕರರ ವೇತನ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೫೬ (೧೧೪೮) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರಿ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಲು ಇರುವ ನಿಯಮಗಳೇನು ; ಈ ಕುರಿತು ವಿಸ್ತೃತವಾದ ವಿವರಗಳನ್ನು ಒದಗಿಸುವುದು ;

(ಆ) ಸರ್ಕಾರಿ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಗೊಳ್ಳುವ ಸಿಬ್ಬಂದಿಗಳ ವೇತನವನ್ನು ನೇಮಿಸಿಕೊಂಡ ಏಜೆನ್ಸಿಗಳು ಸಿಬ್ಬಂದಿಗಳಿಗೆ ಸರ್ಕಾರ ನಿರ್ಧರಿಸಿ ವೇತನ ನೀಡದೆ ಅದರಲ್ಲಿ ಕಡಿತಗೊಳಿಸಿ ವೇತನ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಗಮನಕ್ಕೆ ಬಂದಿದ್ದರೆ, ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಹೊರಗುತ್ತಿಗೆ ಸಿಬ್ಬಂದಿಗಳ ವೇತನವನ್ನು ನೇಮಿಸಿಕೊಂಡ ಏಜೆನ್ಸಿಗಳು ಸಮಯಕ್ಕೆ ಸರಿಯಾಗಿ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

## ಲಿಫ್ಟ್‌ಗಳಲ್ಲಿ ಅಂಗವಿಲರಿಗೆ ಉದ್ಯೋಗ ನೀಡುವ ಕುರಿತು

**ಶ್ರೀ ಸುನೀಲ್‌ಗೌಡ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೦೫೭ (೧೧೪೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಂಗವಿಕಲರಿಗೆ ಸರ್ಕಾರಿ ಉದ್ಯೋಗಗಳಲ್ಲಿ ಶೇಕಡ ಎಷ್ಟು ಮೀಸಲಾತಿ ನೀಡಲಾಗಿದೆ ;

(ಆ) ಸರ್ಕಾರಿ ಬಹುಮಹಡಿ ಕಟ್ಟಡಗಳಲ್ಲಿಯ ಲಿಫ್ಟ್‌ಗಳಲ್ಲಿ ಆಪರೇಟರ್ ಹುದ್ದೆಗಳನ್ನು ಸಂಪೂರ್ಣವಾಗಿ ಅಂಗವಿಕಲರಿಗೆ ಮೀಸಲಿರುವ ಪ್ರಸ್ತಾವನೆಯೂ ಸರ್ಕಾರದ ಮುಂದೆ ಇದೆಯೇ ; ಈ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಸರ್ಕಾರಿ ಕಟ್ಟಡಗಳ ಲಿಪ್ಟ್‌ಗಳಲ್ಲಿ ಲಿಫ್ಟ್ ನಿರ್ವಾಹಕ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಇರುವ ನಿಯಮಗಳೇನು ;

(ಈ) ಸರ್ಕಾರಿ ಮತ್ತು ಖಾಸಗಿ ಕಟ್ಟಡಗಳಲ್ಲಿಯ ಲಿಪ್ಟ್‌ಗಳಲ್ಲಿ, ಲಿಫ್ಟ್ ಆಪರೇಟರ್ ಹುದ್ದೆಗಳನ್ನು ಕಡ್ಡಾಯವಾಗಿ ಅಂಗವಿಕಲರಿಗೆ ಮೀಸಲಿಸುವ ಕುರಿತು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು ?

## ಅರ್ಕಾವತಿ ಬಡಾವಣೆ ಕುರಿತು

**ಶ್ರೀ ಶರವಣ ಟಿ. ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೮ (೧೧೫೨) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ಒಟ್ಟು ಎಷ್ಟು ಪ್ರಮಾಣ ಮತ್ತು ಎಷ್ಟು ಜನರ ಭೂಮಿ ಡಿ ನೋಟಿಫೈ ಮಾಡಲಾಗಿದೆ ; ಡಿ ನೋಟಿಫೈ ಮಾಡಲು ಕಾರಣಗಳೇನು ಸದರಿ ಬಡಾವಣೆಗೆ ಸಂಬಂಧಿಸಿದಂತೆ ಭೂಸ್ವಾಧೀನ ತಕರಾರು ಪ್ರಕರಣಗಳೆಷ್ಟು ; ಎಷ್ಟು ಪ್ರಮಾಣದ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ; (ಪ್ರಕರಣವಾರು ಮಾಹಿತಿ ನೀಡುವುದು)

(ಆ) ಅರ್ಕಾವತಿ ಬಡಾವಣೆಗೆ ಡಿ ನೋಟಿಫಿಕೇಶನ್‌ಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಕೆಂಪಣ್ಣ ಆಯೋಗ ವರದಿಯನ್ನು ಯಾವಾಗ ಸರ್ಕಾರಕ್ಕೆ ಸಲ್ಲಿಸಲಾಯಿತು ; ಸದರಿ ವರದಿಯ ಸಂಪೂರ್ಣ ಭಾಗ ಬಿಡುಗಡೆಗೆ ವಿಳಂಬ ಮಾಡಲು ಕಾರಣವೇನು ;

(ಇ) ಡಿ ನೋಟಿಫೈ ಆದ ಜಮೀನಿನ ಮಾಲೀಕರು ತಂತಿಬೇಲಿ ನಿರ್ಮಿಸಿರುವುದರಿಂದ ಲೇಔಟ್‌ಗೆ ಸಂಪರ್ಕ ರಸ್ತೆ ಇಲ್ಲದಿರುವುದರಿಂದ ಬಡಾವಣೆ ರಚನೆಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಭೂ ಸ್ವಾಧೀನ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಶಿಫಾರಸ್ಸುಗಳ ಸಂಪೂರ್ಣ ಮಾಹಿತಿ ನೀಡುವುದು ;

(ಈ) ಯಾವ ಕಾಲಮಿತಿಯಲ್ಲಿ ಡಿ ನೋಟಿಫೈ ಆದ ಭೂಮಿಯನ್ನು ಭೂ ಸ್ವಾಧೀನ ಮಾಡಿಕೊಳ್ಳಲಾಗುವುದು ?

## GBA ವ್ಯಾಪ್ತಿಯ ನಗರ ಪಾಲಿಕೆಗಳಲ್ಲಿ ಮೂಲಭೂತ ಸೌಕರ್ಯಗಳ ಬಗ್ಗೆ

**ಶ್ರೀ ಶರವಣ ಟಿ. ಎ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೫೯ (೧೧೫೩) ಮಾನ್ಯ ಗ್ರೇಟರ್ ಬೆಂಗಳೂರು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರ ಜಿಬಿಎ ವ್ಯಾಪ್ತಿಯಲ್ಲಿ ಬರುವ ಐದು ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ಮೂಲಭೂತ ಸೌಕರ್ಯ ಕಲ್ಪಿಸಲು ಅವಶ್ಯವಿರುವ ಮೊತ್ತ ವೆಷ್ಟು ;

(ಆ) ಇದಕ್ಕಾಗಿ ಮಟ್ಟದಲ್ಲಿ ಬಿಬಿಎಂಪಿ ಸಭೆ ನಡೆಸಲು ಸಭಾಂಗಣ, ಬಿಬಿಎಂಪಿ ಕೇಂದ್ರ ಕಛೇರಿ ವಲಯವಾರು ಕಛೇರಿಗಳು ವಿಧಾನಸಭಾ ಕ್ಷೇತ್ರಗಳಲ್ಲಿ ಕಛೇರಿಗಳು ಸೇರಿ ಸಂಪೂರ್ಣ ಮೂಲಭೂತ ಸೌಕರ್ಯ ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು ; ಹಾಗೂ ಯಾವ ಮೂಲಗಳಿಂದ ಹಣವನ್ನು ಹೊಂದಿಸಲಾಗುವುದು ;

(ಇ) ಈ ಮೂಲಭೂತ ವ್ಯವಸ್ಥೆ ಪೂರ್ಣಗೊಳಿಸಲು ಬೇಕಾದ ಅವಧಿ ಎಷ್ಟು ಹಾಗೂ ಜಿಬಿಎ ವ್ಯಾಪ್ತಿಯಲ್ಲಿ ಮೂಲಭೂತ ವ್ಯವಸ್ಥೆ ಇಲ್ಲದೆ ಜಿಬಿಎ ಚುನಾವಣೆಯನ್ನು ಮಾಡಲು ಸಾಧ್ಯವೇ ; ಎಂಬುದರ ಮಾಹಿತಿ ನೀಡುವುದು ?

## ಬೆಂಗಳೂರು ನಗರದಲ್ಲಿನ ದಿನನಿತ್ಯದ ಕಸ ವಿಲೇವಾರಿಯ ಮುತುವರ್ಜಿ ವಹಿಸುವ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೬೦ (೧೧೫೪) ಮಾನ್ಯ ಗ್ರೇಟರ್ ಬೆಂಗಳೂರು ಸಚಿವರು ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಪ್ರಮುಖ ಮತ್ತು ಹೈಫೈ ಬಡಾವಣೆಗಳಲ್ಲಿ ದಿನನಿತ್ಯ ತ್ಯಾಜ್ಯ ತೆರವುಗೊಳಿಸಲು ಸರ್ಕಾರ ಹಾಗೂ ಬಿಬಿಎಂಪಿ ವಿಶೇಷ ಮುತುವರ್ಜಿ ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ನಗರದ ಸ್ಲಂಗಳು, ಜಿ ಪ್ಲಸ್ ೩ ಮನೆಗಳಿರುವ ಪ್ರದೇಶಗಳು ಹಾಗೂ ಬಡ ಮತ್ತು ಮಧ್ಯಮ ವರ್ಗದ ಜನರು ವಾಸಿಸುವ ಬಡಾವಣೆಗಳಲ್ಲಿ ದಿನಗಟ್ಟಲೆ ಕೆಲಸ ಕಸ ವಿಲೇವಾರಿಯಾಗದೆ ಕಸದ ರಾಶಿ ಬಿದ್ದಿರುವುದು; ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಈ ತಾರತಮ್ಯಕ್ಕೆ ಕಾರಣಗಳೇನು ;

(ಇ) ಕಳೆದ ಎರಡು ವರ್ಷಗಳಲ್ಲಿ ಬೆಂಗಳೂರಿನ ಪ್ರಮುಖ ಬಡಾವಣೆಗಳು ಹಾಗೂ ಬಡವರು ವಾಸಿಸುವ ಬಡಾವಣೆಗಳಿಂದ ತ್ಯಾಜ್ಯ ಸಂಗ್ರಹಿಸಲು ನಿಯೋಜಿಸಲಾದ ಆಟೋ, ಟಿಪ್ಪರ್‌ಗಳು ಮತ್ತು ಪೌರಕಾರ್ಮಿಕರ ಸಂಖ್ಯೆ ಎಷ್ಟು; (ವಾರ್ಡ್‌ವಾರು ವಿವರ ನೀಡುವುದು)

(ಈ) ಬಡವರು ವಾಸಿಸುವ ಬಡಾವಣೆಗಳಲ್ಲಿ ಹರಡುತ್ತಿರುವ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮತ್ತು ಅಲ್ಲಿನ ತ್ಯಾಜ್ಯವನ್ನು ಪ್ರತಿದಿನವೂ ಸಮರ್ಪಕವಾಗಿ ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ತುರ್ತು ಕ್ರಮಗಳೇನು ?

## ೨೦೨೫–೨೬ನೇ ಸಾಲಿನಲ್ಲಿ ನೀಡಲಾದ ಅನುದಾನದ ಶೀರ್ಷಿಕೆಯ ಬಗ್ಗೆ

**ಶ್ರೀ ಶಿವಕುಮಾರ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೬೧ (೧೧೫೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೫-೨೬ನೇ ಸಾಲಿನಲ್ಲಿ ವಿವಿಧ ಲೆಕ್ಕಶೀರ್ಷಿಕೆ ಅಡಿಯಲ್ಲಿ ವಿವಿಧ ಇಲಾಖೆಗಳಿಗೆ ಎಷ್ಟು ಅನುದಾನ ಮರು ಹೊಂದಾಣಿಕೆ ಮಾಡಲಾಗಿದೆ ; (ಇಲಾಖಾವಾರು ಮಾಹಿತಿ ನೀಡುವುದು)

(ಆ) ೨೦೨೫-೨೬ನೇ ಸಾಲಿನಲ್ಲಿ ಇಲಾಖಾವಾರು ಬಜೆಟ್‌ನಲ್ಲಿ ಒದಗಿಸಲಾದ ಅನುದಾನ ಎಷ್ಟು; ಹೆಚ್ಚುವರಿ ಅನುದಾನ ಒದಗಿಸಲಾಗಿದೆಯೇ ; (ವಿವರ ನೀಡುವುದು)

(ಇ) ಕಳೆದ ಮೂರು ವರ್ಷಗಳಲ್ಲಿ ಆರ್ಥಿಕ ಇಲಾಖೆಯು ವಿದೇಶಿ ನೆರವಿನಿಂದ ಪಡೆಯಲಾದ ಆರ್ಥಿಕ ನೆರವು ಎಷ್ಟು; ಮತ್ತು ವಿದೇಶಿ ನೆರವಿನಿಂದ ಆರ್ಥಿಕ ನೆರವು ಪಡೆಯಲು ವಿಧಿಸಲಾಗಿರುವ ಮಾನದಂಡಗಳೇನು ;

(ಈ) ೧೬ನೇ ವಿಧಾನಸಭೆಯಲ್ಲಿ ಸರ್ಕಾರವು ಪಡೆದ ಸಾಲದ ಮೊತ್ತವೆಷ್ಟು; ಮತ್ತು ಸದರಿ ಸಾಲಕ್ಕೆ ಸಂದಾಯ ಮಾಡಲಾದ ಅಸಲು ಮತ್ತು ಬಡ್ಡಿಯ ವಿವರಗಳ ವರ್ಷವಾರು ಮಾಹಿತಿ ನೀಡುವುದು ;

(ಉ) ಪ್ರತಿ ವರ್ಷ ಮಂಡಿಸುವ ಆಯವ್ಯಯದಲ್ಲಿ ಪ್ರತಿ ಇಲಾಖೆಗೆ ಹೆಚ್ಚುವರಿಯಾಗಿ ಅಂದರೆ ಪ್ರತಿ ಇಲಾಖೆಗೆ ಹಂಚಿಕೆ ಮಾಡಲಾಗುವ ಅನುದಾನಕ್ಕೆ ನಿಯಮಾನುಸಾರ ಹಿಂದಿನ ವರ್ಷ ಒದಗಿಸಲಾದ ಅನುದಾನಕ್ಕೆ ಹೆಚ್ಚುವರಿಯಾಗಿ ೧೩% ಅನುದಾನ ಒದಗಿಸಲಾಗುತ್ತಿದೆಯೇ ; ಈ ನಿಯಮ ಪಾಲಿಸಲಾಗುತ್ತಿದೆಯೇ ? (ಮಾಹಿತಿ ನೀಡುವುದು)

(ಊ) ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡಲಾಗಿರುವ SCSP/ TSP ಯೋಜನೆಯಡಿಯಲ್ಲಿ ಒದಗಿಸಲಾದ ಅನುದಾನ ಸದ್ಬಳಕೆ ಮಾಡಲಾಗಿದೆಯೇ ; ಇಲ್ಲದಿದ್ದಲ್ಲಿ, ಅನುದಾನ ಬಳಕೆ ಮಾಡದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳುತ್ತಿದೆ ? (ವಿವರ ನೀಡುವುದು)

## ಹೊಸದಾಗಿ ಮಂಜೂರು ಮಾಡಿರುವ ಅಬಕಾರಿ ಬಾರ್‌ಗಳ ಬಗ್ಗೆ

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ ) :–**

೧೦೬೨ (೧೧೭೨) ಮಾನ್ಯ ಆರ್ಥಿಕ ಇಲಾಖೆಯಿಂದ ಅಬಕಾರಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ವಿವಿಧ ಯೋಜನೆಗಳಲ್ಲಿ ಮಂಜೂರುಗಿರಾವ ಬಾರ್‌ಗಳ ಮತ್ತು ಎಂ.ಆರ್.ಪಿ ಗಳ ಸಂಖ್ಯೆ ಎಷ್ಟು;

(ಆ) ಪ್ರಸ್ತುತ ವರ್ಷ ಹೊಸದಾಗಿ ಎಷ್ಟು ಅಬಕಾರಿ ಅಂಗಡಿಗಳನ್ನು ಮಂಜೂರು ಮಾಡಲಾಗುವುದು ;

(ಇ) ಈ ಅಂಗಡಿಗಳಿಗಾಗಿ ನಿಗಧಿಪಡಿಸಿರುವ ಸರ್ಕಾರಿ ಶುಲ್ಕ ಎಷ್ಟು; ಇದರಿಂದ ಸರ್ಕಾರಕ್ಕೆ ಬರಬಹುದಾದ ಆದಾಯ ಎಷ್ಟು;

(ಈ) ರಾಜ್ಯಕ್ಕೆ ಬರುವ ಆದಾಯದಲ್ಲಿ ಅಬಕಾರಿ ಯೋಜನೆಯಿಂದ ಶೇಕಡವಾರು ಆದಾಯ ಎಷ್ಟು?

## ರಾಜ್ಯದಲ್ಲಿ ನಗರಾಭಿವೃದ್ದಿ ಇಲಾಖೆಯಡಿ ಮಹಾನಗರ ಪಾಲಿಕೆಯ ಮಾಹಿತಿ

**ಶ್ರೀ ಡಿ. ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ ) :–**

೧೦೬೩ (೧೧೭೩) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಗರಾಭಿವೃದ್ದಿ ಇಲಾಖೆಯಡಿ ಬರುವ ನಗರಸಭೆ ಮತ್ತು ಮಹಾನಗರ ಪಾಲಿಕೆಗಳ ಸಂಖ್ಯೆ ಎಷ್ಟು;

(ಆ) ನಗರಸಭೆ ಮತ್ತು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಸ್ವತ್ತುಗಳ ಸಂಖ್ಯೆ ಎಷ್ಟು; ಈ ಪೈಕಿ ಇ–ಖಾತಾ ಅಗದೇ ಇರುವ ಸ್ವತ್ತುಗಳ ಸಂಖ್ಯೆ ಎಷ್ಟು; ಬಾಕಿಯಿರುವ ಸ್ವತ್ತುಗಳಿಗೆ ಇ–ಖಾತಾ ನೀಡುವುದು ಯಾವಾಗ ;

(ಇ) ಇ–ಖಾತಾವನ್ನು ನೀಡಿದ ನಂತರ ಕಾನೂನಾತ್ಮಕವಾಗಿ ಸ್ವತ್ತನ್ನು ಖರೀದಿದಾರರಿಗೆ ಪೂರ್ಣವಾಗಿ ವರ್ಗಾವಣೆ ಮಾಡಲಾಗಿದೆಯೇ ;

(ಈ) ನಗರಸಭೆ ಮತ್ತು ಪುರಸಭೆಗಳಿಂದ ರೆವಿನ್ಯೂ ನಿವೇಶನಗಳಿಗೆ ನೀಡಿರುವ ಇ–ಖಾತಾಗಳು ಕಾನೂನು ಬದ್ಧವೇ, ಇವುಗಳನ್ನು ಸಕ್ರಮಗೊಳಿಸಲು ಸರ್ಕಾರದ ಹಂತದಲ್ಲಿ ಕೈಗೊಂಡಿರುವ ಕ್ರಮಗಳೇನು ?

## ರಾಜ್ಯದಲ್ಲಿ ಮೂಲಭೂತ ಸೌಕರ್ಯ ಕಲ್ಪಿಸುವ ಕುರಿತು

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೦೬೪ (೧೧೭೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು ; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ;

(ಆ) ನಗರ ಸ್ಥಳಿಯ ಸಂಸ್ಥೆಗಳ ವ್ಯಾಪ್ತಿಯಲ್ಲಿರುವ ಹದಗೆಟ್ಟ ರಸ್ತೆಗಳನ್ನು ದುರಸ್ತಿ ಮಾಡಲು ಸರ್ಕಾರದಿಂದ ಎಷ್ಟು ಅನುದಾನ ನೀಡಲಾಗಿದೆ ; ಕಾಮಗಾರಿಗಳ ಗುಣಮಟ್ಟ ಪರಿಶೀಲನೆಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ನಗರ ಪ್ರದೇಶಗಳಲ್ಲಿ ಘನತ್ಯಾಜ್ಯ ನಿರ್ವಹಣೆಗಾಗಿ ಸರ್ಕಾರ ರೂಪಿಸಿರುವ ವ್ಯವಸ್ಥೆಗಳೇನು; ವೈಜ್ಞಾನಿಕ ರೀತಿಯಲ್ಲಿ ಕಸ ವಿಲೇವಾರಿ ಮಾಡುತ್ತಿರುವ ನಗರ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಎಷ್ಟು;

(ಈ) ನಗರ ಪ್ರದೇಶಗಳಲ್ಲಿ ವಸತಿ ರಹಿತ ಬಡ ಕುಟುಂಬಗಳಿಗೆ ವಸತಿ ಒದಗಿಸಲು ನಗರಾಭಿವೃದ್ಧಿ ಇಲಾಖೆಯ ಮೂಲಕ ಕೈಗೊಂಡಿರುವ ಯೋಜನೆಗಳ ಸಂಖ್ಯೆ ಮತ್ತು ಫಲಾನುಭವಿಗಳ ವಿವರ ನೀಡುವುದು ;

(ಉ) ಕಳೆದ ೩ ವರ್ಷಗಳಲ್ಲಿ ನಗರ ಪ್ರದೇಶಗಳಲ್ಲಿ ನಿಯಮಬಾಹಿರವಾಗಿ ನಿರ್ಮಿಸಿರುವ ಕಟ್ಟಡಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು ?

## ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಮತ್ತು ವಿದೇಶಿ ಪ್ರಜೆಗಳ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :-**

೧೦೬೫ (೧೯೪೪) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ಬಾಂಗ್ಲಾ ಹಾಗೂ ವಿದೇಶಿ ಪ್ರಜೆಗಳ ಸಂಖ್ಯೆ ಎಷ್ಟು ; ಇದರಲ್ಲಿ ಎಷ್ಟು ಜನರನ್ನು ಗುರುತಿಸಿ ಗಡಿಪಾರು ಮಾಡಲಾಗಿದೆ ಹಾಗೂ ಪ್ರಸ್ತುತ ಎಷ್ಟು ಜನರನ್ನು ಪತ್ತೆಹಚ್ಚಿ ತನಿಖೆಗೆ ಒಳಪಡಿಸಲಾಗುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಇತ್ತೀಚೆಗೆ ಬೆಂಗಳೂರಿನ ಪೊಲೀಸ್ ಪ್ರಧಾನ ಕಛೇರಿಯಲ್ಲಿ ನಡೆದ ಹಿರಿಯ ಪೊಲೀಸ್ ಅಧಿಕಾರಿಗಳ ವಾರ್ಷಿಕ ಸಭೆಯಲ್ಲಿ ವಿದೇಶಿ ಪ್ರಜೆಗಳ ಸ್ಥಳೀಯ ನೋಂದಣಿ ಕಛೇರಿ (ಎಫ್‌ಆರ್‌ಆರ್‌ಓ)ಯ ಎಸ್.ಪಿ ರವರು ತಿಳಿಸಿರುವಂತೆ ೨೦ ಲಕ್ಷಕ್ಕೂ ಅಧಿಕ ಅಕ್ರಮ ಬಾಂಗ್ಲಾ ವಲಸಿಗರು ರಾಜ್ಯದಲ್ಲಿ ನೆಲೆಸಿರುವುದು ನಿಜವೇ ;

(ಇ) ಅಧಿಕೃತ ಮಾಹಿತಿಯಂತೆ ಇಷ್ಟು ದೊಡ್ಡ ಸಂಖ್ಯೆಯಲ್ಲಿ ನೆಲೆಸಿರುವ ಅಕ್ರಮ ಬಾಂಗ್ಲಾ ವಲಸಿಗರಲ್ಲಿ ಕೇವಲ ಬೆರಳೆಣಿಕೆಯಷ್ಟು ಜನರನ್ನು ಪತ್ತೆ ಹಚ್ಚಿದ್ದು, ಅಧಿಕಾರಿಗಳ ವೈಫಲ್ಯವಾಗಿದ್ದು, ಈ ಬಗ್ಗೆ

ಸಂಬಂಧಿಸಿದ ಅಧಿಕಾರಿಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಈ) ಅಕ್ರಮ ಬಾಂಗ್ಲಾ ವಲಸಿಗರ ಬಗ್ಗೆ ಮಾಹಿತಿ ಗೊತ್ತಿದ್ದರೂ ಅವರಿಂದ ಲಂಚ ಸ್ವೀಕರಿಸಿ ಯಾವುದೇ ಕ್ರಮ ಕೈಗೊಳ್ಳದೇ ಇರುವ ಅಧಿಕಾರಿಗಳ ಬಗ್ಗೆ ಹಲವಾರು ಆರೋಪಗಳು ಸುದ್ದಿ ಮಾಧ್ಯಮಗಳಿಂದ ತಿಳಿದುಬಂದಿದ್ದು, ಅಂತಹ ಪ್ರಕರಣಗಳು ಯಾವುವು ಮತ್ತು ಅಂತಹ ಅಧಿಕಾರಿಗಳ ಮೇಲೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ;

(ಉ) ಕೇಂದ್ರದ ಬಿಎನ್‌ಎಸ್‌ಎಸ್ ಕಾಯ್ದೆ ಹಾಗೂ ಎನ್‌ಡಿಪಿಎಸ್ ಕಾಯ್ದೆಗಳನ್ನು ಹೊರತುಪಡಿಸಿ ರಾಜ್ಯದಲ್ಲಿ ಅಕ್ರಮವಾಗಿ ನೆಲೆಸಿರುವ ವಿದೇಶಿ ಪ್ರಜೆಗಳು ಮಾದಕವಸ್ತು ಮಾರಾಟ ಹಾಗೂ ಇತರೆ ಅಪರಾಧ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವವರ ಮೇಲೆ ಕ್ರಮ ಕೈಗೊಳ್ಳಲು ಪ್ರತ್ಯೇಕ ಕಾನೂನು ರಚಿಸುವ ಬಗ್ಗೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ ?

## KPSC ನೇಮಕಾತಿಗಳ ಹೆಚ್ಚುವರಿ ಆಯ್ಕೆ ಪಟ್ಟಿಗಳನ್ನು ಬಿಡುಗಡೆ ಮಾಡುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೦೬೬ (೧೧೯೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೧೫ ರಿಂದ ೨೦೨೫ರ ಡಿಸೆಂಬರ್ ರವರೆಗೆ ಕೆ.ಪಿ.ಎಸ್.ಸಿ ಯಿಂದ ಯಾವ ಯಾವ ನೇಮಕಾತಿಗಳಿಗೆ ಅಧಿಸೂಚನೆ ಹೊರಡಿಸಲಾಗಿದೆ ; ಸದರಿ ಎಲ್ಲಾ ನೇಮಕಾತಿಗಳ ಸ್ಥಿತಿಗತಿಯ ಮಾಹಿತಿಯನ್ನು ನೀಡುವುದು ;

(ಆ) ಸದರಿ ಎಲ್ಲಾ ನೇಮಕಾತಿಗಳಿಗೆ ಸಂಬಂಧಿಸಿದಂತೆ ಬಿಡುಗಡೆಗೊಂಡ ಅಂತಿಮ ಪಟ್ಟಿಗಳಲ್ಲಿ ಹುದ್ದೆ ತ್ಯಾಗ, ಕೋರ್ಟ್ ಪ್ರಕರಣಗಳು ಹಾಗೂ ಇನ್ನಿತರೆ ಕಾರಣಗಳಿಂದ ಖಾಲಿಯಾದ ಹುದ್ದೆಗಳಿಗೆ ಹೆಚ್ಚುವರಿ ಆಯ್ಕೆ ಪಟ್ಟಿಗಳನ್ನು ಬಿಡುಗಡೆ ಮಾಡಲಾಗಿದೆಯೇ ; ಮಾಡಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು ಬಿಡುಗಡೆ ಮಾಡಿಲ್ಲದಿದ್ದರೆ ಯಾವ ಕಾರಣಕ್ಕಾಗಿ ಹೆಚ್ಚುವರಿ ಆಯ್ಕೆ ಪಟ್ಟಿಗಳನ್ನು ಬಿಡುಗಡೆ ಮಾಡಿಲ್ಲ ;

(ಇ) ಸದರಿ ನೇಮಕಾತಿಗಳಲ್ಲಿ ಕೋರ್ಟ್‌ನಲ್ಲಿ ಪ್ರಕರಣ ದಾಖಲಾಗದ ಮತ್ತು ದಾಖಲಾದ ನೇಮಕಾತಿಗಳ ಸಂಪೂರ್ಣ ಮಾಹಿತಿಯನ್ನು ಒದಗಿಸುವುದು ;

(ಈ) ಸದರಿ ಎಲ್ಲಾ ನೇಮಕಾತಿಗಳಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಯನ್ನು ಬಿಡುಗಡೆ ಮಾಡದ ನೇಮಕಾತಿಗಳಲ್ಲಿ ಯಾವ ಕಾಲಮಿತಿಯಲ್ಲಿ ಹೆಚ್ಚುವರಿ ಆಯ್ಕೆ ಪಟ್ಟಿಗಳನ್ನು ಬಿಡುಗಡೆಮಾಡಲಾಗುತ್ತದೆ ?

## ರಾಜ್ಯದಲ್ಲಿ ಕಳೆದ ೩ ವರ್ಷಗಳಿಂದ ಸಂಭವಿಸಿರುವ ರಸ್ತೆ ಅಪಘಾತಗಳ ಬಗ್ಗೆ

**ಡಾ. ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೬೭ (೧೧೫೯) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಳೆದ ೩ ವರ್ಷಗಳಲ್ಲಿ ಸಂಭವಿಸಿರುವ ರಸ್ತೆ ಅಪಘಾತಗಳ ಸಂಖ್ಯೆ ಎಷ್ಟು ;

(ಆ) ಅದರಲ್ಲಿ ಸಾವಿನ ಪ್ರಮಾಣ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಈ ರಸ್ತೆ ಅಪಘಾತಗಳನ್ನು ತಡೆಗಟ್ಟಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

# ರಾಜ್ಯದಲ್ಲಿ ಅಕ್ರಮ ಬಾಂಗ್ಲಾದೇಶಿ ವಲಸಿಗರ ಮತ್ತು ಅವರ ವಿರುದ್ಧ ಕೈಗೊಂಡಿರುವ ಕ್ರಮಗಳ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೬೮ (೧೯೮) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅಂದಾಜು ೧೯ ಲಕ್ಷ ಅಕ್ರಮ ಬಾಂಗ್ಲಾದೇಶಿ ವಲಸಿಗರು ನೆಲಸಿದ್ದು, ಅದರಲ್ಲಿ ಬೆಂಗಳೂರಿನಲ್ಲೇ ೪.೫ ಲಕ್ಷಕ್ಕೂ ಹೆಚ್ಚು ಮಂದಿ ಇದ್ದಾರೆಂಬ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಪೊಲೀಸ್ ಆಂತರಿಕ ಭದ್ರತಾ ವಿಭಾಗ ಮತ್ತು ಗುಪ್ತಚರ ಇಲಾಖೆಯ ಅಧಿಕೃತ ಮಾಹಿತಿಯ ಪ್ರಕಾರ ರಾಜ್ಯದಲ್ಲಿ ಪ್ರಸ್ತುತ ಪತ್ತೆಯಾಗಿರುವ ಒಟ್ಟು ಅಕ್ರಮ ಬಾಂಗ್ಲಾದೇಶಿ ವಲಸಿಗರ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಇ) ಈ ಅಕ್ರಮ ವಲಸಿಗರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಸರ್ಕಾರಿ ಟೆಂಡರ್‌ಗಳಲ್ಲಿ ಭಾಗವಹಿಸಿರುವುದು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ನಾಮಪತ್ರ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಇಂತಹ ಪ್ರಕರಣಗಳಲ್ಲಿ ಎಷ್ಟು ಜನರ ವಿರುದ್ಧ ಎಫ್.ಐ.ಆರ್ ದಾಖಲಿಸಿ ಕ್ರಮ ಕೈಗೊಳ್ಳಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಈ) ಬೆಂಗಳೂರಿನ ವೈಟ್‌ಫೀಲ್ಡ್ , ಎಲೆಕ್ಟ್ರಾನಿಕ್ ಸಿಟಿ ಸೇರಿದಂತೆ ವಿವಿಧೆಡೆ ಇತ್ತೀಚೆಗೆ ನಡೆದ ವಿಶೇಷ ಕಾರ್ಯಾಚರಣೆಯಲ್ಲಿ ಪತ್ತೆಯಾದ ಶಂಕಿತ ವಲಸಿಗರನ್ನು ಗಡಿಪಾರು (Deportation) ಮಾಡಲು ಸರ್ಕಾರ ಯಾವ ತುರ್ತು ಕಾನೂನು ಕ್ರಮಗಳನ್ನು ಕೈಗೊಂಡಿದೆ ?

# ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರ (KUDA) ಮತ್ತು ನಗರದ ಮೂಲಭೂತ ಸೌಕರ್ಯಗಳ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೬೯ (೧೧೯೯) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ನಗರಾಭಿವೃದ್ಧಿ ಪ್ರಾಧಿಕಾರದಿಂದ (KUDA) ನಗರದ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಕೈಗೊಂಡ ಪ್ರಮುಖ ಕಾಮಗಾರಿಗಳು ಹಾಗೂ ಬಿಡುಗಡೆಯಾದ ಅನುದಾನವೆಷ್ಟು ;

(ಆ) ಕಲಬುರಗಿ ನಗರದಲ್ಲಿ ಕುಡಿಯುವ ನೀರು, ಒಳಚರಂಡಿ (UGD) ಮತ್ತು ರಸ್ತೆಗಳ ದುರಸ್ಥಿ ಸರಿಯಾಗಿ ಆಗದೆ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕಳೆದ ೨ ವರ್ಷಗಳಲ್ಲಿ ನಗರಾಭಿವೃದ್ಧಿ ಇಲಾಖೆಯಿಂದ ಕಲಬುರಗಿ ನಗರಕ್ಕೆ ಮಂಜೂರಾದ ಮತ್ತು ವೆಚ್ಚವಾದ ಮೊತ್ತವೆಷ್ಟು ; (ವಿವರ ನೀಡುವುದು)

(ಈ) ಕಲಬುರಗಿ ನಗರದ ಮೂಲಭೂತ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ತಕ್ಷಣವೇ ಕೈಗೊಳ್ಳಲಿರುವ ಕ್ರಮಗಳೇನು ?

# ರಾಜ್ಯದಲ್ಲಿ IT/BT ಕ್ಷೇತ್ರದ ವಿಸ್ತರಣೆ, ಕೃತಕ ಬುದ್ಧಿಮತ್ತೆ, ಪ್ರಭಾವ ಮತ್ತು ಸೈಬರ್ ಭದ್ರತಾ ಕ್ರಮಗಳ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೦ (೧೨೦೦) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಐಟಿ/ಬಿಟಿ ಉದ್ಯಮವನ್ನು ಕೇವಲ ಬೆಂಗಳೂರಿಗೆ ಸೀಮಿತಗೊಳಿಸದೆ, ಕಲ್ಯಾಣ ಕರ್ನಾಟಕ ಹಾಗೂ ಇತರ ೨ನೇ/ ೩ನೇ ಹಂತದ (Tier-2/Tier-3) ನಗರಗಳಿಗೆ ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಪ್ರಮುಖ ಕ್ರಮಗಳೇನು ; (ಉದಾ : ಕಲಬುರಗಿ, ಬೀದರ್, ಮೈಸೂರು, ಹುಬ್ಬಳ್ಳಿ)

(ಆ) ಇತ್ತೀಚೆಗೆ ಕೃತಕ ಬುದ್ಧಿಮತ್ತೆ (AI) ಮತ್ತು ಆಟೋಮೇಷನ್ ತಂತ್ರಜ್ಞಾನದಿಂದಾಗಿ ಐಟಿ ಕ್ಷೇತ್ರದಲ್ಲಿ ಆಗುತ್ತಿರುವ ಉದ್ಯೋಗ ನಷ್ಟ/ಲೇಆಫ್ (Layoffs) ತಡೆಯಲು ಮತ್ತು ಸ್ಥಳೀಯ ಕನ್ನಡಿಗ ಯುವಕ–ಯುವತಿಯರಿಗೆ ಮರು–ತರಬೇತಿ (Re-skilling) ನೀಡಲು ಸರ್ಕಾರದ ಬಳಿ ಇರುವ ವಿಶೇಷ ಯೋಜನೆಗಳೇನು ;

(ಇ) ರಾಜ್ಯದ ನವೋದ್ಯಮಗಳಿಗೆ (Startups) ಉತ್ತೇಜನ ನೀಡಲು ಮೀಸಲಿಟ್ಟಿರುವ ಅನುದಾನವೆಷ್ಟು ಮತ್ತು ಇದರಿಂದ ಕಲ್ಯಾಣ ಕರ್ನಾಟಕ ಭಾಗದ ಎಷ್ಟು ನವೋದ್ಯಮಗಳಿಗೆ ನೆರವು ಸಿಕ್ಕಿದೆ ; (ಜಿಲ್ಲಾವಾರು ವಿವರ ನೀಡುವುದು)

(ಈ) ರಾಜ್ಯ ಸರ್ಕಾರಿ ಇಲಾಖೆಗಳ ದತ್ತಾಂಶ (Data) ಹಾಗೂ ನಾಗರಿಕರ ಮಾಹಿತಿಯ ಮೇಲಿನ ಸೈಬರ್ ದಾಳಿಗಳನ್ನು ತಡೆಯಲು ಮತ್ತು 'ಸೈಬರ್ ಭದ್ರತೆ' (Cyber Security) ಬಲಪಡಿಸಲು ಸರ್ಕಾರ ತೆಗೆದುಕೊಂಡಿರುವ ಮುನ್ನೆಚ್ಚರಿಕಾ ಕ್ರಮಗಳೇನು ?

## ಮಾದಕ ವಸ್ತುಗಳ ಅಕ್ರಮ ಸರಬರಾಜು ಕುರಿತು

**ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೦೭೧ (೧೧೬೧) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದೊಳಗೆ ಗಾಂಜಾ, ಎಂಡಿಎಂಎ ಕೊಕೇನ್, ಹೆರಾಯಿನ್, ಟಿಸ್ಸಿ ಮಾತ್ರವಲ್ಲದೆ, ಸಿಂಥೆಟಿಕ್ ಡ್ರಗ್ಸ್ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳನ್ನು ಗೌಪ್ಯವಾಗಿ ಸರಬರಾಜುಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಇಂತಹ ಕೃತ್ಯಗಳನ್ನು ನಡೆಸುತ್ತಿರುವ ಹಾಗೂ ಇಂತಹ ದಂಧೆಗಳಲ್ಲಿ ಭಾಗಿಯಾಗಿರುವ ದಂಧೆಕೋರರನ್ನು ಬಂಧಿಸಲಾಗಿದೆಯೇ ; ಬಂಧಿಸಿದ್ದಲ್ಲಿ, ವಿವರ ನೀಡುವುದು ;

(ಇ) ಇಂತಹ ಕೃತ್ಯಗಳು ಅತಿ ಹೆಚ್ಚಾಗಿ ಬೆಂಗಳೂರು ವಿಮಾನ ನಿಲ್ದಾಣ, ರೈಲು ನಿಲ್ದಾಣ ಮತ್ತು ಬಸ್ ನಿಲ್ದಾಣದಲ್ಲಿ ನಡೆಯುತ್ತಿರುವುದು ನಿಜವೇ ; ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಂಡಿದೆ ;

(ಈ) ಇಂತಹ ದಂಧೆಗಳು ಅತಿ ಹೆಚ್ಚಾಗಿ ಬೆಂಗಳೂರು ನಗರದಲ್ಲಿ ಕಾಣಿಸಿಕೊಳ್ಳುತ್ತಿರುವುದನ್ನು ತಡೆಗಟ್ಟಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## NRI Ministry/Department ಸ್ಥಾಪಿಸುವ ಕುರಿತು

**ಡಾ. ಆರತಿ ಕೃಷ್ಣ (ನಾಮನಿರ್ದೇಶನ ಹೊಂದಿದವರು) :–**

೧೦೭೨ (೧೧೭೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿದೇಶದಲ್ಲಿರುವ ಕನ್ನಡಿಗರ ವ್ಯವಹಾರಗಳನ್ನು ಸಮಗ್ರವಾಗಿ ನಿರ್ವಹಿಸಲು ಪ್ರತ್ಯೇಕ NRI Ministry/Department ಮತ್ತು Secretariat ಸ್ಥಾಪಿಸುವ ಕುರಿತು ಪರಿಶೀಲಿಸಲು ದಿನಾಂಕ:೦೨.೦೭.೨೦೨೬ ರಂದು ಸಚಿವ ಸಂಪುಟ ಉಪಸಮಿತಿಯನ್ನು ರಚಿಸಲಾಗಿರುತ್ತದೆ ;

(ಆ) ಸದರಿ ಉಪಸಮಿತಿಯು ಈವರೆಗೆ ನಡೆಸಿದ ಸಭೆಗಳು, ಪರಿಶೀಲಿಸಿದ ವಿಷಯಗಳು ಹಾಗೂ ಸರ್ಕಾರಕ್ಕೆ ಸಲ್ಲಿಸಿದ ಶಿಫಾರಸ್ಸುಗಳೇನು ;

(ಇ) ಶಿಫಾರಸ್ಸು ಸಲ್ಲಿಸಿದ್ದರೆ, ಅದರ ಆಧಾರದ ಮೇಲೆ ಸರ್ಕಾರ ಕೈಗೊಂಡಿರುವ ಅಂತಿಮ ನಿರ್ಧಾರವೇನು; ಮತ್ತು ಪ್ರತ್ಯೇಕ NRI Ministry/Department ಅನ್ನು ಯಾವ ಕಾಲಮಿತಿಯಲ್ಲಿ ಸ್ಥಾಪಿಸಲಾಗುವುದು ? (ಪೂರ್ಣ ಮಾಹಿತಿಯನ್ನು ಒದಗಿಸುವುದು)

## ಜಾಹೀರಾತುಗಳಿಗಾಗಿ ಮಾಡಿರುವ ವೆಚ್ಚದ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ**
**(ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೩ (೧೨೦೭) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೪-೨೫, ೨೦೨೫-೨೬ ಮತ್ತು ೨೦೨೬-೨೭ನೇ ಸಾಲಿನಲ್ಲಿ ಜುಲೈ ೨೦೨೬ ಅಂತ್ಯದವರೆಗೆ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಜಾಹೀರಾತು ಮತ್ತು ಪ್ರಚಾರ ಸಂಬಂಧ ಮೀಸಲಿಟ್ಟ ಅನುದಾನವೆಷ್ಟು ಮತ್ತು ಖರ್ಚು ಮಾಡಿರುವ ಒಟ್ಟು ಅನುದಾನವೆಷ್ಟು ; (ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಮೂಲಕ ಮತ್ತು ಪ್ರತಿಯೊಂದು ಇಲಾಖೆಗಳು ಪ್ರತ್ಯೇಕವಾಗಿ ವಿನಿಯೋಗಿಸಿರುವ ಮೊತ್ತಗಳ ವಿವರ ಒದಗಿಸುವುದು)

(ಆ) ಸದರಿ ಆರ್ಥಿಕ ವರ್ಷಗಳಲ್ಲಿ ಜಾಹೀರಾತು ಮತ್ತು ಪ್ರಚಾರ ಕಾರ್ಯಕ್ರಮಗಳಿಗೆ ಕಾಯ್ದಿರಿಸಿರುವ ಮತ್ತು ಖರ್ಚು ಮಾಡಿರುವ ಅನುದಾನವೆಷ್ಟು ; ಸರ್ಕಾರದ ಜಾಹೀರಾತುಗಳನ್ನು ಪ್ರಕಟಿಸಲು ವಿದ್ಯುನ್ಮಾನ ಮತ್ತು ಪತ್ರಿಕಾ ಮಾಧ್ಯಮ ಸೇರಿದಂತೆ ಇಲಾಖಾವಾರು ನೀಡಿರುವ ಒಟ್ಟು ಅನುದಾನವೆಷ್ಟು ;

(ಇ) ಸರ್ಕಾರದ ಆಯುವ್ಯಯ ಘೋಷಣೆಯಂತೆ ಅನುದಾನ ಬಿಡುಗಡೆಯಾಗಿದೆಯೇ ; ೨೦೨೩ ೨೦೨೬ ಜುಲೈ ಅಂತ್ಯದವರೆಗೆ ಜಾಹೀರಾತುಗಳನ್ನು ಪ್ರಕಟಿಸಲು ವಿನಿಯೋಗಿಸಿರುವ ಅನುದಾನವೆಷ್ಟು ; ಜಾಹೀರಾತುಗಳನ್ನು ಪ್ರಕಟಿಸಲು ಯಾವ ಯಾವ ಪತ್ರಿಕೆಗಳಿಗೆ ಹಾಗೂ ಟೆಲಿವಿಷನ್ ಚಾನೆಲ್ ಗಳಿಗೆ ಎಷ್ಟು ಮೊತ್ತ ಪಾವತಿಸಲಾಗಿದೆ; ಹಣಪಾವತಿಯ ಕುರಿತು ಸಂಪೂರ್ಣ ಮಾಹಿತಿ ನೀಡುವುದು ; (ಪತ್ರಿಕಾವಾರು ಮತ್ತು ಟೆಲಿವಿಷನ್ ಚಾನೆಲ್‌ಗಳವಾರು ಮಾಹಿತಿ ನೀಡುವುದು)

(ಈ) ಜಾಹೀರಾತುಗಳನ್ನು ಪ್ರಕಟಿಸಲು ಅನುಸರಿಸುತ್ತಿರುವ ಕ್ರಮಗಳೇನು ಜಾಹೀರಾತುಗಳಿಗೆ ವೆಚ್ಚ ಮಾಡಿರುವ ಮೊತ್ತವನ್ನು ಯಾರಿಗೆ ಅಥವಾ ಯಾವ ಕಂಪನಿಗೆ ಅಥವಾ ಯಾವ ಸಂಸ್ಥೆಗೆ ಪಾವತಿಸಲಾಗಿದೆ ? (ಹಣ ಪಾವತಿ ಮಾಡಿರುವ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

## ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ನೌಕರರಿಗೆ ಪದೋನ್ನತಿ ನೀಡುವ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ**
**(ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೪ (೧೨೦೮) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನಗರಾಭಿವೃದ್ಧಿ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಲ್ಲಿ ೧೯೯೩ ರಿಂದ ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಲೆಕ್ಟ್ರಿಕ್‌ಲ್) ಹುದ್ದೆಯು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮಾನ್ಯ ಸಮಾಜ ಕಲ್ಯಾಣ ಇಲಾಖೆಯ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ : ೨೧-೦೧-೨೦೨೧ ರಲ್ಲಿ ನಡೆದ ಸಭೆಯ ನಡವಳಿಯಲ್ಲಿ ಜ್ಯೇಷ್ಠತೆಯಲ್ಲಿ ಹಿರಿಯರಾದವರಿಗೆ Superintendent Engineer ಮುಂಬಡ್ತಿಯಾಗಬೇಕಿದ್ದು ಎಲ್ಲಾ ಅರ್ಹತೆ, ಜ್ಯೇಷ್ಠತೆ ಇದ್ದರೂ ಸಹ ಬಡ್ತಿ ನೀಡದೆ ಅನ್ಯಾಯವೆಸಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು ;

(ಇ) ಸರ್ಕಾರದ ಪತ್ರ ಸಂಖ್ಯೆ: ಸಕನಿ:ಮೀಜಾಕೋ-೨:ಸಿ.ಆರ್ ೨೦೨೪-೨೫ ದಿನಾಂಕ:೦೬-೧೦-೨೦೨೪ರಲ್ಲಿ ಆಯುಕ್ತರು ಸಮಾಜ ಕಲ್ಯಾಣ ಇಲಾಖೆ ಹಾಗೂ ಮೀಸಲಾತಿ ಜಾರಿಕೋಶ ರವರು ಅಧೀಕ್ಷಕ ಅಭಿಯಂತರರ ಹುದ್ದೆಗೆ ಪದೋನ್ನತಿಯನ್ನು ನೀಡಲು ಪರಿಶೀಲಿಸಿ ಯಾವುದೇ ಕಾರಣಕ್ಕೂ ಬ್ಯಾಕ್‌ಲಾಗ್ ಹುದ್ದೆಯನ್ನು ರದ್ದುಮಾಡಲು ನಿಯಮಾವಳಿಗಳ ಪ್ರಕಾರ ಅವಕಾಶವಿರುವುದಿಲ್ಲವೆಂದು ಸ್ಪಷ್ಟೀಕರಣವನ್ನು ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರಿಗೆ ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ;

(ಈ) ಮಾನ್ಯ ಸಚಿವರು, ಸಮಾಜ ಕಲ್ಯಾಣ ಇಲಾಖೆಯವರ ಅನಧಿಕೃತ ಟಿಪ್ಪಣಿ ಸಂಖ್ಯೆ ರಲ್ಲಿ ಜ್ಯೇಷ್ಠತೆಯಲ್ಲಿ : SWD/೨೯೭/SLP/ ೨೦೨೪ ದಿನಾಂಕ: ೧೧-೦೪-೨೦೨೫ರಲ್ಲಿ ಜೇಷ್ಠಯಲ್ಲಿ ಹಿರಿಯರಾದವರಿಗೆ ಮುಂಬಡ್ತಿ ನೀಡಿ ದಿನಾಂಕ : ೩೧-೧೧-೨೦೨೨ ರಂದು ಅಧೀಕ್ಷಕ ಅಭಿಯಂತರ ಹುದ್ದೆಗೆ ಮುಂಬಡ್ತಿ ನೀಡಿ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆದೇಶವಿದ್ದರೂ ಕೂಡ ಇಲ್ಲಿಯವರೆಗೆ ಪದೋನ್ನತಿಯನ್ನು ನೀಡದೆ, ಸಿಗಬೇಕಾದ ಸೌಲಭ್ಯಗಳಿಂದ ವಂಚಿತರನ್ನಾಗಿ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆಯೇ ;

(ಉ) ಸರ್ಕಾರದ ಸ್ಪಷ್ಟ ಆದೇಶವಿದ್ದರೂ ಕೂಡ ಇಲ್ಲಿಯವರೆಗೂ ಅನುಷ್ಠಾನಗೊಳಿಸದೆ ಇರುವ ಅಧಿಕಾರಿಗಳ ಮೇಲೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು; ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಧಿಕಾರಿಗಳಿಗೆ ಆಗಿರುವ ಅನ್ಯಾಯವನ್ನು ಯಾವ ಕಾಲಮಿತಿಯೊಳಗೆ ಸರಿಪಡಿಸಲಾಗುವುದು ?

## ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ರಾಜ್ಯ ಸಚಿವರ ದರ್ಜೆಯ ಸ್ಥಾನಮಾನಗಳ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ**
**(ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೫ (೧೨೦೯) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೩ ರಿಂದ ೨೦೨೬ರ ಜುಲೈ ಅಂತ್ಯದವರೆಗೆ ರಾಜ್ಯ ಸರ್ಕಾರದಲ್ಲಿ ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ರಾಜ್ಯ ಸಚಿವ ದರ್ಜೆಯ ಸ್ಥಾನಮಾನವನ್ನು ಯಾವ ಯಾವ ಹುದ್ದೆಗಳಿಗೆ ನೀಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ರಾಜ್ಯ ಸಚಿವ ದರ್ಜೆಯ ಸ್ಥಾನಮಾನಗಳಿಗೆ ಸರ್ಕಾರವು ನಿಗಧಿಪಡಿಸಿರುವ ವೇತನ, ಮನೆಬಾಡಿಗೆ, ಇಂಧನ ಭತ್ಯೆ, ಪ್ರಯಾಣ ಭತ್ಯೆ ಸೇರಿದಂತೆ ಇನ್ನಿತರ ಎಲ್ಲಾ ರೀತಿಯ ಭತ್ಯೆಗಳ ಮೊತ್ತವೆಷ್ಟು ; ಅವರ ಆಪ್ತ ಸಿಬ್ಬಂದಿ ಶಾಖೆಗಳಿಗೆ ಒದಗಿಸಿದ ಹುದ್ದೆಗಳ ಸಂಖ್ಯೆ ಮತ್ತು ಪಾವತಿಸುತ್ತಿರುವ ವೇತನಗಳ ವಿವರಗಳೇನು ; ( ಸಂಪೂರ್ಣ ವಿವರ ನೀಡುವುದು)

(ಇ) ಸಚಿವ ಸಂಪುಟ ದರ್ಜೆಯ ಸ್ಥಾನಮಾನ ಮತ್ತು ರಾಜ್ಯ ಸಚಿವ ದರ್ಜೆಯ ಸ್ಥಾನಮಾನವನ್ನು ನೀಡಲು ಸರ್ಕಾರ ರೂಪಿಸಿರುವ ನಿಯಮಗಳೇನು ; ನಿರ್ಧರಿಸುವ ಅಧಿಕಾರ ಯಾರಿಗೆ ಕಲ್ಪಿಸಲಾಗಿದೆ ?

# ರಾಜ್ಯ ಸರ್ಕಾರವು ವಿಮಾನ/ಹೆಲಿಕ್ಯಾಪ್ಟರ್ ಪ್ರಯಾಣಕ್ಕೆ ಮಾಡಿರುವ ವೆಚ್ಚದ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ**
**(ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೬ (೧೨೧೦) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರವು ವಿಮಾನ/ಹೆಲಿಕ್ಯಾಪ್ಟರ್ ಹೊಂದಿದೆಯೇ ; (ಮಾಹಿತಿ ನೀಡುವುದು)

(ಆ) ೨೦೨೪–೨೫, ೨೦೨೫–೨೬ ಮತ್ತು ೨೦೨೬–೨೭ನೇ ಸಾಲಿನ (ಜುಲೈ ೨೦೨೬ ಅಂತ್ಯದವರೆಗೆ) ಅವಧಿಯಲ್ಲಿ ಯಾವ ಉದ್ದೇಶಕ್ಕೆ ಸರ್ಕಾರವು ಬಾಡಿಗೆ ಆಧಾರದ ಮೇಲೆ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳನ್ನು ಖಾಸಗಿ ಸಂಸ್ಥೆ/ವ್ಯಕ್ತಿಗಳಿಂದ ಪಡೆದುಕೊಂಡಿದೆಯೇ ; (ಸಂಪೂರ್ಣ ಮಾಹಿತಿ ಒದಗಿಸುವುದು) ಈ ಅವಧಿಯಲ್ಲಿ ಬಾಡಿಗೆ ಪಡೆದುಕೊಂಡ ವಿಮಾನ ಮತ್ತು ಹೆಲಿಕ್ಯಾಪ್ಟರ್‌ಗಳನ್ನು ಮುಖ್ಯಮಂತ್ರಿಯವರು, ಸರ್ಕಾರದ ಮಾನ್ಯ ಉಪ ಮುಖ್ಯಮಂತ್ರಿಯವರು/ಸಚಿವರು/ಮುಖ್ಯ ಕಾರ್ಯದರ್ಶಿ ಸೇರಿದಂತೆ ಸರ್ಕಾರದ ಕಾರ್ಯಕ್ರಮಗಳ ಪ್ರಯಾಣಕ್ಕೆ ಉಪಯೋಗಿಸಿಕೊಂಡಿದ್ದಾರೆಯೇ ; (ಪ್ರವಾಸದ ವಿವರ, ಒಟ್ಟು ಮೊತ್ತ ಮತ್ತು ಕಾರ್ಯಕ್ರಮಗಳ ವಿವರಗಳ ಸಂಪೂರ್ಣ ಮಾಹಿತಿ ನೀಡುವುದು)

(ಇ) ೨೦೨೪–೨೫, ೨೦೨೫–೨೬ ಮತ್ತು ೨೦೨೬–೨೭ ನೇ ಸಾಲಿನ (ಜುಲೈ ೨೦೨೬ ಅಂತ್ಯದವರೆಗೆ) ಅವಧಿಯಲ್ಲಿ ಸರ್ಕಾರವು ಕಾರ್ಯಕ್ರಮಗಳಿಗೆ ಈ ವಿಮಾನ ಮತ್ತು ಹೆಲಿಕಾಪ್ಟರ್ ಗಳನ್ನು ಬಳಕೆ ಮಾಡಿಕೊಂಡಿದ್ದರೆ ಪ್ರತಿ ಕಾರ್ಯಕ್ರಮದ ಪ್ರವಾಸ ಪಟ್ಟಿ,

ಇದಕ್ಕಾಗಿ ವಿಮಾನಕ್ಕೆ ಹೆಲಿಕ್ಯಾಪ್ಟರ್‌ಗೆ ಪ್ರತಿ ಕಾರ್ಯಕ್ರಮಕ್ಕೆ ಸರ್ಕಾರದಿಂದ ಪಾವತಿ ಮಾಡಿರುವ ಬಾಡಿಗೆ ಮೊತ್ತದ ಸಂಪೂರ್ಣ ಮಾಹಿತಿ ಹಾಗೂ ಬಾಡಿಗೆ ಮೊತ್ತವನ್ನು ಯಾರಿಗೆ, ಯಾವ ಸಂಸ್ಥೆಗೆ ಅಥವಾ ಯಾವ ಕಂಪನಿಗೆ ಎಷ್ಟು ಮೊತ್ತವನ್ನು ಪಾವತಿಸಲಾಗಿದೆ ? (ಮೊತ್ತವನ್ನು ಪಾವತಿಸಿದ ದಿನಾಂಕದ ವಿವರವನ್ನು ಒದಗಿಸುವುದು)

## ಗ್ಯಾರಂಟಿ ಅನುಷ್ಠಾನ ಸಮಿತಿಗಳನ್ನು ರಚಿಸಿರುವ ಕುರಿತು

**ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ**
**(ವಿಧಾನಸಭೆಯಿಂದ ಚುನಾಯಿತರಾದವರು) :–**

೧೦೭೭ (೧೨೦೬) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ಯಾರಂಟಿ ಅನುಷ್ಠಾನ ಸಮಿತಿಗಳಲ್ಲಿರುವ ಪದಾಧಿಕಾರಿಗಳ ಹುದ್ದೆಗಳು ಯಾವುವು ; ರಾಜ್ಯ, ವಲಯವಾರು, ಜಿಲ್ಲಾ, ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ಎಷ್ಟು ಹುದ್ದೆಗಳನ್ನು ಸೃಜಿಸಲಾಗಿದೆ ; ಯಾವ ಹುದ್ದೆಗಳಿಗೆ ಎಷ್ಟು ಗೌರವಧನ /ವೇತನವನ್ನು ನಿಗಧಿ ಪಡಿಸಲಾಗಿದೆ ; (ಸಂಪೂರ್ಣ ಮಾಹಿತಿಯನ್ನು ನೀಡುವುದು)

(ಆ) ಗ್ಯಾರಂಟಿ ಅನುಷ್ಠಾನ ಸಮಿತಿಗಳನ್ನು ರಚಿಸಲು ರಾಜ್ಯ ಸರ್ಕಾರ ಅನುಸರಿಸಿದ ಕ್ರಮಗಳೇನು ; ಯಾವ ಯಾವ ಆದೇಶಗಳನ್ನು ಹೊರಡಿಸಲಾಗಿದೆ ; (ಆದೇಶಗಳ ಪ್ರತಿ ನೀಡುವುದು)

(ಇ) ಸದರಿ ಸಮಿತಿಗಳ ಯಾವ ಹುದ್ದೆಗಳಿಗೆ ಸಚಿವ ಸಂಪುಟ ದರ್ಜೆ ಹಾಗೂ ರಾಜ್ಯ ಸಚಿವ ದರ್ಜೆ ಸ್ಥಾನಮಾನವನ್ನು ನೀಡಲಾಗಿದೆ ; ನೀಡಿದ್ದಲ್ಲಿ, ಪ್ರತಿಯೊಂದು ಹುದ್ದೆಗಳಿಗನುಸಾರ ಸರ್ಕಾರದಿಂದ ಅವರಿಗೆ ಪಾವತಿಸುವ ಗೌರವಧನ/ ವೇತನ, ಇಂಧನ ಭತ್ಯೆ,

ಪ್ರಯಾಣ ಭತ್ಯೆ ಸೇರಿದಂತೆ ಎಲ್ಲಾ ರೀತಿಯ ಭತ್ಯೆಗಳ ವಿವರ ಒದಗಿಸುವುದು ಹಾಗೂ ಸದರಿಯವರ ಆಪ್ತ ಶಾಖೆಗೆ ಒದಗಿಸಿರುವ ಹುದ್ದೆಗಳ ಸಂಖ್ಯೆ ಮತ್ತು ಹುದ್ದೆಗಳಿಗೆ ನಿಗಧಿಪಡಿಸಿದ ವೇತನವೆಷ್ಟು; ಒಟ್ಟಾರೆಯಾಗಿ ರಾಜ್ಯ ಸರ್ಕಾರವು ವಾರ್ಷಿಕವಾಗಿ ಗ್ಯಾರಂಟಿ ಅನುಷ್ಠಾನ ಸಮಿತಿಗಳಿಗೆ ವೆಚ್ಚ ಮಾಡುವ ಮೊತ್ತವೆಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಗ್ಯಾರಂಟಿ ಅನುಷ್ಠಾನ ಸಮಿತಿಗಳ ಕಾರ್ಯಗಳೇನು; ಯಾವ ಉದ್ದೇಶಕ್ಕಾಗಿ ಸಮಿತಿಗಳನ್ನು ರಚಿಸಲಾಗಿದೆ ; ಉದ್ದೇಶ ಈಡೇರಿದೆಯೇ ; ಸಮಿತಿಯ ಹುದ್ದೆಗಳಿಗೆ ನೇಮಕ ಮಾಡಲು ಸರ್ಕಾರ ರೂಪಿಸಿರುವ ನಿಯಮಗಳೇನು; ನೇಮಕಾತಿ ಮಾಡುವ ಅಧಿಕಾರ ಯಾರಿಗಿದೆ ; ಗ್ಯಾರಂಟಿ ಯೋಜನೆಗಳಲ್ಲಿ ಬೆಳಕಿಗೆ ಬಂದ ಅಕ್ರಮಗಳು ಯಾವುವು ; ಅನುಷ್ಠಾನ ಸಮಿತಿಗಳಿದ್ದರೂ ಕೂಡ ಗ್ಯಾರಂಟಿ ಯೋಜನೆಗಳಲ್ಲಿ ಅಕ್ರಮಗಳು ಜರುಗಲು ಕಾರಣಗಳೇನು ; ಸಮಿತಿಗಳು ಅಕ್ರಮಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

## ಶಾಸಕರ ಅನುದಾನದಿಂದ ಕೈಗೊಳ್ಳುವ ಕಾಮಗಾರಿಗಳ ಗುಣಮಟ್ಟ ಹಾಗೂ ತೃತೀಯ ಪಕ್ಷದ ಪರಿಶೀಲನೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೭೮ (೧೦೮೨) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ/ಶಾಸಕರ ಅನುದಾನದಿಂದ ಕೈಗೊಳ್ಳುವ ಯಾವೆಲ್ಲಾ ಕಾಮಗಾರಿಗಳಿಗೆ

ತೃತೀಯ ಪಕ್ಷದ ಗುಣಮಟ್ಟ ಪರಿಶೀಲನೆ ಕಡ್ಡಾಯವಾಗಿದೆ ; ಇದ್ದಲ್ಲಿ, ಪರಿಶೀಲನೆ ನಡೆಸುವ ಸಂಸ್ಥೆ/ತಾಂತ್ರಿಕ ಏಜೆನ್ಸಿ ಯಾವುದು ; ಮತ್ತು ಅದರ ವೆಚ್ಚವನ್ನು ಯಾವ ಅನುದಾನದಿಂದ ಭರಿಸಲಾಗುತ್ತದೆ ;

(ಆ) ತೃತೀಯ ಪಕ್ಷದ ಗುಣಮಟ್ಟ ಪರಿಶೀಲನೆಗೆ ಸಂಬಂಧಿಸಿದಂತೆ ಸರ್ಕಾರ ನಿಗದಿಪಡಿಸಿರುವ ತಾಂತ್ರಿಕ ಮಾನದಂಡಗಳು, ಪರೀಕ್ಷಾ ವಿಧಾನ, ಪರಿಶೀಲನೆಯ ಹಂತಗಳು, ವರದಿ ಸಲ್ಲಿಕೆ, ದೋಷ ಕಂಡುಬಂದಲ್ಲಿ ಕೈಗೊಳ್ಳಬೇಕಾದ ಕ್ರಮ ಹಾಗೂ ಅಧಿಕಾರಿಗಳ ಜವಾಬ್ದಾರಿ ಕುರಿತು ಏಕರೂಪದ ಮಾರ್ಗಸೂಚಿ SOP ಜಾರಿಯಲ್ಲಿದೆಯೇ ;

(ಇ) ಶಾಸಕರ ಅನುದಾನದಿಂದ ಶಿಫಾರಸ್ಸು ಮಾಡಿದ ಕಾಮಗಾರಿಗಳನ್ನು ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆಯನ್ನು ನೀಡಿ ಎಷ್ಟು ಅವಧಿಯೊಳಗೆ ಪೂರ್ಣಗೊಳಿಸಬೇಕು ; ವಿಳಂಬವಾದ ಕಾಮಗಾರಿಗಳ ಸಂಖ್ಯೆ ಮತ್ತು ಕಾರಣಗಳ ಜಿಲ್ಲಾವಾರು ವಿವರವೇನು; ಅವುಗಳನ್ನು ಮುಂದಿನ ಅವಧಿಯಲ್ಲಿ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಕಾಮಗಾರಿಗಳಲ್ಲಿ ಸ್ಥಳದ ಸ್ವಾಭಾವಿಕ ಇಳಿಜಾರು, ಮಣ್ಣು, ಮಳೆನೀರು ಹರಿವು, ಭೌಗೋಳಿಕ ಪರಿಸ್ಥಿತಿ ಹಾಗೂ ಸ್ಥಳೀಯ ಅಗತ್ಯಗಳನ್ನು ಪರಿಗಣಿಸದೆ ಕಾಂಕ್ರೀಟ್ ಕಾಮಗಾರಿ ನಡೆಸಿ, ಸಾರ್ವಜನಿಕ ಹಣ ವ್ಯಯವಾದರೂ ಕಾಮಗಾರಿ ಸಾರ್ವಜನಿಕರಿಗೆ ಅನುಪಯುಕ್ತವಾಗಿರುವ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆಯೇ ;

(ಉ) ಇಂತಹ ಕಾಮಗಾರಿಗಳಲ್ಲಿ ಗುಣಮಟ್ಟದ ಬಗ್ಗೆ ಕಾಮಗಾರಿಕ್ಕಿಂತ ಮೊದಲು, ಕಾಮಗಾರಿ ಮಾಡುವಾಗ ಮತ್ತು ಅಂತಿಮ ಹಂತಗಳಲ್ಲಿ ಪರಿಶೀಲನೆ, ತೃತೀಯ ಪಕ್ಷದ ಪ್ರಮಾಣೀಕರಣ, ದೋಷಪೂರಿತ ಕಾಮಗಾರಿಗಳ ಸರಿಪಡಿಸುವಿಕೆ ಕಡ್ಡಾಯಗೊಳಿಸಿ, ರಾಜ್ಯಾದ್ಯಂತ ಕಾಲಮಿತಿಯು SOP ಜಾರಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಮಂಗಳೂರು ನಗರದಲ್ಲಿ ವಾಹನ ದಟ್ಟಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೦೭೯ (೧೦೮೩) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದ ನಗರ ಪ್ರದೇಶಗಳಲ್ಲಿ, ವಿಶೇಷವಾಗಿ ಮಂಗಳೂರು ನಗರದಲ್ಲಿ, ವಾಹನ ನಿಲುಗಡೆಗೆ ಅಗತ್ಯವಾದ ಸಾರ್ವಜನಿಕ ಪಾರ್ಕಿಂಗ್ ಸ್ಥಳಗಳ ಲಭ್ಯತೆ, ಬೇಡಿಕೆ, ರಸ್ತೆ ಸಾಮರ್ಥ್ಯ ಹಾಗೂ ವಾಣಿಜ್ಯ ಪ್ರದೇಶಗಳ ವಾಹನ ಒತ್ತಡ ಕುರಿತು ಪೊಲೀಸ್ ಇಲಾಖೆಯು ನಗರ ಸ್ಥಳೀಯ ಸಂಸ್ಥೆ, ಸಾರಿಗೆ ಇಲಾಖೆ, ನಗರಾಭಿವೃದ್ಧಿ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಗಳ ಸಹಯೋಗದಲ್ಲಿ ಯಾವುದೇ ಅಧ್ಯಯನ ನಡೆಸಲಾಗಿದೆಯೇ ;

(ಆ) ಮಂಗಳೂರು ನಗರದಲ್ಲಿ ಸಂಚಾರ ದಟ್ಟಣೆ ಕಡಿಮೆ ಮಾಡುವ ನಿಟ್ಟಿನಲ್ಲಿ ವೃತ್ತಗಳಲ್ಲಿ ಪರಿಣಾಮಕಾರಿ ಫ್ರೀ ಲೆಫ್ಟ್ ಸಂಚಾರಕ್ಕೆ ಕ್ರಮವಹಿಸಲಾಗಿದೆಯೇ ; ಮಾಡಿದ್ದರೆ, ಎಲ್ಲೆಲ್ಲಿ ಮಾಡಲಾಗಿದೆ ;

(ಇ) ಸೂಕ್ತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸದೆ “No Parking" ಫಲಕ ಮಾತ್ರ ಅಳವಡಿಸಿ ದಂಡ ವಿಧಿಸುವ ಕ್ರಮಕ್ಕೆ ಮಾತ್ರ ಆದ್ಯತೆ

ನೀಡುತ್ತಿರುವುದರಿಂದ ಸಾರ್ವಜನಿಕರು ಅನಿವಾರ್ಯವಾಗಿ ರಸ್ತೆ ಬದಿಯಲ್ಲಿ ವಾಹನ ನಿಲ್ಲಿಸಿ ದಂಡಕ್ಕೆ ಒಳಗಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇಂತಹ ಪ್ರದೇಶಗಳನ್ನು ಗುರುತಿಸಿ ಪರ್ಯಾಯ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದೆಯೇ ;

(ಈ) ಮಂಗಳೂರು ನಗರದಲ್ಲಿ ಪೊಲೀಸ್ ಇಲಾಖೆ, ಮಹಾನಗರ ಪಾಲಿಕೆ, ಸಾರಿಗೆ, ಮೂಡಾ ಹಾಗೂ ಸಂಬಂಧಿತ ಇಲಾಖೆಗಳ ಸಮನ್ವಯದ ಮೂಲಕ ಪಾರ್ಕಿಂಗ್ ಸ್ಥಳ ಗುರುತಿಸುವಿಕೆ, ರಸ್ತೆ ವಿನ್ಯಾಸ, ಏಕಮುಖ ಸಂಚಾರ, ವಾಣಿಜ್ಯ ಪ್ರದೇಶಗಳ ಪಾರ್ಕಿಂಗ್ ಹಾಗೂ No-Parking ವಲಯಗಳ ವೈಜ್ಞಾನಿಕ ನಿರ್ಧಾರ ಕುರಿತು ನಿಯಮಿತ ಸಭೆಗಳು ನಡೆಯುತ್ತಿವೆಯೇ ;

(ಉ) ಕೇವಲ ವಾಹನ ಚಾಲಕರಿಗೆ ದಂಡ ವಿಧಿಸುವ ಬದಲು "Parking Demand-Supply Assessment", GIS ಆಧಾರಿತ ಪಾರ್ಕಿಂಗ್ ನಕ್ಷೆ, ಬಹುಮಹಡಿ/ಆಫ್–ಸ್ಟ್ರೀಟ್ ಪಾರ್ಕಿಂಗ್ ಹಾಗೂ ಪ್ರದೇಶವಾರು ಪಾರ್ಕಿಂಗ್ ಯೋಜನೆ ರೂಪಿಸಿ, ಸಾರ್ವಜನಿಕರಿಗೆ ಅಗತ್ಯ ಪಾರ್ಕಿಂಗ್ ಸೌಲಭ್ಯ ಕಲ್ಪಿಸಿದ ನಂತರವೇ ದಂಡಾತ್ಮಕ ಕ್ರಮ ಜಾರಿಗೊಳಿಸಲು ರಾಜ್ಯಾದ್ಯಂತ ಏಕರೂಪದ SOP ರೂಪಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ?

## ನಗರ ಸೌಂದರ್ಯೀಕರಣ ಹಾಗೂ ಸಾರ್ವಜನಿಕ ತೆರೆದ (Open Places) ಸ್ಥಳಗಳ ಸಂರಕ್ಷಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೦ (೧೦೮೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕದ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಪಾರ್ಕ್, ಆಟದ ಮೈದಾನ, ಕೆರೆ, ಜಲಮೂಲ, ಹಸಿರು ಪ್ರದೇಶ ಹಾಗೂ ಸಾರ್ವಜನಿಕ ಮುಕ್ತ ಸ್ಥಳಗಳನ್ನು ನಗರೀಕರಣದ ಒತ್ತಡದಿಂದ ಸಂರಕ್ಷಿಸಲು ನಗರಾಭಿವೃದ್ಧಿ ಇಲಾಖೆ ಯಾವುದೇ ಸಮಗ್ರ ನೀತಿ ರೂಪಿಸಿದೆಯೇ ; ನಗರವಾರು ಲಭ್ಯವಿರುವ ಹಾಗೂ ಒತ್ತುವರಿಯಾಗಿರುವ ಮುಕ್ತ ಸ್ಥಳಗಳ ವಿವರವನ್ನು ಒದಗಿಸುವುದು ;

(ಆ) ಮಂಗಳೂರು ನಗರ ಸೌಂದರ್ಯೀಕರಣದ ಹೆಸರಿನಲ್ಲಿ ಫುಟ್‌ಪಾತ್, ರಸ್ತೆಬದಿ, ವೃತ್ತ, ಉದ್ಯಾನ ಹಾಗೂ ಇತರೆ ಸಾರ್ವಜನಿಕ ಸ್ಥಳಗಳಲ್ಲಿ ಕೈಗೊಳ್ಳುವ ಕಾಮಗಾರಿಗಳಿಗೆ ಏಕರೂಪದ ವಿನ್ಯಾಸ, ಗುಣಮಟ್ಟದ ಮಾನದಂಡ, ನಿರ್ವಹಣಾ ವ್ಯವಸ್ಥೆ ಹಾಗೂ ಪರಿಸರ ಸ್ನೇಹಿ ಮಾರ್ಗಸೂಚಿ ಇದೆಯೇ ; ಕಾಮಗಾರಿ ಪೂರ್ಣಗೊಂಡ ನಂತರ ಅದರ ನಿರ್ವಹಣೆಯ ಜವಾಬ್ದಾರಿ ಯಾವ ವಿಭಾಗದ್ದಾಗಿದೆ ;

(ಇ) ಮಂಗಳೂರು ನಗರದಲ್ಲಿ, ಸ್ಮಾರ್ಟ್ ಸಿಟಿ, ಮಹಾನಗರ ಪಾಲಿಕೆ, MUDA ಹಾಗೂ ಇತರೆ ಇಲಾಖೆಗಳ ಮೂಲಕ ಅಭಿವೃದ್ಧಿಪಡಿಸಿರುವ ಪಾರ್ಕ್, ಸಾರ್ವಜನಿಕ ಮುಕ್ತ ಸ್ಥಳ, ಫುಟ್‌ಪಾತ್, ರಸ್ತೆ ಬದಿ ಹಸಿರು ಪ್ರದೇಶ ಮತ್ತು ನಗರ ಸೌಂದರ್ಯೀಕರಣ ಕಾಮಗಾರಿಗಳ ಸಮಗ್ರ ಪಟ್ಟಿ, ವೆಚ್ಚ, ಪ್ರಸ್ತುತ ಸ್ಥಿತಿ ಹಾಗೂ ನಿರ್ವಹಣಾ ಸಂಸ್ಥೆಯ ವಿವರವನ್ನು ಸರ್ಕಾರ ಹೊಂದಿದೆಯೇ ;

(ಈ) ಭವಿಷ್ಯದ ಜನಸಂಖ್ಯೆ, ವಾಹನ ದಟ್ಟಣೆ, ಹವಾಮಾನ ಬದಲಾವಣೆ ಹಾಗೂ ಮಳೆ ನೀರು ನಿರ್ವಹಣೆಯನ್ನು ಪರಿಗಣಿಸಿ ಪ್ರತಿಯೊಂದು ನಗರಕ್ಕೂ GIS ಆಧಾರಿತ, ತೆರೆದ ಪ್ರದೇಶ, ಕನಿಷ್ಠ ಹಸಿರು/

ಮುಕ್ತ ಪ್ರದೇಶದ ಮಾನದಂಡ ಹಾಗೂ ದೀರ್ಘಕಾಲೀನ Urban Beautification & Open Space Management Plan ರೂಪಿಸಿ, ಇಲಾಖೆಗಳ ನಡುವೆ ಸಮನ್ವಯದೊಂದಿಗೆ ಜಾರಿಗೊಳಿಸಲು ಸರ್ಕಾರ ಕಾಲಮಿತಿಯ ಕ್ರಮ ಕೈಗೊಳ್ಳುವುದೇ ?

## ನೇಮಕಾತಿ, ಕಾಮಗಾರಿ ಹಾಗೂ ಅಭಿವೃದ್ಧಿ ಯೋಜನೆಗಳಿಗೆ ಆರ್ಥಿಕ ಇಲಾಖೆಯ ಅನುಮೋದನೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೧ (೧೦೮೫) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿವಿಧ ಇಲಾಖೆಗಳ ನೇಮಕಾತಿ, ಹೊಸ ಹುದ್ದೆಗಳ ಸೃಷ್ಟಿ, ಕಾಮಗಾರಿ, ಅಭಿವೃದ್ಧಿ ಯೋಜನೆ, ವೇತನ ಭತ್ಯೆ ಹಾಗೂ ಇತರೆ ನಿರಂತರ ಆರ್ಥಿಕ ಹೊಣೆಗಾರಿಕೆ ಉಂಟು ಮಾಡುವ ನಿರ್ಧಾರಗಳನ್ನು ಕೈಗೊಳ್ಳುವ ಮೊದಲು ಆರ್ಥಿಕ ಇಲಾಖೆಯ ಪೂರ್ವಾನುಮೋದನೆ ಪಡೆಯುವುದು ಕಡ್ಡಾಯವೇ ; ಅನ್ವಯಿಸುವ ಅನುಮೋದನಾ ಪ್ರಕ್ರಿಯೆ ಮತ್ತು ಮಾನದಂಡಗಳು ಯಾವುವು ;

(ಆ) ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳು ಹಾಗೂ ಇತರೆ ಸ್ವಾಯತ್ತ/ವಿಭಾಗೀಯ ಸಂಸ್ಥೆಗಳು ತಮ್ಮದೇ ನಿಯಮಗಳಡಿ ನೇಮಕಾತಿ ಅಥವಾ ಆರ್ಥಿಕ ಹೊಣೆಗಾರಿಕೆ ಉಂಟು ಮಾಡುವ ನಿರ್ಧಾರಗಳನ್ನು ಆರ್ಥಿಕ ಇಲಾಖೆಯ ಅನುಮೋದನೆಯಿಲ್ಲದೆ ಕೈಗೊಂಡಿರುವ ಪ್ರಕರಣಗಳಾವುವು ;

(ಇ) ಶಿವಮೊಗ್ಗದ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಶ್ವವಿದ್ಯಾಲಯಕ್ಕೆ ೨೦೧೪ರಲ್ಲಿ ೬೧ ಹುದ್ದೆಗಳಿಗೆ ಆರ್ಥಿಕ

ಇಲಾಖೆಯಿಂದ ಅನುಮೋದನೆಯಿದ್ದರೂ ೧೦೪ ಹುದ್ದೆ ಭರ್ತಿ ಮಾಡಿದ್ದು ೨೦೨೩ರಿಂದ ಹೆಚ್ಚುವರಿ ಹುದ್ದೆಗಳಿಗೆ ವೇತನವನ್ನು ಯಾವ ನಿಯಮಗಳಡಿ ಪಾವತಿಸಲು ಕ್ರಮವಹಿಸಲಾಗಿದೆ ;

(ಈ) ಆರ್ಥಿಕ ಇಲಾಖೆಯಿಂದ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿ ಸಿಬ್ಬಂದಿಗಳನ್ನು ನೇಮಕ ಮಾಡಿದಲ್ಲಿ, ವೇತನ ಹಾಗೂ ಇತರೆ ವೆಚ್ಚಗಳನ್ನು ಬಿಡುಗಡೆಗೊಳಿಸುವಾಗ ಇಲಾಖೆ ಯಾವ ನಿಯಮ, ಮಂಜೂರಾತಿ ಮಾನದಂಡಗಳನ್ನು ಅನುಸರಿಸುತ್ತದೆ ; ಅನುಮೋದನೆ ಮೀರಿದ ನೇಮಕಾತಿ ಮಾಡಿದ, ಹಣ ಬಿಡುಗಡೆ ಮಾಡಿದ ಅಧಿಕಾರಿಗಳ ಜವಾಬ್ದಾರಿ ನಿಗದಿಪಡಿಸುವ ವ್ಯವಸ್ಥೆ ಇದೆಯೇ ;

(ಉ) ಕಾರ್ಮಿಕ ಇಲಾಖೆಯ ಇತ್ತೀಚಿನ ಸುತ್ತೋಲೆಯಂತೆ ಕನಿಷ್ಠ ವೇತನ ಹೆಚ್ಚುವರಿ ಆರ್ಥಿಕ ಹೊರೆ ಉಂಟಾಗುವ ಸಂದರ್ಭದಲ್ಲಿ, ಅದಕ್ಕೆ ಆರ್ಥಿಕ ಇಲಾಖೆಯ ಅನುಮೋದನೆ ಪಡೆಯಲಾಗಿದೆಯೇ; ಇಂತಹ ಹೆಚ್ಚುವರಿ ಹೊರೆಗಳಿಗೆ ಹಣ ಬಿಡುಗಡೆ/ನಿರಾಕರಣೆಗೆ ಸಂದರ್ಭಕ್ಕೆ ತಕ್ಕಂತೆ ವ್ಯವಹರಿಸುವ ಬದಲು ಏಕರೂಪದ SOP ಮತ್ತು ಕಾಲಮಿತಿಯ ವ್ಯವಸ್ಥೆ ರೂಪಿಸುವುದೇ ?

## ಕಲಬುರಗಿ ಉತ್ತರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಸಂಗ್ರಹವಾದ ತೆರಿಗೆ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೨ (೧೧೪೪) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉತ್ತರ ಮತಕ್ಷೇತ್ರ ಹಾಗೂ ಕಲಬುರಗಿ ದಕ್ಷಿಣ ಮತಕ್ಷೇತ್ರದಲ್ಲಿ ಕಳೆದ ೩

ವರ್ಷಗಳಲ್ಲಿ ಸಂದಾಯವಾದ ಆಸ್ತಿ ತೆರಿಗೆ ಎಷ್ಟು; ಹಾಗೂ ಮಹಾನಗರ ಪಾಲಿಕೆಯ ೫೫ ವಾರ್ಡ್‌ಗಳಲ್ಲಿ ಸಂಗ್ರಹವಾದ ತೆರಿಗೆಯನ್ನು ವಾರ್ಡ್‌ವಾರು ವಿವರ ನೀಡುವುದು ; ಬಾಕಿ ಇರುವ ತೆರಿಗೆ ಮೊತ್ತದ ವಿವರ ಒದಗಿಸುವುದು ;

(ಆ) ಕಲಬುರಗಿ ಮಹಾನಗರ ಪಾಲಿಕೆಯಿಂದ ಕಳೆದ ೨ ವರ್ಷಗಳಲ್ಲಿ ಕಲಬುರಗಿ ಉತ್ತರ ಮತ್ತು ಕಲಬುರಗಿ ದಕ್ಷಿಣ ಮತಕ್ಷೇತ್ರದ ಅಭಿವೃದ್ಧಿಗೆಂದು ಖರ್ಚು ಮಾಡಲಾದ ಅನುದಾನವೆಷ್ಟು ; (ವಿವರ ನೀಡುವುದು)

(ಇ) ಈಗಿರುವ ವಲಯ ತೆಗೆದು ಕಲಬುರಗಿ ಉತ್ತರ ಕ್ಷೇತ್ರಕ್ಕೆ ೨ ಹಾಗೂ ಕಲಬುರಗಿ ದಕ್ಷಿಣ ಕ್ಷೇತ್ರಕ್ಕೆ ೨ ವಲಯಗಳನ್ನು ರಚಿಸುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ ;

(ಈ) ಕಲಬುರಗಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿರುವ ಅನಧಿಕೃತ ಕಟ್ಟಡಗಳೆಷ್ಟು ಹಾಗೂ ಜಾಹೀರಾತುಗಳಿಂದ ಕಳೆದ ೩ ವರ್ಷಗಳಲ್ಲಿ ಬಂದ ಆದಾಯ ಎಷ್ಟು ; (ವಾರ್ಡ್‌ವಾರು ವಿವರ ನೀಡುವುದು)

(ಉ) ಅನಧಿಕೃತ ಜಾಹೀರಾತು ಹಾಕಿದ ಪ್ರಕರಣಗಳು ಎಷ್ಟು ; ಇವುಗಳ ವಿರುದ್ಧ ಕೈಗೊಂಡ ಕ್ರಮಗಳೇನು ?

## ಕಲಬುರಗಿ ನಗರದಲ್ಲಿನ ವ್ಯವಸ್ಥೆಯ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :-**

೧೦೮೩ (೧೧೪೫) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕಲಬುರಗಿ ಸಬ್ ಅರ್ಬನ್ ಪೊಲೀಸ್ ಠಾಣೆಯನ್ನು ಸಂಪರ್ಕಿಸುವ ರಸ್ತೆ ಹಾಗೂ ನೆಹರೂ ಗಂಜ್ ಸಂಪರ್ಕಿಸುವ ರಸ್ತೆಗಳು ತಗ್ಗು

ಬಿದ್ದು ವಾಹನ ಸವಾರರು ಸಂಚರಿಸಲು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಲಬುರಗಿ ನಗರದಲ್ಲಿನ ರಸ್ತೆಗಳ ಆಡಿಟ್ ನಡೆಸಲಾಗಿದೆಯೇ ; ಆಡಿಟ್ ನಡೆಸಿದ್ದಲ್ಲಿ, ನಗರದ ರಸ್ತೆ ಅಭಿವೃದ್ಧಿಗೆ ಎಷ್ಟು ಕೋಟಿಯ ಅನುದಾನದ ಅವಶ್ಯಕತೆ ಇದೆ ;

(ಇ) ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ ಎಷ್ಟು ರಸ್ತೆಗಳನ್ನು ಹೊಸದಾಗಿ ನಿರ್ಮಿಸಲಾಗಿದೆ ಹಾಗೂ ಇದಕ್ಕೆ ವ್ಯಯಿಸಿದ ಹಣ ಎಷ್ಟು ; (ವಿವರ ನೀಡುವುದು)

(ಈ) ಕಲಬುರಗಿ ನಗರದಲ್ಲಿ ಎಸ್.ಎಫ್.ಸಿ ಯ ಅನುದಾನದಲ್ಲಿ ಯಾವ ವಿಧಾನಸಭಾ ಕ್ಷೇತ್ರದಲ್ಲಿ ರಸ್ತೆಗಳನ್ನು ಅಭಿವೃದ್ಧಿ ಪಡಿಸಲಾಗಿದೆ ; ಮತ್ತು ಎಷ್ಟು ಹಣ ಖರ್ಚು ಮಾಡಲಾಗಿದೆ ? (ವಿವರ ನೀಡುವುದು)

## ಕಲ್ಯಾಣ ಕರ್ನಾಟಕ ಪ್ರದೇಶದ ವ್ಯಾಪ್ತಿಯಲ್ಲಿ "ಕಲ್ಯಾಣ ಪಥ ಯೋಜನೆ" ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೪ (೧೧೪೬) ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ಪ್ರದೇಶದ ಗ್ರಾಮೀಣ ರಸ್ತೆಗಳ ಅಭಿವೃದ್ಧಿಗಾಗಿ ಜಿಲ್ಲೆಗಳಲ್ಲಿ ಜಾರಿಗೆ ತಂದ "ಕಲ್ಯಾಣ ಪಥ ಯೋಜನೆ" ಯನ್ನು ಯಾವ ಸಾಲಿನಲ್ಲಿ ಸರ್ಕಾರ ಘೋಷಣೆ ಮಾಡಿತ್ತು ;

(ಆ) ಕಲ್ಯಾಣ ಪಥ ಯೋಜನೆಯಡಿಯಲ್ಲಿ ಒಟ್ಟು ಎಷ್ಟು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಹಾಗೂ ಇದಕ್ಕೆ

ತಗುಲುವ ವೆಚ್ಚ ಎಷ್ಟು ; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ಹಾಗೂ ಅಪೂರ್ಣಗೊಂಡಿರುವ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ;

(ಇ) ಕೆಕೆಆರ್‌ಡಿಬಿ ಯಿಂದ ಕಲ್ಯಾಣ ಪಥ ಯೋಜನೆಗೆ ಅನುದಾನ ಮೀಸಲಿಡಲಾಗಿತ್ತೆ ; ಹಾಗಿದ್ದರೆ, ಎಷ್ಟು ಅನುದಾನವನ್ನು ಮೀಸಲಿಡಲಾಗಿತ್ತು ; ಹಾಗೂ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ;

(ಈ) ಕಲ್ಯಾಣ ಪಥ ಯೋಜನೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದೆಂದು ಸರ್ಕಾರ ಘೋಷಣೆ ಮಾಡಿದೆ ; ಸದರಿ ಯೋಜನೆ ಆಮೆಗತಿಯಲ್ಲಿ ಸಾಗುತ್ತಿರುವುದು ಈ ಭಾಗದ ಜನರ ಅಸಮಾಧಾನಕ್ಕೆ ಕಾರಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಯೋಜನೆ ವೇಗ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ಬೆಂಗಳೂರಿನ ನೈಸ್ ರಸ್ತೆಯ ಟೋಲ್ ಸುಂಕ ವಸೂಲಾತಿ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೦೮೫ (೧೧೮೪) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದ ಹೊರವಲಯದಲ್ಲಿ ನಿರ್ಮಾಣವಾಗಿರುವ ನೈಸ್ ರಸ್ತೆಗೆ ಸರ್ಕಾರ ಸಾರ್ವಜನಿಕರ ವಾಹನಗಳಿಗೆ ಟೋಲ್ ಸುಂಕ ದರವನ್ನು ವಸೂಲಿ ಮಾಡಲು ಯಾವ ವರ್ಷದಿಂದ ಅನುಮತಿ ನೀಡಿದೆ ;

(ಆ) ನೈಸ್ ರಸ್ತೆ ನಿರ್ಮಾಣವಾದ ಆರಂಭ ವರ್ಷದಲ್ಲಿ ಯಾವ ಯಾವ ವಾಹನಗಳಿಗೆ ಟೋಲ್ ಸುಂಕ ದರವನ್ನು ನಿಗದಿಮಾಡಲಾಗಿದೆ ; ಇಲ್ಲಿವರೆಗೂ ದರ ಎಷ್ಟು ಬಾರಿ ಪರಿಷ್ಕರಣೆಯಾಗಿದೆ ; (ವಿವರ ನೀಡುವುದು)

(ಇ) ನೈಸ್ ಟೋಲ್ ಸಂಗ್ರಹವನ್ನು ಎಷ್ಟು ವರ್ಷದ ಅವಧಿಗೆ ಸಂಗ್ರಹಿಸಲು ಸರ್ಕಾರ ಅನುಮತಿ ನೀಡಿದೆ ; ಅವಧಿ ಮುಗಿದ ನಂತರ ಟೋಲ್ ದರವನ್ನು ಸಂಗ್ರಹ ಮಾಡದಂತೆ ನ್ಯಾಯಾಲಯದ ಆದೇಶವಾಗಿದೆಯೇ ; ಆಗಿದ್ದಲ್ಲಿ, ಇದು ಜಾರಿಯಾಗಿದೆಯೇ ?

## ಸಿವಿಲ್ ಪೊಲೀಸ್ ನೇಮಕಾತಿಯ ಪರೀಕ್ಷೆಯ ಬಗ್ಗೆ

**ಶ್ರೀ ಕೆ. ವಿವೇಕಾನಂದ (ಶಿಕ್ಷಕರ ಕ್ಷೇತ್ರ) :–**

೧೦೮೬ (೧೧೮೫) ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ–ಆಡಳಿತ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯಾದ್ಯಂತ ಸಿವಿಲ್ ಪೊಲೀಸ್ ಹುದ್ದೆಗೆ ಅರ್ಜಿ ಹಾಕಿದವರ ಸಂಖ್ಯೆ ಎಷ್ಟು; ಅವರಲ್ಲಿ ಪರೀಕ್ಷೆಗೆ ಹಾಜರಾದವರ ಸಂಖ್ಯೆ ಎಷ್ಟು; (ವಿವರ ನೀಡುವುದು)

(ಆ) ಕೆಲವಡೆ ಪರೀಕ್ಷೆ ಅರ್ಧಗಂಟೆ ವಿಳಂಬವಾಗಿ ಆರಂಭವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದಕ್ಕೆ ಕಾರಣವೇನು ;

(ಇ) ಕೆಲವು ಪರೀಕ್ಷಾ ಕೇಂದ್ರಗಳಲ್ಲಿ ಓಎಂಆರ್ ಶೀಟ್ ಕೆಲವಡೆ ಬದಲಾವಣೆಯಾಗಿದೆಯೇ ; ಪರೀಕ್ಷಾ ವಿಳಂಬದಿಂದ ಪ್ರಶ್ನೆಪತ್ರಿಕೆ ಏನಾದರು ಲೀಕ್ ಆಗಿದೆಯೇ ;

(ಈ) ಕೆಲವೆಡೆ ಪರೀಕ್ಷಾ ಗೊಂದಲ ಏರ್ಪಟ್ಟಿದ್ದರಿಂದ ಯಾರನ್ನು ಜವಬ್ದಾರರನ್ನಾಗಿ ಮಾಡಲಾಗಿದೇ ?

# ಬೆಂಗಳೂರು ನಗರದಲ್ಲಿನ ನಿರುಪಯುಕ್ತ ಕೊಳವೆ ಬಾವಿಗಳನ್ನು ಮಳೆ ನೀರು ಕೊಯ್ಲು ಘಟಕಗಳನ್ನಾಗಿ ಮಾರ್ಪಾಟು ಮಾಡುವ ಬಗ್ಗೆ

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೭ (೧೧೫೦) ಮಾನ್ಯ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರದಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು; (ವಾರ್ಡ್‌ವಾರು ಕೊರೆದ ವರ್ಷದ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಸದರಿ ಕೊಳವೆ ಬಾವಿಗಳಲ್ಲಿ ನೀರು ಬರುತ್ತಿರುವ ಮತ್ತು ನೀರಿಲ್ಲದ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ; (ವಿವರಗಳನ್ನು ಒದಗಿಸುವುದು)

(ಇ) ಸದರಿ ನೀರಿಲ್ಲದ ಕೊಳವೆ ಬಾವಿಗಳನ್ನು ಮಳೆ ನೀರು ಕೊಯ್ಲು ಘಟಕಗಳನ್ನಾಗಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಈ) ಬೆಂಗಳೂರು ನಗರದಲ್ಲಿ ಸರ್ಕಾರಿ ಜಾಗ ಉದ್ಯಾನವನ ಹಾಗೂ ಇತರ ಸ್ಥಳಗಳಲ್ಲಿ ಮಳೆ ನೀರಿನ ಕೊಯ್ಲು ಘಟಕಗಳನ್ನಾಗಿ ಮಾಡಲು ಸರ್ಕಾರದ ಕ್ರಮಗಳೇನು ? (ಮಾಹಿತಿ ಒದಗಿಸುವುದು)

# ಬಳ್ಳಾರಿ ಮತ್ತು ಹೊಸಪೇಟೆ ನಗರಸಭೆಯ ವ್ಯಾಪ್ತಿಯಲ್ಲಿ ರಾಜ ಕಾಲುವೆ ಒತ್ತುವರಿ ಕುರಿತು

**ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೮ (೧೧೫೧) ಮಾನ್ಯ ನಗರಾಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಳ್ಳಾರಿ ಮಹಾನಗರ ಪಾಲಿಕೆ ವ್ಯಾಪ್ತಿ ಮತ್ತು ವಿಜಯನಗರ ಜಿಲ್ಲೆಯ ಹೊಸಪೇಟೆ ನಗರಸಭೆಯ ವ್ಯಾಪ್ತಿಯಲ್ಲಿ ರಾಜ ಕಾಲುವೆ ಒತ್ತುವರಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜಕಾಲುವೆ ಒತ್ತುವರಿಯಾದಲ್ಲಿ, ಒಟ್ಟು ಒತ್ತುವರಿಯಾದ ವಿಸ್ತೀರ್ಣ ಎಷ್ಟು ;

(ಇ) ರಾಜಕಾಲುವೆ ಒತ್ತುವರಿಯಾಗಿದ್ದಲ್ಲಿ, ಒತ್ತುವರಿಯಾದ ಜಾಗ ತೆರೆವುಗೊಳಿಸಲು ಸರ್ಕಾರದಿಂದ ಯಾವ ಕಾಲಮಿತಿಯಲ್ಲಿ ಕ್ರಮ ಜರುಗಿಸಲಾಗುವುದು ;

(ಈ) ರಾಜಕಾಲುವೆ ಒತ್ತುವರಿಯಲ್ಲಿ ತೆರವುಗೊಳಿಸಿದ ಒಟ್ಟು ಒತ್ತುವರಿಯಾದ ವಿಸ್ತೀರ್ಣ ಎಷ್ಟು ? (ವಿವರಗಳೊಂದಿಗೆ ಸಂಪೂರ್ಣ ಮಾಹಿತಿ ಒದಗಿಸುವುದು)

## ಸ್ಥಳೀಯ ಯೋಜನಾ ಪ್ರದೇಶಗಳ ಹೊರಗಿನ (LPA) ಗ್ರಾಮೀಣ ಪ್ರದೇಶಗಳಲ್ಲಿ ಸಮಗ್ರ ಯೋಜನೆ (Master Plan) ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೦೮೯ (೧೦೮೧) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸ್ಥಳೀಯ ಯೋಜನಾ ಪ್ರದೇಶ (LPA) ಘೋಷಿಸದ ಗ್ರಾಮೀಣ ಪ್ರದೇಶಗಳಲ್ಲಿ ಪ್ರಕರಣ 4-K ಅಡಿಯಲ್ಲಿ ಪ್ರತ್ಯೇಕ ಬಡಾವಣೆ ನಕ್ಷೆ ಅನುಮೋದನೆ ನೀಡುತ್ತಿರುವಾಗ ಸಮಗ್ರ ಭೂಯೋಜನೆ

(Master Plan) ಇಲ್ಲದ ಕಾರಣ ರಸ್ತೆ, ಒಳಚರಂಡಿ, ಮಳೆನೀರು ಹರಿವು, ಕುಡಿಯುವ ನೀರು, ಪಾರ್ಕ್ ಹಾಗೂ ಸಾರ್ವಜನಿಕ ಸೌಲಭ್ಯಗಳ ಭವಿಷ್ಯದ ಅಗತ್ಯವನ್ನು ಪರಿಗಣಿಸಲಾಗದೆ ಯೋಜನಾ ರಹಿತ ಅಭಿವೃದ್ಧಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಭೂಪರಿವರ್ತನೆ ಮಾಡುವಾಗ ಭೂಮಾಪಕರಿಂದ ಭೂನಕ್ಷೆ ಪಡೆದ ತರುವಾಯ 4-K ಅಡಿಯಲ್ಲಿ ಪ್ರತ್ಯೇಕ ಬಡಾವಣೆ ನಕ್ಷೆ ಅನುಮೋದನೆ ನೀಡುತ್ತಿರುವಾಗ ಮತ್ತೊಮ್ಮೆ ಭೂಮಾಪಕರಿಂದ ಭೂನಕ್ಷೆ ಅಪೇಕ್ಷಿಸುತ್ತಿರುವುದರಿಂದ ನಾಗರಿಕರಿಗೆ ಹೊರೆಯಾಗುತ್ತಿದ್ದು, ಈ ಕುರಿತು ರಾಜ್ಯದಲ್ಲಿ ಏಕರೂಪತೆ ತರಲಾಗುವುದೇ ;

(ಇ) ಸಾರ್ವಜನಿಕ ರಸ್ತೆ ಇಲ್ಲದಿರುವುದು, ರಸ್ತೆ ಮಾರ್ಜಿನ್/ಅಗಲ, ಈಗಾಗಲೇ ಕಟ್ಟಡವಿರುವುದು ಸಮಸ್ಯೆಗಳಿಂದ Single Site ಕಡತಗಳನ್ನು ತಿರಸ್ಕರಿಸುವ ಬದಲು ಕಂದಾಯ, ಪಂಚಾಯತ್ ರಾಜ್, ನಗರಾಭಿವೃದ್ಧಿ, ಲೋಕೋಪಯೋಗಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆಗಳ ಸಮನ್ವಯದ ಮೂಲಕ ಪರಿಹಾರ ಕಲ್ಪಿಸಲಾಗಿದೆಯೇ ;

(ಈ) ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರ ಕನ್ನಡ ಸೇರಿದಂತೆ ವೇಗವಾಗಿ ಬೆಳೆಯುತ್ತಿರುವ ಪ್ರದೇಶಗಳಿಗೆ GIS ಆಧಾರಿತ ೨೦–೩೦ ವರ್ಷಗಳ ಸಮಗ್ರ ಭೂಯೋಜನೆ ರೂಪಿಸಿ ರಸ್ತೆ, ಚರಂಡಿ,

ನೀರು, ಸಾರ್ವಜನಿಕ ಸೌಲಭ್ಯ, ಹಸಿರು ವಲಯ ಹಾಗೂ ಪರಿಸರ ನಿರ್ಬಂಧಗಳನ್ನು ಗುರುತಿಸಲು ಸರ್ಕಾರ ಕಾಲಮಿತಿಯ ಯೋಜನೆ ರೂಪಿಸುವುದೇ ;

(ಉ) ಪ್ರಕರಣ 4-K ಅನ್ನು ಕೇವಲ ವೈಯಕ್ತಿಕ ಜಮೀನು ಅನುಮತಿ ವ್ಯವಸ್ಥೆಯಾಗಿ ಉಳಿಸದೆ "ಮೊದಲು ಸಮಗ್ರ ಯೋಜನೆ–ನಂತರ ಅಭಿವೃದ್ಧಿ ಅನುಮತಿ" ನೀತಿಯಡಿ ಹಾಗೂ ತಿರಸ್ಕೃತ ಕಡತಗಳಿಗೆ ಜಿಲ್ಲಾವಾರು ಶಾಶ್ವತ ಪರಿಹಾರ ರೂಪಿಸಲು ಏಕ ಗವಾಕ್ಷಿ ವ್ಯವಸ್ಥೆ ಜಾರಿಗೊಳಿಸುವುದೇ ?

**ಜ್ಯೋತಿ**
ಕಾರ್ಯದರ್ಶಿ (ಪ್ರ)
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O-65/500 ಪ್ರತಿಗಳು/21–08–2026